
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Manasagangotri, Mysore - 570 006

## ಎಂ.ಎ. (ಪ್ರಥಮ)

# ಸಮಾಜಶಾಸ್ತ್ರ




**ಕೋರ್ಸ್ : II ಸಾಮಾಜಿಕ ಸ್ಥಿತಿ ಶಾಸ್ತ್ರ ಮತ್ತು ಸಾಮಾಜಿಕ ಗತಿಶಾಸ್ತ್ರ ಬ್ಲಾಕ್ : 7**

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

**ರಾಷ್ಟ್ರೀಯ ಶಿಕ್ಷಣ ನೀತಿ 1986**

*The Open University System has been initiated in order to augment opportunities for higher education and as instrument of democrating education.*

*National Educational Policy 1986*

---

**ವಿಶ್ವ ಮಾನವ ಸಂದೇಶ**

ಪ್ರತಿಯೊಂದು ಮಗುವು ಹುಟ್ಟುತ್ತಲೇ – ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು 'ಅಲ್ಪ ಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಮನುಜ ಮತ, ವಿಶ್ವ ಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜ ಮತ. ಆ ಪಥ ಈ ಪಥ ಅಲ್ಲ ; ವಿಶ್ವ ಪಥ. ಆ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಸಂಕುಚಿತ ಮತದ ಆಂಶಿಕ ದೃಷ್ಟಿ ಅಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನದೃಷ್ಟಿ ಅಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

**ಕುವೆಂಪು**

---

## *Gospel of Universal Man*

Every Child, at birth, is the universal man. But, as it grows, we trun it into "a petty man". It should be the function of education to turn it again into the enlightened "universal man".

The Religion of Humanity, the Universal Path, the Welfare of All, Reconciliation, the Integral Vision - these ***five mantras*** should become View of the Future. In other words, what we want henceforth is not this religion or that religion, but the Religion of Humanity; not this path or that path, but the Universal Path; not the well-being of this individual or that individual, but the Welfare of All; not turning away and breaking off from one another, but reconciling and uniting in concord and harmony; and above all, not the partial view of a narrow creed, not the dual outlook of the material and the spiritual, but the Integral Vision of seeing all things with the eye of the Divine.

*Kuvempu*

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು – 570 006

# ಸಮಾಜಶಾಸ್ತ್ರ

ಕೋರ್ಸ್ – 2 ಸಾಮಾಜಿಕ ಸ್ಥಿತಿಶಾಸ್ತ್ರ ಮತ್ತು ಸಾಮಾಜಿಕ ಗತಿಶಾಸ್ತ್ರ

## ಬ್ಲಾಕ್

# 7

ದೂರ ಶಿಕ್ಷಣಾರ್ಥಿಯೊಡನೆ ಒಂದು ಮಾತು

ಘಟಕ – 25
ಆಧುನೀಕರಣ 1 - 18

ಘಟಕ–26
ಭಾರತದಲ್ಲಿ ಆಧುನೀಕರಣ 19 - 29

ಘಟಕ –27
ಸಾಮಾಜಿಕ ಆಧುನೀಕರಣದ ಸಮಸ್ಯೆಗಳು 30 - 40

ಘಟಕ –28
ಆಧುನೀಕರಣದ ಅಡಚಣೆಗಳು 41 - 55

ಪಠ್ಯಕ್ರಮ ವಿನ್ಯಾಸ ಮಂಡಳಿ

**ಪ್ರೊ. ಕೆ.ಎಸ್. ರಂಗಪ್ಪ**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಜಗದೀಶ**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಚ್. ಎಲ್. ವೆಂಕಟೇಶ್**
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ, ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–6

ವಿಷಯ ಸಂಯೋಜಕ

**ಎನ್. ದೊಡ್ಡಸಿದ್ದಯ್ಯ**
ಅಧ್ಯಾಪಕರು (ಆಯ್ಕೆಶ್ರೇಣಿ)
ಸಮಾಜಶಾಸ್ತ್ರ ಅಧ್ಯಯನ ಮುಖ್ಯ ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–6

**ಸಂಯೋಜಕರು**
**ಕೋರ್ಸ್ – II**

**ಪಠ್ಯಕ್ರಮ ನಿರೂಪಕರು**

**ಡಾ. ಬಿ.ಎಸ್. ಸುರೇಶ್‌ಕುಮಾರ್**
ಸಮಾಜಶಾಸ್ತ್ರ ಪ್ರವಾಚಕರು (ನಿವೃತ್ತ)
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–570 006

ಬ್ಲಾಕ್–7
ಘಟಕಗಳು 25, 26, 27 ಮತ್ತು 28

**ಪ್ರಕಾಶಕರು**

ಕುಲಸಚಿವರು (ಆಡಳಿತ)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ –

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕೋರ್ಸ್ (ಪಠ್ಯಕ್ರಮ)ಗಳ ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸಗಂಗೋತ್ರಿ, ಮೈಸೂರು–6 ಇಲ್ಲಿಂದ ಪಡೆಯಬಹುದು.

## ಪುಸ್ತಿಕೆ (ಬ್ಲಾಕ್) -7 : ಪರಿಚಯ

# ದೂರ ಶಿಕ್ಷಣಾರ್ಥಿಯೊಡನೆ ಒಂದು ಮಾತು

ಪ್ರಿಯ ಶಿಕ್ಷಣಾರ್ಥಿ,

ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ನಿಮ್ಮನ್ನು ಹಾರ್ದಿಕವಾಗಿ ಸ್ವಾಗತಿಸುವುದಕ್ಕೆ ನನಗೆ ಅತೀವ ಸಂತೋಷವಾಗುತ್ತದೆ. ಈ ಗಳಿಗೆಯಲ್ಲಿ ನಿಮ್ಮ ಕೈಯಲ್ಲಿರುವ ಪುಸ್ತಿಕೆ (ಬ್ಲಾಕ್), ಎಂ.ಎ (ಪ್ರಥಮ) ಸಮಾಜಶಾಸ್ತ್ರ ಕಾರ್ಯಕ್ರಮದಲ್ಲಿ ಸಾಮಾಜಿಕ ಸ್ಥಿತಿಶಾಸ್ತ್ರ ಮತ್ತು ಸಾಮಾಜಿಕ ಗತಿಶಾಸ್ತ್ರ ಎನ್ನುವ ಶೀರ್ಷಿಕೆಯುಳ್ಳ ಪಠ್ಯಕ್ರಮ (ಕೋರ್ಸ್) -II ಕ್ಕೆ ಸಂಬಂಧಿಸಿದೆ.

ಈ ಪುಸ್ತಿಕೆಯು ಆಧುನೀಕರಣ, ಸಂಸ್ಕೃತಿ, ಭಾರತದಲ್ಲಿ ಆಧುನೀಕರಣ, ಆಧುನೀಕರಣದ ಅಡಚಣೆಗಳು ಮತ್ತು ....... ಘಟಕಗಳನ್ನು ಒಳಗೊಂಡಿದ್ದು ಇದು ಸಮಾಜಶಾಸ್ತ್ರಜ್ಞರ ಅಂತರಂಗದ ಸತ್ವವನ್ನು ಅಭಿವೃದ್ಧಿಗೊಳಿಸುವುದನ್ನು ಗುರಿಯಾಗುಳ್ಳ ಒಂದು ಸವಾಲಾದ ಹಾಗೂ ರೋಮಾಂಚನಕಾರಿಯಾದ ಶೈಕ್ಷಣಿಕ ಪ್ರಯೋಗವಾಗಿದೆ. ಮುದ್ರಿತ ಪುಸ್ತಿಕೆ(ಬ್ಲಾಕ್)ಯ ಮೂಲಕ ಪದ ಪದವನ್ನೂ ಸಕ್ರಿಯವಾಗಿ ಅಭ್ಯಾಸ ಮಾಡುವಂತೆ ನಾನು ನಿಮ್ಮನ್ನು ಆಹ್ವಾನಿಸುತ್ತೇನೆ. ಸ್ವಯಂ-ಬೋಧಿನಿ ಪಾಠಗಳ ಪ್ರತಿಯೊಂದು ಉಪಘಟಕದ ಕೊನೆಯಲ್ಲಿ ನೀವು ಅಭ್ಯಾಸವನ್ನು ನಿಲ್ಲಿಸಬೇಕು ಮತ್ತು ನೀವು ಯಾವ ಬಗೆಯಲ್ಲಿ ಜ್ಞಾನವನ್ನು ಸಂಪಾದಿಸಿದ್ದೀರಿ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು. ಅನಂತರ ಮುಂದಿನ ಉಪಘಟಕವನ್ನು ಅಭ್ಯಾಸ ಮಾಡಬೇಕು. ಈ ಘಟಕಗಳು ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ದಶಕಗಳ ಬೋಧನಾನುಭವವುಳ್ಳ ಸಮಾಜಶಾಸ್ತ್ರ ತಜ್ಞರಿಂದ ರಚಿತವಾಗಿವೆ. ನಿಮ್ಮ ನಿಧಾನ ವ್ಯಾಸಂಗ ಪ್ರಕ್ರಿಯೆಯಲ್ಲಿ ನೀವು ತನ್ಮಯತೆಯಿಂದ ಬೌದ್ಧಿಕವಾಗಿ ಸಂವಹನಗೊಳ್ಳದ ಹೊರತು, ಈ ಸ್ವಯಂ-ಬೋಧಿನಿ ಪಾಠಗಳ ಈ ಪುಸ್ತಿಕೆ(ಬ್ಲಾಕ್)ಯು ತನ್ನ ಧ್ಯೇಯವನ್ನು ಸಾಧಿಸಲಾರದು ಎಂದು ನಾನು ನಿಮ್ಮನ್ನು ಎಚ್ಚರಿಸಬೇಕಾಗಿದೆ.

ನೀವು ಪ್ರಜ್ಞಾಪೂರ್ವಕವಾಗಿ ಎಲ್ಲ ಘಟಕಗಳ ಕೊನೆಯಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕು ಮತ್ತು ಹೆಚ್ಚಿನ ವ್ಯಾಸಂಗಕ್ಕಾಗಿ ಶಿಫಾರಸ್ಸು ಮಾಡಲಾದ ಗ್ರಂಥಗಳನ್ನು ಅಧ್ಯಯನ ಮಾಡಬೇಕು. ಈ ಸಲಹೆಯ ಅಭ್ಯಾಸಗಳನ್ನು ನೀವು ಕಾರ್ಯರೂಪಕ್ಕೆ ತಾರದೆ, ಸ್ವಯಂ-ಬೋಧಿನಿ ಪಾಠಗಳ(ಸಿಮ್) ಮೂಲಕ ಕೇವಲ ವ್ಯಾಸಂಗವು ತೃಪ್ತಿದಾಯಕವಾಗಲಾರದು. ತಮ್ಮ ಸಂಯೋಜಕತ್ವದಲ್ಲಿ ಕೋರ್ಸ್ -II ಕ್ಕೆ ಸಂಬಂಧಿಸಿದ ಬ್ಲಾಕ್‌ಗಳ ಕರಡಚ್ಚು ಪ್ರತಿಗಳನ್ನು ಪರಿಶೀಲಿಸಿ, ತಿದ್ದಿ, ಪರಿಷ್ಕರಿಸಿ ಅಂತಿಮವಾಗಿ ಅವುಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿರುವ ಎನ್. ದೊಡ್ಡಸಿದ್ದಯ್ಯನವರಿಗೆ ನಾನು ಆಭಾರಿಯಾಗಿದ್ದೇನೆ.

ನಾನು ನಿಮಗೆ ಎಲ್ಲ ಯಶಸ್ಸನ್ನು ಕೋರುತ್ತೇನೆ.

*ವಂದನೆಗಳು*

ಕೋರ್ಸ್ ಸಂಯೋಜಕರು

ಎನ್. ದೊಡ್ಡಸಿದ್ದಯ್ಯ
ಅಧ್ಯಾಪಕರು, (ಆಯ್ಕೆಶ್ರೇಣಿ)
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು - 6

ತಮ್ಮ ವಿಶ್ವಾಸಿ
ಡಾ. ಹೆಚ್.ಎಲ್. ವೆಂಕಟೇಶ್
ಮುಖ್ಯಸ್ಥ
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

# ಕೋರ್ಸ್ ಸಂಯೋಜಕರ ದೃಢೀಕರಣ

ಈ ಕೋರ್ಸ್‌ನಲ್ಲಿನ ಪಾಠಗಳ ನಿಖರತೆ, ವ್ಯಾಕರಣ, ಮಾಹಿತಿ, ವಸ್ತು ವಿಷಯದ ಖಚಿತತೆಯ ಬಗ್ಗೆ ಈ ಕೋರ್ಸ್‌ನ ಸಂಯೋಜಕನಾಗಿ ನಾನು, ಮತ್ತು ಸಿಮ್ ಸಿದ್ಧಪಾಠಗಳ ಲೇಖಕರು ಜವಾಬ್ದಾರರಾಗಿರುತ್ತಾರೆ.

**ಕೋರ್ಸ್ ಸಂಯೋಜಕರು**

**ಶ್ರೀ ಟಿ.ನಾಗರಾಜು**
ಪ್ರವಾಚಕರು,
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
**ಮೈಸೂರು-06**

# ಘಟಕ : 25 ಆಧುನೀಕರಣ

ರಚನೆ

25.0 ಉದ್ದೇಶಗಳು

25.1 ಪರಿಚಯ

25.2 ಆಧುನೀಕರಣ

25.3 ಅರ್ಥ

25.4 ಲಕ್ಷಣಗಳು

25.5 ಆಧುನೀಕರಣದ ಕ್ಷೇತ್ರಗಳು

25.6 ಚಲನಾ ವ್ಯಕ್ತಿತ್ವದ ಪರಿಕಲ್ಪನೆ

25.7 ಅನುಭೂತಿ ಶಕ್ತಿ

25.8 ಸಾರಾಂಶ

25.9 ಪ್ರಮುಖ ಪದಗಳು

25.10 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

25.11 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

25.12 ಸಲಹಾ ಗ್ರಂಥಗಳು

## 25.0 ಉದ್ದೇಶಗಳು

ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳಂತೆ ಸಮಾಜಶಾಸ್ತ್ರವು ಸತ್ಯಾಸತ್ಯತೆಯನ್ನು ಕುರಿತು ಅಧ್ಯಯನ ಮಾಡುತ್ತದೆ. ಆದುದರಿಂದ ಈಗ ನಮ್ಮ ಮುಂದಿರುವ ಪ್ರಶ್ನೆ ಎಂದರೆ ಸತ್ಯಾಂಶವನ್ನು ತಿಳಿದುಕೊಳ್ಳುವ ಪ್ರಯತ್ನ. ಸಮಾಜ -ಮಾನವ ಗುಂಪುಗಳು ಮತ್ತು ಇತರೆ ಸಂಬಂಧಗಳನ್ನು ಅರಿಯುವುದೇ ಆಗಿದೆ.

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನಿಮಗೆ ಕೆಳಕಂಡ ಅಂಶಗಳು ಅಧ್ಯಯನ ವ್ಯಕ್ತವಾಗುತ್ತವೆ.

- ಆಧುನೀಕರಣದ ಅರ್ಥವನ್ನು ತಿಳಿದುಕೊಳ್ಳುವುದು.
- ಸಾಮಾಜಿಕ ಬದಲಾವಣೆಯ ದಿಕ್ಸೂಚಿಯಾದ ಆಧುನೀಕರಣ ಮತ್ತು ಸಾಮಾಜಿಕ ಬದಲಾವಣೆಯನ್ನು ಕುರಿತು ಅಧ್ಯಯನ ಮಾಡುವುದು.
- ಆಧುನೀಕರಣದ ವಿವಿಧ ಕಲ್ಪನೆಗಳು ಮತ್ತು ಪಾಶ್ಚಿಮಾತ್ಯ ದೃಷ್ಟಿಯನ್ನು ತಿಳಿಯುವುದು.
- ಹೇಗೆ ಆಧುನೀಕರಣವು ರಚನಾತ್ಮಕ ಬದಲಾವಣೆಯನ್ನು ತರುತ್ತದೆ ಎಂಬುದರ ಬಗ್ಗೆ ಅರಿವನ್ನುಂಟು ಮಾಡುವುದು.
- ಆಧುನೀಕರಣದ ಲಕ್ಷಣಗಳು ಮತ್ತು ಆಧುನೀಕರಣದ ಕ್ಷೇತ್ರಗಳನ್ನು ಅಭ್ಯಸಿಸುವುದು ಮತ್ತು
- ಚಲನಾತ್ಮಕ ವ್ಯಕ್ತಿತ್ವ ಮತ್ತು ಅನುಭೂತಿ ಶಕ್ತಿಗಳು ಆಧುನೀಕರಣವನ್ನು ಹೆಚ್ಚಿಸುತ್ತವೆ ಎಂಬ ವಿಷಯಗಳನ್ನು ಕುರಿತು ಅಧ್ಯಯನ ಮಾಡಬಹುದು.

## 25.1 ಪರಿಚಯ

ಹಿಂಗಿನ ಘಟಕದಲ್ಲಿ ನೀವು ಭಾರತದ ಆರ್ಥಿಕ ಅಭಿವೃದ್ಧಿ, ಆರೋಗ್ಯ ಮತ್ತು ಅಭಿವೃದ್ಧಿ, ವ್ಯವಸ್ಥಾಪಕತ್ವ ಮತ್ತು ಅಭಿವೃದ್ಧಿ, ಪ್ರಾದೇಶಿಕ ಅಸಮಾನತೆ ಮತ್ತು ಅಭಿವೃದ್ಧಿ, ಬಡತನ ಮತ್ತು ಅಭಿವೃದ್ಧಿಯನ್ನು ಅಧ್ಯಯನ ಮಾಡಿದ ತರುವಾಯ ಈ ಘಟಕದಲ್ಲಿ ಆಧುನೀಕರಣದ ಕಲ್ಪನೆ, ಅದರ ಕ್ಷೇತ್ರಗಳು, ಚಲನಾ ವ್ಯಕ್ತಿತ್ವ ಮತ್ತು ಅನುಭೂತಿ ಶಕ್ತಿಯನ್ನು ಅಧ್ಯಯನ ಮಾಡಲಿದ್ದೀರಿ.

## 25.2 ಆಧುನೀಕರಣ

ಆಧುನೀಕರಣವು ಮೂಲಭೂತವಾಗಿ ಸಾಮಾಜಿಕ ಪರಿವರ್ತನೆ ಪ್ರಕ್ರಿಯೆಗೆ ಸಂಬಂಧಪಟ್ಟ ಪರಿಕಲ್ಪನೆಯಾಗಿದೆ. ಪರಿವರ್ತನೆ ಪ್ರಕೃತಿಯ ಒಂದು ನಿಯಮ ವಿಶ್ವದ ಎಲ್ಲವೂ ಬದಲಾಗುತ್ತದೆ. ಇದು ಪರಸ್ಪರ ಅಂತಃಕ್ರಿಯೆ ಅಥವಾ ಒಡನಾಟದಲ್ಲಿ ತೊಡಗಿರುವ ವ್ಯಕ್ತಿಗಳಿಂದ ಕೂಡಿದ ಎಲ್ಲ ಮಾನವ ಸಮಾಜಗಳಿಗೂ ಅನ್ವಯಿಸುತ್ತದೆ. ಪ್ರತಿ ಮಾನವ ಸಮಾಜದ, ಅಸಮಾಜ ಪ್ರಾಚೀನವಾಗಿರಬಹುದು ಇಲ್ಲವೇ ಆಧುನಿಕವಾಗಿರಬಹುದು, ಎಲ್ಲ ಪ್ರಕಾರಗಳಲ್ಲೂ ಪರಿವರ್ತನೆ ಉಂಟಾಗುತ್ತದೆ. "ಯಾರೇ ಆಗಲಿ ಒಂದೇ ನದಿಗೆ ಎರಡು ಬಾರಿ ಧುಮುಕಲಾರರು" ಎಂದು ಪರಿವರ್ತನೆಯ ತತ್ವಶಾಸ್ತ್ರೀಯ ದೃಷ್ಟಿಕೋನ ಸೂಚಿಸುತ್ತದೆ. ಸಮಾಜಶಾಸ್ತ್ರಜ್ಞರು ಸಾಮಾಜಿಕ ಪರಿವರ್ತನೆಯ ದಿಸೆ (direction) ಯನ್ನು ಕಂಡುಕೊಳ್ಳಲು ಹೆಚ್ಚು ಆಸಕ್ತಿ ತೋರುತ್ತಾರೆ. ಸಮಾಜದಲ್ಲಿ ಸಂಭವಿಸುವ ಪರಿವರ್ತನೆಗಳು ಅದನ್ನು ಯಾವ ದಿಸೆ ಅಥವಾ ದಿಕ್ಕಿನಲ್ಲಿ ಕೊಂಡೊಯ್ಯುತ್ತವೆ ಎಂಬುದು ಅವರು ಮುಖ್ಯವಾಗಿ ಕೇಳುವ ಪ್ರಶ್ನೆಯಾಗಿದೆ. ಈ ರೀತಿಯಲ್ಲಿ ಆಧುನೀಕರಣ ಪ್ರಕ್ರಿಯೆಗೆ ಸಾಮಾಜಿಕ ಪರಿವರ್ತನೆಯ ಒಂದು ಸೈದ್ಧಾಂತಿಕ ದೃಷ್ಟಿಕೋನವಾಗಿ ಹೆಚ್ಚಿನ ಮಹತ್ವವಿದೆ. ಸಮಾಜ ಪ್ರತಿ ಪ್ರಕಾರದಲ್ಲೂ ಉಂಟಾಗುವ ಬದಲಾವಣೆಯ ಸಂಕೀರ್ಣ ಸ್ವರೂಪವನ್ನು ಸೂಚಿಸಲು ಆಧುನೀಕರಣ ಪರಿಕಲ್ಪನೆಯನ್ನು ಬಳಸುತ್ತಾರೆ.

- **ಆಧುನೀಕರಣ ಪರಿಕಲ್ಪನೆ : The Concept of Modernization**

ಆಧುನೀಕರಣವು ಪಾಶ್ಚಿಮಾತ್ಯ ಸಮಾಜಗಳಲ್ಲಿ ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನಗಳ ಅವಧಿಯಲ್ಲಿ ಸಂಭವಿಸುತ್ತಿದ್ದ ಪರಿವರ್ತನೆಗಳನ್ನು ತಿಳಿಸಲು ಬಹಳ ವ್ಯಾಪಕವಾದ ಮತ್ತು ಒಂದು ಬಗೆಯಲ್ಲಿ ಲಘುವಾದ ಅರ್ಥದಲ್ಲಿ ಬಳಸಲ್ಪಡುತ್ತಿರುವ ಪದವಾಗಿ

ಆದರೆ ಇದನ್ನು ಬಳಸುವವರ ಉದ್ದೇಶ, ದೃಷ್ಟಿಕೋನ ಮತ್ತು ತಿಳುವಳಿಕೆಯಲ್ಲಿ ವೈವಿಧ್ಯತೆ ಇರುವುದರಿಂದ ಈ ಪದದ ಅರ್ಥದಲ್ಲಿ ಒಂದು ಬಗೆಯ ಗೊಂದಲ ಮತ್ತು ಅಸ್ಪಷ್ಟತೆಗಳು ಕಂಡು ಬರುತ್ತವೆ.

ಆಧುನೀಕರಣವು ಸ್ಪಷ್ಟವಾಗಿ ರೂಪುಗೊಂಡ ಮೌಲ್ಯಗಳಿಂದ ಕೂಡಿದ ತತ್ವಸಿದ್ಧಾಂತವಾಗಲೀ ಅಥವಾ ಚಳವಳಿಯಾಗಲೀ ಆಗಿಲ್ಲ. ಈ ಪರಿಕಲ್ಪನೆಯು ಸಮಾಜದ ಆರ್ಥಿಕ, ರಾಜಕೀಯ, ಶಿಕ್ಷಣ, ವಾಣಿಜ್ಯ - ವ್ಯಾಪಾರಗಳನ್ನು ಒಳಗೊಳ್ಳುವ ಪದವಾ..ದೆ. ಹಿಂದೆ ಆರ್ಥಿಕ ವ್ಯವಸ್ಥೆ ಮತ್ತು ಅದಕ್ಕೆ ಸಂಬಂಧಿಸಿದ ಸಾಮಾಜಿಕ ಮೌಲ್ಯಗಳು ಮತ್ತು ಆಚರಣೆಗಳಲ್ಲಿ ಘಟಿಸುವ ಪರಿವರ್ತನೆಗಳನ್ನು ಸೂಚಿಸಲು ಈ ಪರಿಕಲ್ಪನೆಯನ್ನು ಬಳಸಲಾಗುತ್ತಿದ್ದಿತು. ಇದನ್ನು ಪ್ರಮುಖವಾಗಿ ಅದರ ಕೃಷಿ ಆಧಾರಿತ ಆರ್ಥಿಕತೆಯಿಂದ ಕೈಗಾರಿಕಾ ಆಧಾರಿತ ಆರ್ಥಿಕತೆಗೆ ಬದಲಾಯಿಸುವ ಪ್ರಕ್ರಿಯೆ ಎಂದು ವರ್ಣಿಸಲಾಗಿದೆ. ಆಧುನೀಕರಣ ಒಂದು ಸಾಮಾಜಿಕ ವಾಸ್ತವತೆ ಎಂದು ಭಾವಿಸುವ ಡೇನೀಯಲ್ ಲರ್ನರ್‌ರವರು "ಆಧುನೀಕರಣವು ಒಂದು ಹಳೆಯ ಪ್ರಕ್ರಿಯೆಯನ್ನು ಸೂಚಿಸುವ ಪ್ರಚಲಿತ ಆಧುನಿಕ ಪ್ರಸ್ತುತದ ಪದವಾಗಿದೆ. ಇದು ಅಭಿವೃದ್ಧಿಶೀಲ ಸಮಾಜಗಳು, ಹೆಚ್ಚು ಅಭಿವೃದ್ಧಿ ಹೊಂದಿದ ಸಮಾಜಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಸಾಮಾನ್ಯ ಲಕ್ಷಣಗಳನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಈ ಸಮಾಜಗಳು ಐತಿಹಾಸಿಕವಾಗಿ ನಗರೀಕೃತ, ಔದ್ಯಮೀಕೃತ ಮತ್ತು participant ಸಮಾಜಗಳಲ್ಲಿ ಸಮಾನ್ಯವಾಗಿ ಅನುಸರಿಸಲ್ಪಡುವ ವರ್ತನಾಕ್ರಮವನ್ನು ರೂಢಿಸಿಕೊಳ್ಳುತ್ತದೆ. ಆಧುನೀಕರಣವು ಹೆಚ್ಚು ಅಭಿವೃದ್ಧಿ ಹೊಂದಿಲ್ಲದ ಸಮಾಜಗಳು, ಅಭಿವೃದ್ಧಿ ಹೊಂದಿದ ಸಮಾಜಗಳು ಸಾಧಿಸಿರುವ ಸಾಧನೆ ಮತ್ತು ಕಾರ್ಯಕ್ಷಮತೆಯ ಮಟ್ಟವನ್ನು ತಾವೂ ರೂಢಿಸಿಕೊಳ್ಳುವಂತಹ ಪ್ರಕ್ರಿಯೆಯಾಗಿದೆ". ಎಸ್. ಸಿ. ದುಬೆಯವರು, ಆಧುನೀಕರಣವು ಕೆಲವು ವಿಶಿಷ್ಟ ಲಕ್ಷಣಗಳನ್ನು ಬೆಳೆಸಿಕೊಳ್ಳುವುದರಿಂದ ರೂಪುಗೊಳ್ಳುವ ಒಂದು ಹೊಸ ವರ್ತನಾ ವ್ಯವಸ್ಥೆಗೆ ಅನ್ವಯವಾಗುತ್ತದೆ. ಈ ವರ್ತನಾ ವ್ಯವಸ್ಥೆಯು ಹೆಚ್ಚಿನ ಪ್ರಮಾಣದ ಮೌಲ್ಯಗಳು ಹೊಸ ಅಂಶಗಳನ್ನು ಅಳವಡಿಸಿಕೊಂಡು ಆಮೂಲಾಗ್ರ ಬದಲಾವಣೆ ಹೊಂದದೇ ಹೋದರೆ. ಉದ್ಯಮಶೀಲವಾದ ಮತ್ತು ಕೈಗಾರಿಕಾ ನೀತಿಯ ಬೆಳವಣಿಗೆ ಸಾಧ್ಯವಾಗುವುದಿಲ್ಲ. ಆಧುನೀಕರಣಕ್ಕೆ ಅಗತ್ಯವಾಗಿ ಉಂಟಾಗಬೇಕಾಗುತ್ತದೆ. ಹೀಗೆ ಆಧುನೀಕತೆಯು (Modernity) ಅಭಿವೃದ್ಧಿ ಸಾಧಿಸಿದ ರಾಷ್ಟ್ರಗಳಲ್ಲಿ ಕಂಡು ಬರುವ ಕೆಲವು ವಿಶಿಷ್ಟ ಲಕ್ಷಣಗಳು ಮತ್ತು ಅಂಶಗಳನ್ನು ಅಳವಡಿಸಿಕೊಳ್ಳುವುದಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಅವುಗಳ ಆಯ್ಕೆ ಒಂದು ರೀತಿಯ ತಾರ್ಕಿಕ ಕ್ರಮ ಮತ್ತು ಸನ್ನಿವೇಶದಲ್ಲಿ ನಡೆಯ ಬೇಕಾಗುತ್ತದೆ. ಮತ್ತು ಈ ಮೌಲ್ಯ ಮತ್ತು ಲಕ್ಷಣಗಳನ್ನು ವ್ಯಾಪಕವಾಗಿ ಅಂಶೀಕೃತವಾಗುವ ರೀತಿಯಲ್ಲಿ ಒಂದು ಸಮಾಜವು ತನ್ನ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಹೀಗೆ ಹೆಚ್ಚು ಅಭಿವೃದ್ಧಿಗೊಂಡ ರಾಷ್ಟ್ರಗಳ ಲಕ್ಷಣಗಳನ್ನೂ ಅಳವಡಿಸಿಕೊಳ್ಳುವ ಪ್ರಕ್ರಿಯೇ ಆಧುನೀಕರಣ. ಕಾರ್ಲ್ ಮಾರ್ಕ್ಸ್‌ರವರು ತಮ್ಮ 'ದಾಸ್ ಕ್ಯಾಪಿಟಲ್' ಕೃತಿಯ ಪ್ರಸ್ತಾವನೆಯಲ್ಲಿ ಬಹಳ ಹಿಂದೆಯೇ "ಕೈಗಾರಿಕೆಯಲ್ಲಿ ಹೆಚ್ಚು ಮುಂದುವರಿದ ರಾಷ್ಟ್ರ ಮಾತ್ರ ಕಡಿಮೆ ಮುಂದುವರಿದ ರಾಷ್ಟ್ರಗಳಿಗೆ ಅವುಗಳ ಭವಿಷ್ಯದ ನಿಲುವು ಅಥವಾ ಪ್ರತಿಮೆಯನ್ನು ತೋರಬಲ್ಲದು" ಎಂದು ತಿಳಿಸಿದ್ದಾರೆ.

ಆಧುನೀಕರಣವು ಆಯಾ ಸಮಾಜ ವಿಜ್ಞಾನಿಯ ವೃತ್ತಿ ತರಬೇತಿ ಮತ್ತು ಒಲವುಗಳನ್ನು ಆಧರಿಸಿ, ವಿಭಿನ್ನ ಪರಿಕಲ್ಪನಾತ್ಮಕ ರೂಪಗಳನ್ನು ಅಂದರೆ ಬೇರೆ ಬೇರೆ ಅರ್ಥವನ್ನು ಪಡೆದುಕೊಂಡಿದೆ. ಅಲ್ಲದೆ ಈ ಪರಿಕಲ್ಪನೆಯಲ್ಲಿ ತಾರ್ಕಿಕ ಸಾಂಗತ್ಯ ಮತ್ತು ಏಕರೂಪತೆಯ ಕೊರತೆ ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗಾಗಿ ಹೌರಾವಿಟ್ಜ್‌ರವರು ಆಧುನೀಕರಣಕ್ಕೆ ಒಂದು ಪರಿಕಲ್ಪನೆಗೆ ಬೇಕಾದ ಅರ್ಹತೆಗಳಿಲ್ಲ ಎಂದು ಹೇಳಿರುವುದರಲ್ಲಿ ಅಚ್ಚರಿಯೇನಿಲ್ಲ ಮತ್ತು ಆಧುನೀಕರಣವನ್ನು ವಿವಿಧ ಪ್ರಭಾವಶಾಲಿ ಅಂಶಗಳ (Variables) ಆಧಾರದ ಮೇಲೆ ವ್ಯಾಖ್ಯಾನಿಸುವ ಪ್ರತಿಯೊಂದು ಪ್ರಯತ್ನವೂ ಈ ಕಲ್ಪನೆಯ ಮೂಲ ಅರ್ಥದೊಂದಿಗೆ ಹೆಚ್ಚು ಹೊಂದಾಣಿಕೆಯಾಗದ ಹೊಸ, ಭಾವನೆಗಳ, ಅರ್ಥಗಳನ್ನ ಸೂಚಿಸುವಿಕೆಗೆ ಅವಕಾಶ ಮಾಡಿಕೊಡುತ್ತದೆ.

ಆಧುನೀಕರಣ ಪ್ರಕ್ರಿಯೆಗೆ ಅನೇಕ ಬಗೆಯ ವ್ಯಾಖ್ಯೆಗಳಿವೆ. ಆದರೆ ಪ್ರಸ್ತುತ ಪ್ರಬಂಧವು. ಡೇವಿಡ್ ಆಪ್ಟರ್ ಮತ್ತು ಮೈರನ್ ವೀನರ್‌ರವರ ವ್ಯಾಖ್ಯೆಗಳಿಗೆ ಮಾತ್ರ ಆಧುನೀಕರಣದ ಅರ್ಥವನ್ನು ಸೀಮಿತಗೊಳಿಸುವ ಉದ್ದೇಶ ಹೊಂದಿದೆ. "ಸಂಕ್ಷಿಪ್ತವಾಗಿ ಹೇಳ ಬೇಕೆಂದರೆ ಆಧುನೀಕರಣ ಎರಡು ಅಂಶಗಳನ್ನು ಒಳಗೊಂಡಿರುತ್ತದೆ. ಇವುಗಳಲ್ಲಿ ಯಾವುದೇ ಒಂದು, ಕೈಗಾರಿಕಾ ಸಮಾಜಗಳಿಗಷ್ಟೇ ಸೀಮಿತವಾಗಿರುವುದಿಲ್ಲ. ಮೊದಲನೆಯದು ಅವ್ಯವಸ್ಥೆಗೀಡಾಗದಂತೆ ನಿರಂತರವಾಗಿ ಆವಿಷ್ಕಾರಗಳಲ್ಲಿ ತೊಡಗಿರುವ ಒಂದು ಸಾಮಾಜಿಕ ವ್ಯವಸ್ಥೆ. ಹೀಗೆ ಮೌಲ್ಯಗಳು ರೂಪುಗೊಂಡು ಪರಿವರ್ತನೆಯನ್ನು ಜನ ಅಂಗೀಕರಿಸುವಂತೆ ಮಾಡುತ್ತವೆ ಮತ್ತು ವಿಭಿನ್ನತೆ ಮತ್ತು

ವೈವಿಧ್ಯತೆಗಳಿಂದ ಕೂಡಿದ ಸಾಮಾಜಿಕ ಸಂರಚನಾ ವ್ಯವಸ್ಥೆಗಳು ಬೆಳೆದು ಬರುತ್ತದೆ. ಎರಡನೆಯದಾಗಿ ತಾಂತ್ರಿಕವಾಗಿ ಮುಂದುವರಿದ ಜಗತ್ತಿನಲ್ಲಿ ಬದುಕಲು ಅಗತ್ಯವಾದ ಜ್ಞಾನ ಮತ್ತು ತಂತ್ರಗಳನ್ನು ಬೆಳೆಸುವ ಸಾಮಾಜಿಕ ಚೌಕಟ್ಟು ಇದು ತಂತ್ರಜ್ಞಾನ ಪರಿಭಾಷೆಯಲ್ಲಿ ಸಂವಹನ ಮಾಡುವಂತಹ ಸಾಮರ್ಥ್ಯವನ್ನು ರೂಢಿಸುತ್ತದೆ.

ಈಗಾಗಲೇ ಆಧುನೀಕರಣವು ಮೂಲಭೂತವಾಣಿ ಸಾಮಾಜಿಕ ಪರಿವರ್ತನೆಗೆ ಅನ್ವಯಿಸುವ ಪರಿಕಲ್ಪನೆ ಎಂದು ಅರಿತಿದ್ದೇವೆ. ಸಾಮಾಜಿಕ ಪರಿವರ್ತನೆಯ ವಾಸ್ತವಿಕತೆಯನ್ನು ತಿಳಿಸಲು ಅನೇಕ ಪದಗಳನ್ನು ಬಳಕೆ ಮಾಡಿದ್ದಾರೆ. ಹೀಗೆ ಒಬ್ಬರು ಭಾರತ ಯೂರೋಪೀಕರಣ ಪ್ರಕ್ರಿಯೆಗೊಳಪಡುತ್ತಿದೆ ಎಂದರೆ ಇನ್ನೊಬ್ಬರು ಆಂಗ್ಲೀಕೃತ ವಸಾಹತೀಕರಣಕ್ಕೆ ಒಳಗಾದ ರಾಷ್ಟ್ರಗಳು ಯುರೋಪಿನ ರಾಷ್ಟ್ರಗಳೊಡನೆ ತಾವು ಹೊಂದಿರುವ ನಿರಂತರ ಸಂಪರ್ಕದ ದೆಸೆಯಿಂದಾಗಿ ಕೆಲವು ಸಮಾನ ಲಕ್ಷಣಗಳನ್ನು ರೂಢಿಸಿಕೊಂಡಿವೆ ಎಂದು ಅಭಿಪ್ರಾಯ ಪಡುತ್ತಾರೆ. ಅಮೇರಿಕನ್ನರ ಅಮೇರಿಕನ್ನರ ಪ್ರಾಭಲ್ಯ ಹೆಚ್ಚಿದ ಮೇಲೆ ಅಮೇರಿಕೀಕರಣ ಎಂಬ ಪರಿಕಲ್ಪನೆ ಬಳಸಲಾಯಿತು. ಆದರ ಅವರು ಪ್ರಪಂಚದ ಉಳಿದ ಭಾಗಗಳಿಗೆ ಸಂಬಂಧಿಸಿದಂತೆ ಮಾತನಾಡುವಾಗ 'ಪಾಶ್ಚಿಮಾತ್ಯಕರಣ' ಎಂಬ ಪದಬಳಕೆ ಮಾಡುತ್ತಾರೆ. ಹೀಗೆ ಆಧುನಿಕರಣ ಪರಿಕಲ್ಪನೆಯನ್ನು ಬೇರೆ ಬೇರೆ ರೀತಿಯ ಸಾಮಾಜಿಕ ಪರಿವರ್ತನೆಯ ಜೊತೆ ಗುರುತಿಸುವಾಗ ಅಂದರೆ ಪಾಶ್ಚಿಮಾತ್ಯೀಕರಣ, ಔದ್ಯಮೀಕರಣ, ಪ್ರಗತಿ, ಅಭಿವೃದ್ಧಿ ಮುಂತಾದ ಬದಲಾವಣೆಗಳ ಜೊತೆ ಗುರುತಿಸುವಾಗ ಒಂದು ರೀತಿಯ ಗೊಂದಲ ಮತ್ತು ಅಸ್ಪಷ್ಟತೆ ಕಾಣಿಸಿಕೊಳ್ಳುತ್ತದೆ. ಕೆಲವು ವಿಶಿಷ್ಟ ಅಂಶಗಳು ಆಧುನೀಕರಣದ, ಮೂಲ ತಿರುಳಾಗಿವೆ ಎಂಬುದನ್ನು ತಿಳಿದುಕೊಳ್ಳಲು ಹೆಚ್ಚು ಒತ್ತು ನೀಡ ಬೇಕಾಗುತ್ತದೆ. ಆದ್ದರಿಂದ ಆಧುನೀಕರಮ ಪದವನ್ನು ನಿಖರವಾಗಿ ಮತ್ತು ವಸ್ತು ನಿಷ್ಠವಾಗಿ ವ್ಯಾಖ್ಯಾನಿಸುವ ಅಗತ್ಯವಿದೆ.

ಇಂದು ಆಧುನೀಕರಣ ಪರಿಕಲ್ಪನೆ ಬಹಳ ವ್ಯಾಪಕ ಅರ್ಥವನ್ನು ನೀಡಲಾಗಿದೆ. ಇವನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಅಂಶಗಳನ್ನು ಒಳಗೊಂಡ ಸಾಮಾಜಿಕ ಪರಿವರ್ತನೆ ಎಂದು ಬಣ್ಣಿಸಲಾಗುತ್ತದೆ. ಇದು ವೈಚಾರಿಕತೆಯ ಪ್ರಭಾವದಿಂದ ಸಂಭವಿಸುವ ಪರಿವರ್ತನೆಗಳನ್ನು ಒಳಗೊಳ್ಳುತ್ತದೆ. ಅಲಾಟಾಸ್ (1972) ರವರ ಪ್ರಕಾರ, ಒಂದು ನಿರ್ಧಿಷ್ಟ ಸಮಾಜವು ವ್ಯಾಪಕ ಅರ್ಥದಲ್ಲಿ ಉತ್ತಮವಾದ ಮತ್ತು ಹೆಚ್ಚು ತೃಪ್ತಿದಾಯಕವಾದ. ಬಿದುರನ್ನು ಜನರಿಗೆ ನೀಡುವ ಉದ್ದೇಶದಿಂದ. ಆಧುನಿಕ ವೈಜ್ಞಾನಿಕ ಜ್ಞಾನವನ್ನು ಬಳಕೆ ಮಾಡಿಕೊಳ್ಳುವ ಪ್ರಕ್ರಿಕೆಯೇ ಆಧುನಿಕರಣವಾಗಿದೆ. ಈ ವ್ಯಾಖ್ಯೆಯಲ್ಲಿ, ಆಧುನಿಕ ವೈಜ್ಞಾನಿಕ ಜ್ಞಾನ ಎಂಬ ಪದವು ಪ್ರಯೋಗಾತ್ಮಕವಾಗಿ, ಮೊದಲೇ ನೀಡಿದ ವಿವರಣೆಗಳ ಸತ್ಯಾಸತ್ಯತೆಯನ್ನು, ತಿಳಿಸಿಕೊಡುವುದಕ್ಕೆ ಅನ್ವಯವಾಗುತ್ತದೆ.

ವಾಸ್ತವಾಂಶಗಳ ಅಧಿಕೃತೆಯನ್ನು ಅರಿತುಕೊಳ್ಳಲು, ನಿರ್ಧಿಷ್ಟವಾದ ವಿಧಾನಗಳನ್ನು ಅಳವಡಿಸಿಕೊಳ್ಳುವುದು, ಪರಿಕಲ್ಪನೆಗಳು ಮತ್ತು ಚಿನ್ಹೆಗಳನ್ನು ಬಳಸುವುದಕ್ಕೆ ಮತ್ತು ಸತ್ಯವನ್ನು ಅರಿಯುವುದಕ್ಕಾಗಿಯೇ ಸತ್ಯಾನ್ವೇಷಣೆಯಲ್ಲಿ ತೊಡಗುವುದಕ್ಕೂ ಅನ್ವಯವಾಗುತ್ತದೆ.

ಐಸನ್‌ಸ್ಟ್ಯಾಟ್ (1969) ರವರ ಪ್ರಕಾರ ಆಧುನೀಕರಣ ಸಾಮಾಜಿಕ ವ್ಯವಸ್ಥೆಯ ಸಂರಚನೀಯ ಅಂಶಗಳಿಗೆ ಮತ್ತು ಸಮಾಜಗಳ ಸಾಮಾಜಿಕ ಮತ್ತು ಜನಸಂಖ್ಯೆಗೆ ಸಂಬಂಧಿಸಿದ ಅಂಶಗಳಿಗೆ ಅನ್ವಯವಾಗುತ್ತದೆ. ಕಾರ್ಲ್ ಡ್ಯೂಟ್‌ರವರು, ಆಧುನೀಕರಣದ ಸಾಮಾಜಿಕ ಮತ್ತು ಜನಸಂಖ್ಯಾತ್ಮಕ ಅಂಶಗಳನ್ನು ಸೂಚಿಸಲು ಸಾಮಾಜಿಕ ಚಲನೀಕರಣ (Social Mobilization) ಎಂಬ ಪದವನ್ನು ಬಳಕೆ ಮಾಡಿದ್ದಾರೆ. ಅವರು ಸಾಮಾಜಿಕ ಚಲನೀಕರಣವನ್ನು ಹಳೆಯ ಸಾಮಾಜಿಕ, ಆರ್ಥಿಕ ಮತ್ತು ಮಾವಸಿಕ ಬದ್ಧತೆಗಳ ವ್ಯವಸ್ಥೆಗಳು ನಶಿಸಿ ಹೋಗಿ, ಜನರು ಹೊಸ ಬಗೆಯ ಸಮಾಜೀಕರಣಕ್ಕೊಳಗಾಗಿ ಹೊಸ ವರ್ತನೆಯನ್ನು ರೂಢಿಸಿಕೊಳ್ಳುವುದನ್ನೂ ಸೂಚಿಸಲು ಬಳಸುತ್ತಾರೆ.

ಯೂರೋಪೀಕರಣ, ಪಾಶ್ಚಿಮಾತ್ಯೀಕರಣ, ಅಮೇರಿಕೀಕರಣ, ಔದ್ಯಮಿಕರಣ ಇತ್ಯಾದಿ ಪದಗಳು ಸೀಮಿತ ವ್ಯಾಪ್ತಿಯುಳ್ಳ ಪದಗಳಾಗಿವೆ. ಆದ್ದರಿಂದ ಇವುಗಳಿಂದ ಆಧುನೀಕರಣ ಪರಿಕಲ್ಪನೆಯನ್ನೂ ಪ್ರತ್ಯೇಕಿಸಿ ಸ್ಪಷ್ಟವಾಗಿ ಅದರ ವ್ಯಾಖ್ಯೆ ಮಾಡಬೇಕಾಗುತ್ತದೆ.

ಆಧುನೀಕರಣವು ಪಾಶ್ಚಿಮಾತ್ಯ ಅಥವಾ ಪಾಶ್ಚಿಮಾತ್ಯೇತರ ಸಮಾಜಗಳೆಂಬ ಭಿನ್ನತೆ ಇಲ್ಲದೆ ಎಲ್ಲ ಆಧುನಿಕ ಸಮಾಜಗಳು ರೂಢಿಸಿಕೊಂಡಿರುವ ಸಮಾನತೆಗಳನ್ನು ಕುರಿತು ಮಾತನಾಡಲು ಅವಕಾಶ ಮಾಡಿಕೊಡುವಂತಹ ಪದವಾಗಿದೆ. ಪ್ರಾದೇಶಿಕತೆ ಮತ್ತು

ಸಂಪ್ರದಾಯಿಕತೆಗಳನ್ನೂ ಮೀರಿನಿಂತ ಸಮಾನ ಅಂಶಗಳ ಬಗೆಗೆ ತಿಳಿಸಿಕೊಡುವ ಪದವಾಗಿದೆ.

ಪ್ರಾಥಮಿಕ ಹಂತದಲ್ಲಿ ಆಧುನೀಕರಣವು ಸಮಾಜದ ಕಾರ್ಯಾತ್ಮಕ ಅಂಶಗ(functional aspects) ಳನ್ನು ಚರ್ಚಿಸಲು ಬಳಸಿಕೊಳ್ಳುವ ಅನೇಕ ಪದಗಳಲ್ಲಿ ಒಂದೆಂಬಂತೆ ಬಳಸಲಾಗುತ್ತಿದ್ದಿತು.

ಆಧುನೀಕರಣಕ್ಕೆ ಎರಡು ಸಮಾಜಶಾಸ್ತ್ರೀಯ ಸೂಚ್ಯಾರ್ಥಗಳಿವೆ. ಮೊದಲ ಹಂತದಲ್ಲಿ ಇದು ಮೊದಲು ಕೃಷಿ ಪ್ರಧಾನವಾಗಿದ್ದ ರಾಷ್ಟ್ರದಲ್ಲಿ. ಔದ್ಯಮೀಕರಣವನ್ನೂ ಒಳಗೊಂಡಂತೆ ಸಂಭವಿಸುವ ಎಲ್ಲ ಸಾಮಾಜಿಕ ಪ್ರಕ್ರಿಯೆಗಳಿಗೂ ಅನ್ವಯವಾಗುತ್ತದೆ. ಇಲ್ಲಿ ಆಧುನಿಕ ಮತ್ತು ಆಧುನೀಕರಣಕೊಳ ಪಡುತ್ತಿರುವ ಸಮಾಜಗಳ ನಡುವೆ ಒಟ್ಟಾರೆ ಹೋಲಿಕೆ ಮಾಡಲಾಗುತ್ತದೆ. ಇಲ್ಲಿ ಆಧುನೀಕರಣ ಪರಿಕಲ್ಪನೆಯು ಔದ್ಯಮಿಕರಣವನ್ನಷ್ಟೇ ಅಲ್ಲದೆ ವ್ಯಾಪಕ ರೀತಿಯ ಅನೇಕ ಸಾಮಾಜಿಕ ಪ್ರಕ್ರಿಯೆಗಳಿಗೆ ಅನ್ವಯಪಾಗುತ್ತದೆ. ಇಲ್ಲಿ ಆಧುನಿಕ ಮತ್ತು ಆಧುನೀಕರಣಕೊಳ ಪಡುತ್ತಿರುವ ಸಮಾಜಗಳ ನಡ ವೆ ಒಟ್ಟಾರೆ ಹೋಲಿಕೆ ಮಾಡಲಾಗುತ್ತದೆ. ಇಲ್ಲಿ ಆಧುನೀಕರಣ ಪರಿಕಲ್ಪನೆಯು ಔದ್ಯಮಿಕರಣವನ್ನಷ್ಟೇ ಅಲ್ಲದೆ ವ್ಯಾಪಕ ರೀತಿಯ ಅನೇಕ ಸಾಮಾಜಿಕ ಪ್ರಕ್ರಿಯೆಗಳಿಗೆ ಅನ್ವಯವಾಗುತ್ತದೆ. ಇ - ಡರ್ಕೀಂ, ಕಾರ್ಲ್‌ಮಾರ್ಕ್ಸ್ ಮತ್ತು ವೆಬರ್ ಎಂಬ ಹೆಸರಾಂತ ಸಮಾಜಶಾಸ್ತ್ರಜ್ಞರು ಆಧುನೀಕರಣದ ಮುಖ್ಯ ಮೂರು ಅರ್ಥಗಳನ್ನೂ ಸೂಚಿಸುತ್ತಾರೆ.

- ಡರ್ಕಿಂರವರು ಆಧುನೀಕರಣವನ್ನು ಯಾಂತ್ರಿಕ ಐಕ್ಯತೆಯಿಂದ ಸಾವಯವ ಐಕ್ಯತೆಗೆ (from mechanical solidarity to organic solidarity) ರೂಪಾಂತರ ಹೊಂದುವ ಸಾಮಾಜಿಕ ವೈವಿಧ್ಯೀಕರಣ ಅಥವಾ ವಿಭಿನ್ನೀಕರಮದ ಪ್ರಕ್ರಿಯೆಯಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.
- ಕಾರ್ಲ್ ಮಾರ್ಕ್ಸ್‌ರವರು ಆಧುನೀಕರಣ ಉತ್ಪನ್ನೀಕರಣ (Commodification) ಪ್ರಕ್ರಿಯೆಯಾಗಿದೆ ಎಂದು ತಿಳಿಸಿದ್ದಾರೆ.
- ಮ್ಯಾಕ್ಸ್‌ವೆಬರ್‌ರವರು ಇದು ವೈಚಾರೀಕರಣದ (rationalization) ಪ್ರಕ್ರಿಯೆ ಎಂದು ವ್ಯಾಖ್ಯಾನಿಸಿದ್ದಾರೆ.

ಎರಡನೆ ಸೂಚ್ಯಾರ್ಥದಲ್ಲಿ ಆಧುನೀಕರಣವು ಅಭಿವೃದ್ಧಿಯ ಒಂದು ನಿರ್ದಿಷ್ಟ ಮಾದರಿ (Model) ಎಂಬಂತೆ ಪರಿಗಣಿಸಲ್ಪಡುತ್ತದೆ. ಈ ಅರ್ಥದಲ್ಲಿ ಆಧುನೀಕರಣ ಪದವನ್ನು 1950ರ ಆರಂಭದಿಂದ 1960ರ ದಶಕದ ಅಂತ್ಯದವರೆಗೂ ಅಮೇರಿಕಾದ ಕಾರ್ಯಸಿದ್ಧಾಂತ ಪ್ರತಿಪಾದಕ ಸಮಾಜ ಶಾಸ್ತ್ರಜ್ಞರು ಬಳಕೆ ಮಾಡಿದರು. ಇವರ ಪ್ರಕಾರ ಆಧುನೀಕರಣದ ನಿರ್ಣಾಯಕ ಅಂಶವು ಸಾಮಾಜಿಕ ಪರಿವರ್ತನೆಗೆ ಮತ್ತು ಆರ್ಥಿಕಾಭಿವೃದ್ಧಿಗೆ ಅಡಚಣೆಯನ್ನುಂಟು ಮಾಡುವ ಪಾರಂಪರಿಕ ಮೌಲ್ಯಗಳನ್ನು ರೂಢಿಸಿಕೊಳ್ಳುವುದಕ್ಕೆ ಅನ್ವಯವಾಗುತ್ತದೆ. ಈ ವಿಶಿಷ್ಟಾರ್ಥವು ಸಂರಚಿನೆ ಕಾರ್ಯಸಿದ್ಧಾಂತದ ವಿದಾನದ (Structural-functional) ಆಧಾರದ ಮೇಲೆ ನೀಡಲ್ಪಟ್ಟಿದೆ. ಆದರೆ ಈ ದೃಷ್ಟಿಕೋನವೂ ಹೆಚ್ಚಿನ ವಾದ-ವಿವಾದಗಳಿಗೆ ಒಳಗಾಗಿದೆ. ಏಕೆಂದರೆ ಇದೂ ಕೂಡ ಪಶ್ಚಿಮಾತ್ಯ ಕೇಂದ್ರೀಕೃತ ದೃಷ್ಟಿಕೋನವಾಗಿದ್ದಿತು.

ಆಧುನೀಕರಣವು ಪ್ರಾದೇಶಿಕ ಮಿತಿಗಳನ್ನು ಮೀರಿ ಪರಿವರ್ತನೆಯಲ್ಲಿನ ಸಾದೃಶ್ಯ ಅಥವಾ ಸಮರೂಪತೆಯನ್ನು ತಿಳಿಸಿಕೊಡುವ ಪರಿಕಲ್ಪನೆ ಎಂಬುದನ್ನು ಈಗಾಗಲೇ ಅರಿತಿದ್ದೇವೆ. ಈ ಸಮರೂಪತೆಯ ಮುಖ್ಯ ಅಂಶವು ಆರ್ಥಿಕಾಭಿವೃದ್ಧಿಯಲ್ಲಿ ಕಂಡು ಬರುತ್ತದೆ. ಈ ಆರ್ಥಿಕಾಭಿವೃದ್ಧಿ ಸಾಧನೆಯ ನಿರಂತರ ಸಾಲಿನ (Continum) ಬೇರೆ ಬೇರೆ ಹಂತಗಳಲ್ಲಿ ಬರುವ ಸಮಾಜಗಳನ್ನು ಪರಸ್ಪರ ಹೋಲಿಸಲಾಗುತ್ತದೆ ಮತ್ತು ದರ್ಜಿಕ (rated)ರಿಸಲಾಗುತ್ತದೆ. ಡಬ್ಲ್ಯೂ. ಆರ್ಥರ್ ಲೆವಿಸ್‌ರಂಥಹ ಅಭಿವೃದ್ಧಿ ಆರ್ಥಿಕತೆಯ ತಜ್ಞರು ಆರ್ಥಿಕಾಭಿವೃದ್ಧಿ ಎಂದರೆ, "ಜನಸಂಖ್ಯೆಯ ತಲಾವಾರು ಆರ್ಥಿಕ ಉತ್ಪಾದನಾಬಿವೃದ್ಧಿ" ಎಂದು ಅರ್ಥೈಸಿದ್ದಾರೆ. ಆದ್ದರಿಂದ ಆರ್ಥಿಕವಾಗಿ ಹೆಚ್ಚಿನ ಮುಂದುವರಿದ ಅಂದರೆ ಅಧಿಕ ಆರ್ಥಿಕಾಭಿವೃದ್ಧಿ ಸಾಧಿಸಿದ ಸಮಾಜವೆಂದರೆ ಯಾವ ಸಮಾಜದಲ್ಲಿ ಆರ್ಥಿಕ ಉತ್ಪಾದನೆಯಲ್ಲಿ ತಲಾವಾರು ಹೆಚ್ಚಳವಾಗಿದೆಯಾ ಅದು. ಆದ್ದರಿಂದ ಹೆಚ್ಚು ಆರ್ಥಿಕಾಭಿವೃದ್ಧಿ ಸಾದಿಸಬೇಕೆಂಬ ಮಹತ್ವಾಕಾಂಕ್ಷೆ ಆರ್ಥಿಕಾಭಿವೃದ್ಧಿಯ ಕೇಂದ್ರ ಅಂಶವಾಗಿದೆ. ಆದ್ದರಿಂದ ಆಧುನೀಕರಣವು ಅಭಿವೃದ್ಧಿಯನ್ನೇ ಮುಖ್ಯಾಂಶವನ್ನು ಒಳಗೊಂಡಿರುವ ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಯಾಗಿದೆ. ಅನೇಕ ಸಂಘಟನೆಗಳು ತಲಾವಾರು ಉತ್ಪಾದನೆಯನ್ನು ಪರಿಣಾಮಕಾರಿಯಾಗಿ ಒಳಗೊಳ್ಳುವಂತಹ ಸಾಮಾಜಿಕ ಪರಿಸರವನ್ನು ರೂಪಿಸುತ್ತವೆ. ಡೇ ಲ್ಡ್ ಲಾಸ್‌ವೆಲ್‌ರವರು "ಸಂಪತ್ತಿನ ಕಡೆ ಕೇಂದ್ರೀಕೃತವಾದ ವರ್ತನೆಯನ್ನು ರೂಢಿಸುವಂತಹ

ಪರಿವರ್ತನೆಯು ಅಧಿಕಾರ, ಗೌರವ, ಮಮತೆ, ಯೋಗಕ್ಷೇಮ, ತಂತ್ರ ಕುಶಲತೆ ಮತ್ತು ಜ್ಞಾನಾಭಿವೃದ್ಧಿ (enlightenment) ಮೊದಲಾದ ಅಂಶಗಳಿಗೆ ಸಂಬಂಧಿಸಿದ ಎಲ್ಲ ಸಾಮಾಜಿಕ ಮೌಲ್ಯಗಳ ಪುನರ್ ಬದಲಾವಣೆ ಮತ್ತು ಪುನರ್ ನಿರೂಪಣೆಗೆ ಅನ್ವಯವಾಗುತ್ತ ಎಂದು ತಿಳಿಸುತ್ತಾರೆ. ಇದು ಸಾಮಾಜಿಕ ಸಂರಚನೆ (social structure) ಮತ್ತು ಆರ್ಥಿಕಾಭಿವೃದ್ಧಿಗಳ ನಡುವಿನ ಭಾಂಧವ್ಯವನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಈ ರೀತಿಯಲ್ಲಿ ಪ್ರೊ.ಯೋಗೇಂದ್ರ ಸಿಂಗ್‌ರವರು "ಆಧುನಿಕರಣವು ಅನೇಕ ಪ್ರಕ್ರಿಯೆಗಳು ವ್ಯವಸ್ಥೆಗಳನ್ನೊಳಗೊಂಡಿದೆ. ಇವುಗಳಲ್ಲಿ ಪ್ರತಿಯೊಂದು, ಚಾರಿತ್ರಿಕ, ಸಾಂಸ್ಕೃತಿಕ, ಸಂರಚನೀಯ ಮತ್ತು ಅಸ್ತಿವಾದೀ ಅಂಶಗಳ ಆಧಾರದ ಮೇಲೆ, ಸಂದರ್ಭಕ್ಕನುಗುಣವಾಗಿ ವಿವಿಧಾರ್ಥಗಳನ್ನೂ ನೀಡುತ್ತದೆ. ಪ್ರತಿಯೊಂದು ತನ್ನಗಡಿ ಅಥವಾ ವ್ಯಾಪ್ತಿಯೊಳಗೆ ಒಂದು ನಿರ್ದಿಷ್ಟವಾ ಅರ್ಥದಲ್ಲಿ ಬಳಸಲ್ಪಡುತ್ತದೆ". ಎಂದು ತಿಳಿಸಿದ್ದಾರೆ. ಇವುಗಳನ್ನು ನಾಲ್ಕು ಬಗೆಯಾಗಿ ವಿಂಗಡಿಸಲಾಗಿದೆ.

- ಮಾನಸಿಕ (The Psychological) : ಡೇನೀಯಲ್ ಲರ್ನ್‌ರ್ : 1958, ಇ.ಸಿ. ಬಾನ್ ಫೀಲ್ಡ್ : 1958. ಡೇನೀಯಲ್ ಮ್ಯಾಕ್ಲೆಲ್ಯಾಂಡ್ : 1961, ಇತ್ಯಾದಿ.
- ನಿಯಮಾತ್ಮಕ (The Normative) : (ಜಿ.ಎ. ಆಲ್ಮೋನಾಡ್ ಎಸ್ ವರ್ಬಾ: 1965. ಲೂಸಿಯನ್ ಪೈ ಮತ್ತು ಎಸ್.ವೆರ್ಲಾ, : 1965. ಇ ಷಿಲ್ಸ್ : 1961, ಕೆ.ಎಮ್. ಬೆಲ್ಲಾಹ್ 1964, ಜಿ. ಗ್ರೀಟ್ಸ್ :1963 ಇತ್ಯಾದಿ.
- ಸಂರಚನೀಯ (The Structural) : ಟಿ. ಪಾರ್ಸನ್ಸ್ : 1964.ಕೆ. ಡಬ್ಲ್ಯೂ .ರಿಗ್ಸ್ : 1964.ಎಂ. ವೈನರ್ : 1962, ಇತ್ಯಾದಿ
- ತಂತ್ರಜ್ಞಾನೀಕ (The Technological) : ಎಂ.ಜೆ. ಲೆವಿ : 196,

ಇ.ಇ. ಹ್ಯಾಗನ್ : 1964, ಡಬ್ಲ್ಯೂ. ರೋಸ್ಟೋವ್ : 1960, ಇತ್ಯಾದಿ ಆಧುನೀಕರಣದ ಮಾನಸಿಕ ಅಂಶಗಳು ಈ ಪ್ರಕ್ರಿಯೆಯನ್ನು ವ್ಯಕ್ತಿಗಳ ಮನೋಭೀಷ್ಮ ಅಂಶಗಳಿಗೆ ಸಂಬಂಧಪಟ್ಟಿವೆ. ಇವು ಸ್ವಭಾವದಲ್ಲಿ ಚಲನಶೀಲವಾದವುಗಳು. ಕ್ರಿಯಾತ್ಮಕವಾದವುಗಳು ಅಥವಾ ಕ್ರಾಂತಿಕಾರಿಯಾದವುಗಳು ಮತ್ತು ನಾವೀನ್ಯಮಯವಾಗಿರುತ್ತವೆ. ಡೇನಿಯಲ್ ಲರ್ನ್‌ರನು ಇ ನ್ನು "ಮಾನಸಿಕ ಚಲನಶೀಲತೆ" (Psychic Mobility) ಎಂದು ಕರೆಯುತ್ತಾನೆ. ಇದು ಅನುಸಂದಾನ ಭಾವನೆ, ವೈಚಾರಿಕತೆ, ಮತ್ತು ಅನಿಯಂತ್ರಿತ ಪಾಲ್ಗೊಳ್ಳುವಿಕೆಯ ಅಂದರೆ ಯಾವುದನ್ನೇ ಆಗಲಿ ಮಾಡಲು ಸಿದ್ಧವಿರುವಂತಹ ಮನೋಧರ್ಮದಿಂದ ತನ್ನ ಪರಿಸರಕ್ಕೆ ಪ್ರತಿಕ್ರಿಯಿಸುವಂತಹ ವ್ಯಕ್ತಿಯಲ್ಲಿ ಕಂಡು ಬರುವ ಹೊಂದಾಣಿಕೆಯ ಗುಣವಾಗಿದೆ. ಇದೇ ಅಂಶವನ್ನು ಸಾಧನೆ ಕೇಂದ್ರೀಕೃತ ಮನೋಭಾವ ಅಥವಾ ಒಮ್ಮತದ ಭಾವನೆಗಳಿಗೆ ಬದ್ಧವಾಗಿರುವಿಕೆ ಎಂದು ಹೇಳಬಹುದು.

ಒಂದು ನಿಯಮಾತ್ಮಕ ಪರಿಕಲ್ಪನೆಯಾಗಿ ಆಧುನೀಕರಣವು ಅದರ ಮನಶಾಸ್ತ್ರೀಯ ಅರ್ಥದಿಂದ ಭಿನ್ನವಾಗಿದೆ. ವ್ಯವಸ್ಥಿತವಾಗಿ ರೂಪುಗೊಂಡ ನಿಯಮಗಳು ಮತ್ತು ಮೌಲ್ಯಗಳ ಮಾದರಿಗೆ ಅನ್ವಯವಾಗುತ್ತದೆ. ಇದು ವ್ಯಕ್ತಿಗತ ಪ್ರಜ್ಞೆಗಳು ಮತ್ತು ಮನೋಭೀಷ್ಟಗಳಿಂದ ಮುಕ್ತವಾಗಿದ್ದು ಸ್ವಯತ್ತತೆಯನ್ನು ಹೊಂದಿರುತ್ತದೆ. ಆಧುನೀಕರಣದ ಮಾನಸಿಕ ಅರ್ಥ ಸಮ ದಲ್ಲಿನ ಸಾಂಸ್ಕೃತಿಕ ಪರಂಪರೆಗ ಐತಿಹಾಸಿಕತೆಯಿಂದ ಮುಕ್ತವಾಗಿದ್ದಾರೆ. ನಿಯಾಮಾತ್ಮಕ ವಿವರಣೆ ಅದು ಒಂದು ಭಾಗವಾಗಿರುತ್ತದೆ. ಅದರಲ್ಲೂ ಪಾಶ್ಚಿಮಾತ್ಯ ಸಮಾಜಗಳಲ್ಲಿನ ಸಾಂಸ್ಕೃತಿಕ ಆಧುನೀಕರಣದ ಭಾಗವಾಗಿರುತ್ತದೆ. ಆಧುನೀಕರಣದ ಪ್ರಾತಿನಿಧಿಕ ನಿಯಮಾತ್ಮಕ ನಿರೂಪಣೆಗಳು, ವೈಚಾರಿಕತೆ, ಸಾರ್ವತ್ರಿಕತೆ, ವ್ಯಕ್ತಿತ್ವವಾದ, ಮಾನವತಾವಾದ, ಪ್ರಾಯೋಗಿಕತೆ, ಮತ್ತು ಉದಾರನೀತಿಯ ಪರಂಪರೆಗೆ ಬದ್ಧವಾಗಿರುವಿಕೆ, ನಾಗರೀಕ ಸಂಸ್ಕೃತಿ ಮತ್ತು ಧರ್ಮನಿರಪೇಕ್ಷ (Secular) ಮೌಲ್ಯಗಳನ್ನು ಒಳಗೊಂಡಿರುತ್ತದೆ.

## 25.4 ಆಧುನೀಕರಣದ ಲಕ್ಷಣಗಳು

ಚಿಂತನಾಕಾರರಲ್ಲಿ ಆಧುನೀಕರಣದ ಪ್ರಮುಖ ಲಕ್ಷಣಗಳು ಬಗೆಗೆ ಒಮ್ಮತದ ಅಭಿಪ್ರಾಯಗಳಲ್ಲಿ ಆಧುನೀಕರಣ ಪ್ರಕ್ರಿಯೆಯ ಲಕ್ಷಣಗಳನ್ನು ಸಾರಾಂಶೀಕರಿಸುವ ಮುನ್ನ ಇವುಗಳ ಬಗೆಗೆ ಬೇರೆ ಬೇರೆ ಸಮಾಜಶಾಸ್ತ್ರಜ್ಞರ ಅಭಿಪ್ರಾಯಗಳ ಸಂಕ್ಷಿಪ್ತವಾದ ಪರಿಶೀಲನೆ

ಅಗತ್ಯವಾಗುತ್ತದೆ. ವೈನರ್‌ವರು ಆಧುನೀಕರಣದ ಸಂರಚನೀಯ ಲಕ್ಷಣಗಳನ್ನು ಈ ಮುಂದೆ ತಿಳಿಸುವಂತೆ ನಿರೂಪಿಸಿದ್ದಾರೆ. ಸಕ, ಪ್ರಾಮುಖ್ಯತೆಯು ಸಂಪ್ರದಾಯಿಕ (ಮಾದರೆ) ಸಮಾಜಕ್ಕಿಂತ ಆಧುನೀಕರಣಕ್ಕೊಳ ಪಟ್ಟು ಸಮಾಜದಲ್ಲಿ ಹೆಚ್ಚಾಗಿರುತ್ತದೆ. ಸಮಾಜಗಳಲ್ಲಿ, ನಾಗರೀಕರನ್ನು ವ್ಯಕ್ತಿಗತವಾಗಿ ಪ್ರಭಾವಗೊಳಿಸುವಂತಹ ಅನೇಕ ಕಾರ್ಯಗಳನ್ನು ಸರ್ಕಾರ ನಿರ್ವಹಿಸುತ್ತದೆ. ಎಂಬುದಾ ತಿಳಿಸಿದ್ದಾರೆ.

ಆಧುನಿಕ ರಾಜ್ಯಗಳಲ್ಲಿ ನಿರ್ವಹಿಸಲ್ಪಡುವ ಬಹಳಷ್ಟು ಚಟುವಟಿಕೆಗಳು, ನಾಗರೀಕರು ಮತ್ತು ಸರ್ಕಾರಗಳ ನಡುವೆ ಹೆಚ್ಚು ಪ್ರಗತಿ ಪರವಾದ ದ್ವಿಮಾರ್ಗೀಯ ಸಂಬಂಧಗಳಿರ ಬೇಕಾದ ಅಗತ್ಯವನ್ನುಸೂಚಿಸುತ್ತದೆ. ಅಧುನಿಕ ರಾಜ್ಯಗಳಲ್ಲಿ ಮಾಧ್ಯಮಿಕ ಸಂಘಗಳು, ಸಮೂಹಗಳು ಹೆಚ್ಚು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತವೆ. ಆದರೆ ಸಾಂಪ್ರದಾಯಿಕ ರಾಜ್ಯಗಳಲ್ಲಿ ವ್ಯಕ್ತಿಗತ ಪ್ರಾಥಮಿಕ ಸಮೂಹಗಳು ಪ್ರಮುಖವಾಗಿರುತ್ತವೆ. ಅಧಿಕಾರದ ನ್ಯಾಯಬದ್ಧತೆ ಅಥವಾ ಸಮರ್ಥನೀಯತೆ. ಸಂಪ್ರದಾಯ ಬದ್ಧ ರಾಜ್ಯದಲ್ಲಿ ಧರ್ಮದ ಮನ್ನಣೆಯನ್ನು ಪಡೆದು ಪವಿತ್ರತೆಯ ಆಧಾರವನ್ನು ಅವಲಂಬಿಸಿರುತ್ತದೆ. ಆದರೆ ಆಧುನಿಕ ರಾಜ್ಯದ ಅಧಿಕಾರದ ನ್ಯಾಯಬದ್ಧತೆಯು ಶಾಸನ ಬದ್ಧ ವಾದದ್ದು ಅಥವಾ ಕಾನೂನನ್ನು ಆಧರಿಸಿರುತ್ತದೆ.

ಆಧುನಿಕ ರಾಜ್ಯದ ಅಧಿಕಾರಿಶಾಹಿ ವ್ಯವಸ್ಥೆ (Eureancracy) ಯು ಕಾರ್ಯ - ನಿರ್ದೇಶಿತವಾಗಿರುತ್ತದೆ.(Task-oriented) ಅಂದರೆ ಜವಾಬ್ದಾರಿ ನಿರ್ವಹಣೆಗೆ ಒತ್ತು ನೀಡುತ್ತದೆ. ವ್ಯಕ್ತಿಗಳ ಸಾಮರ್ಥ್ಯ ಮತ್ತು ಕುಶಲತೆಗಳ ಆಧಾರದ ಮೇಲೆ ಅವರಿಗೆ ಉದ್ಯೋಗ ನೀಡಲಾಗುತ್ತದೆ. ಅಧಿಕಾರಿಶಾಹಿ ವ್ಯವಸ್ಥೆಯು ಶಾಸನ ಮಾಡುವ -ಗಣ್ಯರ (elites) ಗೆ ಅಧೀನವಾಗಿರುತ್ತದೆ. ಸಂಪ್ರದಾಯಬದ್ಧ ರಾಜ್ಯಗಳಲ್ಲಿ ಅಧಿಕಾರಿಶಾಹಿ ವ್ಯವಸ್ಥೆ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಲು ಪ್ರಾಮುಖ್ಯತೆ ನೀಡುತ್ತದೆ; ಅನೇಕ ಅಂಶಗಳ ಆಧಾರದ ಮೇಲೆ ಉದ್ಯೋಗಗಳಿಗೆ ವ್ಯಕ್ತಿಗಳನ್ನು ನೇಮಿಸಿಕೊಳ್ಳಲಾಗುತ್ತದೆ. ಮತ್ತು ಸರ್ಕಾರದ ಕಾರ್ಯನೀತಿ ಮತ್ತು ಆಡಳಿತಗ ನಡುವೆ ಯಾವುದೇ ವ್ಯತ್ಯಾಸವನ್ನೂ ಪರಿಗಣಿಸುವುದಿಲ್ಲ. ಸಾಂಪ್ರದಾಯಿಕ ರಾಜಕೀಯವು ತನ್ನ ಅಧಿಕಾರ-ಸ್ಥಾಪನೆಗೆ ಸಂಪೂರ್ಣಗಮನ ಹರಿಸುತ್ತದೆ. ಆದರೆ ಆಧುನಿಕ ಸಮಾಜದಲ್ಲಿ ಸಾರ್ವಜನಿಕ ನೀತಿ-ಧೋರಣೆಗಳನ್ನು ಸಾಧಿಸುವುದಕ್ಕೆ ಹೆಚ್ಚಿನ ಗಮನ ಹರಿಸಲಾಗುತ್ತದೆ. ಆಧುನೀಕ ಸಮಾಜದ ನಾಗರೀಕರಲ್ಲಿ ಸಮಗ್ರವಾಗಿ ಇಡೀ ರಾಷ್ಟ್ರದ ಬಗೆಗೆ ಹೆಚ್ಚಿನ ಒಲವು ಇರುತ್ತದೆ. ಆದರೆ, ಸಾಂಪ್ರದಾಯಿಕ ಸಮಾಜಗಳಲ್ಲಿ ಬಂಧುತ್ವ, ಜಾತಿ ಮತ್ತು ಬುಡಕಟ್ಟುಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತದೆ.

ಎಸ್.ಸಿ. ದುಬೆಯವರು ಲರ್ನರ್ (1962,63), ಆಲ್ಮಂಡ್ ಮತ್ತು ಕೋಲ್ಮನ್ (1960) ಮ್ಯಾಕ್ಲೆಲ್ಲ್ಯಾಂಡ್ (1961) ಐಥಿಲ್ ಡಿ ಸಾವೋ ಪೂಲ್ (1963) ಮತ್ತು ವಿಲ್ಬರ್ಟ್ ಮೂರ್ (1963) ಇವರ ಕೃತಿಗಳ ಆಧಾರದ ಮೇಲೆ ಈ ಕೆಳಗಿನ ಅಂಶಗಳನ್ನು ಆಧುನಿಕತೆ (Modernity) ಪ್ರಧಾನ ಮತ್ತು ಅವಶ್ಯಕ ಲಕ್ಷಣಗಳೆಂದು ಪಟ್ಟು ಮಾಡಿದ್ದಾರೆ.

- ಅನುಭೂತಿ ಅಥವಾ ಅನುಸಂಧಾನ (Empathy)
- ಚಲನೆ (Mobility)
- ಹೆಚ್ಚಾಗಿ ಪಾಲ್ಗೊಳ್ಳುವಿಕೆಗಳು High Participaters.
- ಹೆಚ್ಚಿನ ಆಸಕ್ತಿ ತೋರುವಿಕೆ Interest Articulation
- ಆಸಕ್ತಿ ಸಂಕಲನ Ibnterest Aggragation
- ಸಂಸ್ಥೀಕೃತ ರಾಜಕೀಯ ಸ್ಪರ್ಧೆ Institutionalized Polited Competition.
- ಸಾಧನೆ ನಿರ್ದೇಶಕತೆ, Achievement Orientation
- ವೈಚಾರಿಕ - ಗುರಿ ಸಾಧನಗಳಾಧಾರಿತ ಲೆಕ್ಕಾಚಾರ Rational - ends means calculation.
- ಸಂಪತ್ತು, ಉದ್ಯೋಗ, ಉಳಿತಾಯ ಮತ್ತು ಸಂದಿಗ್ಧ - ಸ್ವೀಕರಣೆ New attitudes to wealth, work, save and risk taking.

- ಪರಿವರ್ತನೆಯ ಸಾಧ್ಯತೆ ಮತ್ತು ಅದರ ಬಗೆಗಿನ ಒಲವು Faith in desirability and passibility of change
- ದೀರ್ಘಾವಧಿ - ಸಮಯದಲ್ಲಿ ಹೆಚ್ಚಿನ ಸಂತೃಪ್ತಿ ಪಡೆದುಕೊಳ್ಳಲು ತತ್‌ಕ್ಷಣದ ಮತ್ತು ತಾತ್ಕಾಲಿಕ ಸಂತೃಪ್ತಿಗಳನ್ನು ಮುಂದೂಡುವಿಕೆ. Capacity to put off immediate and short-term satisfaction for higher satisfaction in the long run.

ಕಾರ್ಲ್ ಡ್ಯೂಟೆ (1961) ಆಧುನೀಕರಣದ ಸಾಮಾಜಿಕ -ಜನಸಂಖ್ಯಾಶಾಸ್ತ್ರೀಯ ಅಂಶದ ಬಗೆಗೆ, ಅಂದರೆ ಸಾಮಾಜಿಕ - ಚಲನೀಕರಣ (social-mobilization) ಕೆಲವು ಸೂಚ್ಯಾಂಕಗಳನ್ನು ತಿಳಿಸಿದ್ದಾರೆ. ಅದೆಂದರೆ ಯಂತ್ರಗಳು, ಸಮೂಹ ಮಾಧ್ಯಮಗಳು, ಕೃಶಿಯಾಧಾರಿತ ಉದ್ಯೋಗಗಳನ್ನು ಬಿಟ್ಟು ಇತರ ಉದ್ಯೋಗಗಳನ್ನು ಅವಲಂಬಿಸುವಿಕೆ, ಅಕ್ಷರತೆ ಮತ್ತು ತಲಾದಾಯದ ಹೆಚ್ಚಳ - ಇವುಗಳ ಮೂಲಕ ಆಧುನಿಕ ಜೀವನ ವಿಧಾನವನ್ನು ಅನವಡಿಸಿಕೊಳ್ಳುವಿಕೆ ಎಂದು ತಿಳಿಸಿದ್ದಾರೆ.

ಐಸೆನ್ಸ್ಟಾಟ್ (169) ರವರು ಸೂಚಿಸಿರುವ ಆಧುನೀಕರಣದ ಅಥವಾ ಸಾಮಾಜಿಕ ವ್ಯವಸ್ಥೆಯ ಸಂರಚನೀಯ ಅಂಶಗಳಿಗೆ ಸಂಬಂಧಿಸಿದ ಸೂಚ್ಯಂಕಗಳು ಯಾವುದೆಂದರೆ ಮುಕ್ತವಾಗಿ ದೊರೆಯುವ ಪಾತ್ರಗಳು (ಅಂದರೆ ಇವುಗಳನ್ನು ಗಳಿಸುವಿಕೆ ವ್ಯಕ್ತಿಯ ಆರೋಪಿತ ಲಕ್ಷಣಗಳ ಆಧಾರದ ಮೇಲೆ ನಿರ್ಣಯಿಸಲ್ಪಡುವುದಿಲ್ಲ) ಮತ್ತು ಸಂಪತ್ತು ಮತ್ತು ಅಧಿಕಾರಗಳು ಸಂಪ್ರಯಾತ್ಮಕ ಸಮಾಜಗಳಲ್ಲಿನಂತೆ, ಆರೋಪಿತ ಲಕ್ಷಣಗಳ ಆಧಾರದ ಮೇಲೆ ನೀಡಲ್ಪಡುವುದಿಲ್ಲ. ಇದರ ಜೊತೆಗೆ ಆರ್ಥಿಕ ಕ್ಷೇತ್ರದಲ್ಲಿ ಮಾರುಕಟ್ಟೆಯ ಬೆಳವಣಿಗೆ, ರಾಜಕೀಯ ಕ್ಷೇತ್ರದಲ್ಲಿ ಮತದಾನ ನೀಡುವಿಕೆ ಮತ್ತು ಪಕ್ಷಗಳ ಚಟುವಟಿಕೆಗಳು ಬೆಳೆದು ಬರುತ್ತವೆ. ಈ ಅಂಶಗಳು ಆಧುನೀಕರಣದ ಲಕ್ಷಣಗಳಾಗಿವೆ.

ವಿಲ್ಬರ್ಟ್ .ಇ. ಮೂರ್‌ರವರಲ್ಲಿ (1961) ಆಧುನೀಕ ಸಮಾಜವು ವಿಶಿಷ್ಟ ರೀತಿಯ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಲಕ್ಷಣಗಳನ್ನು ಪಡೆದುಕೊಂಡಿರುತ್ತದೆ ಎಂದು ತಿಳಿಸಿದ್ದಾರೆ.

ಎಸ್.ಕೆ. ಶ್ರೀ ವಾತ್ಸವ ಅವರು ಆಧುನೀಕರಣ ಮತ್ತು ಪ್ರಸ್ತುತ ಸಮಾಜದ ಲಕ್ಷಣಗಳನ್ನು ಬೇರೆ ಬೇರೆ ಸಮಾಜ ಶಾಸ್ತ್ರಜ್ಞರು ಬೇರೆ ಬೇರೆ ರೀತಿಯಲ್ಲಿ, ಪರಿಭಾಷಿಸಿದ್ದಾರೆ. ಕೆಲವು ಚಿಂತನಕಾರರು ಮತ್ತು ಪ್ರಾಜ್ಞರು ತಿಳಿಸಿರುವ ಈ ಕೆಲವು ಲಕ್ಷಣಗಳನ್ನು ಕೆಳಗಿನ ಪಟ್ಟಿಯಲ್ಲಿ ತಿಳಿಸಲಾಗಿದೆ.

| ವಿಮರ್ಶಕರು | ವಿಜ್ಞಾನ | ಆಧುನೀಕರಣದ ಲಕ್ಷಣಗಳು |
|---|---|---|
| ಸಿರಿಲ್ ಬ್ಲಾಕ್ | ಅರ್ಥಶಾಸ್ತ್ರ | ಜ್ಞಾನದ ಬೆಳವಣಿಗೆ / ನಿಸರ್ಗದ ರಹಸ್ಯಗಳನ್ನು ಅರಿತುಕೊಳ್ಳುವ ಸಾಮರ್ಥ್ಯದ ಹೆಚ್ಚಳ ಮತ್ತು ಈ ಹೊಸ ಜ್ಞಾನವನ್ನು ಮಾನವನ ವ್ಯವಹಾರಗಳಿಗೆ ಅನ್ವಯಿಸುವಿಕೆ. |
| ಡೇವಿಡ್ ಮಾಕ್ಲೆಲ್ಯಾಂಡ್ ಅಲೆಕ್ಸ್ ಇಂಕಲ್ಸ್ | ಮನಃಶಾಸ್ತ್ರ ಸಮಾಜಶಾಸ್ತ್ರ | ಸ್ವಾವಲಂಭನೆ/ಸಾಧಕ ಮನೋಧರ್ಮ ಹೊಸ ಸಂಗತಿಗಳನ್ನು ಸ್ವೀಕರಿಸುವ ಸಿದ್ಧತಾ ಮನೋಧರ್ಮ, ವರ್ತಮಾನ ಮತ್ತು ಭವಿಷ್ಯತ್ತುಗಳಲ್ಲಿ ಆಸಕ್ತಿ, ಯೋಜನೆ ಮತ್ತು ದಕ್ಷತೆ ಅಥವಾ ಕಾರ್ಯ ಪಟುತ್ವ (efficiency)ಗಳ ಬಗೆಗಿನ ಕಾಳಜಿ, ಆಧುನಿಕ ಮಾನವನ ಲಕ್ಷಣಗಳು:ಆಂತರಿಕ: (ಮನೋಧರ್ಮ ಮತ್ತು ಮೌಲ್ಯಗಳು) ಬಾಹ್ಯ :(ಬಾಹ್ಯ ಸನ್ನಿವೇಶಗಳಲ್ಲಿ ಪರಿವರ್ತನೆ. |
| ಆಂಡರ್‌ಸನ್ | ಸಮಾಜಶಾಸ್ತ್ರ | ಕುಶಲತೆ (Skills) ಅಥವಾ ಸಾಮರ್ಥ್ಯಗಳ ಬೆಳವಣಿಗೆ ಮತ್ತು ಸೃಜನಾತ್ಮಕತೆಯ ಮನೋಧರ್ಮ. |
| ಸಿ.ಇ. ಬ್ಲಾಕ್ | ಸಮಾಜಶಾಸ್ತ್ರ | ಸಂಸ್ಥೆಗಳು ತ್ವರಿತವಾಗಿ ಬದಲಾಗುತ್ತಿರುವ ಕಾರ್ಯಗಳನ್ನು ಅಳವಡಿಸಿಕೊಳ್ಳುವಿಕೆ. |
| ಆ್ಯಪ್ಟರ್ | ರಾಜಕೀಯ ವಿಜ್ಞಾನ | ಆರ್ಥಿಕವಲ್ಲದ ಪ್ರಕ್ರಿಯೆಗಳು ನಿಯಮಾತ್ಮಕ ಸಂರಚನೀಯ, ಮತ್ತು ವರ್ತನಾತ್ಮಕ ಅಂಶಗಳಿಗೆ ಸಂಬಂಧಿಸಿದಂತೆ, ಆಯ್ಕೆ. |
| ಡಬ್ಲ್ಯೂ. ಸಿ. ಸ್ಮಿತ್ | ಇತಿಹಾಸ | ಬೌದ್ಧಿಕ ಅಥವಾ ವೈಚಾರಿಕ ಬದ್ಧತೆ |
| ಲೆವಿ | ಸಮಾಜಶಾಸ್ತ್ರ | ಶಕ್ತಿಯ ಜೈವಿಕೇತರ ಸಂಪನ್ಮೂಲಗಳು ಮತ್ತು ಸಾಧನಗಳ ಬಳಕೆ. |

ಈ ಯಾವುದೇ ಒಂದು ಸೈದ್ಧಾಂತಿಕ ನಿರೂಪಣೆ ಇನ್ನು ಸಮಾಜ ವಿಜ್ಞಾನಿಗಳಲ್ಲಿ ಒಮ್ಮತ ಮೂಡಿಸಿಲ್ಲ ಆದರೂ ವಿವಿಧ ವಿಜ್ಞಾನಿಗಳ ವಿದ್ವಾಂಸರಲ್ಲಿ ಆಧುನೀಕರಣದ ಸಾಮಾನ್ಯ ಲಕ್ಷಣಗಳು ಬಗೆಗೆ ಸ್ಪಷ್ಟ ಅಭಿಪ್ರಾಯಗಳನ್ನು ರೂಪಿಸಬೇಕೆಂಬ ಒಮ್ಮತದ ಹಂಬಲ ಕಂಡು ಬರುತ್ತದೆ. ಆಧುನೀಕರಣದ ಪ್ರದಾನ ಲಕ್ಷಣಗಳೆಂದರೆ

- ಆರ್ಥಿಕತೆಯಲ್ಲಿ ಸ್ವಾವಲಂಬನೆಯ ಒಂದು ಮಟ್ಟದ ಬೆಳವಣಿಗೆ ಅಥವಾ ಉತ್ಪಾದನೆ ಮತ್ತು ಅನುಭೋಗವನ್ನು ನಿರಂತರವಾಗಿ ಹೆಚ್ಚಿಸಲು ಸಮರ್ಥವಾದ ಪ್ರಗತಿ ಅಥವಾ ಬೆಳವಣಿಗೆ.
- ನೀತಿ ಧೋರಣೆಗಳನ್ನು ರೂಪಿಸುವಲ್ಲಿ ಒಂದು ಮಟ್ಟದಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವಿಕೆ. ಅಂದರೆ ನೀತಿ ಧೋರಣೆಗಳ ಪರ್ಯಾಯದ ಆಯ್ಕೆ ಮಾಡಿಕೊಳ್ಳಲು ಮತ್ತು ವ್ಯಾಖ್ಯೆ ಮಾಡುವಲ್ಲಿ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯ
- ವೆಬರ್ ಮತ್ತು ಪಾರ್ಸನ್‌ರವರು ತಿಳಿಸಿದ ಅರ್ಥದ [illegible] ರೀತಿಯಲ್ಲಿ ಧರ್ಮನಿರಪೇಕ್ಷ ಅಥವಾ ಜಾತ್ಯಾತೀತ ಮತ್ತು ವೈಚಾರಿಕ ನಿಯಮಾವಳಿಗಳ ಪ್ರಸರಣ.

ಸಮಾಜದಲ್ಲಿ, ಭೌತಿಕ, ಸಾಮಾಜಿಕ ಮತ್ತು ಮಾನಸಿಕ ಚಾಲನೆಗೆ ಅವಕಾಶ ಮಾಡಿಕೊಡುವಂತಹ ವ್ಯಕ್ತಿಗತ ಸ್ವಾತಂತ್ರ್ಯ ಎಂಬ ಅರ್ಥದಲ್ಲಿ ಪರಿಭಾವಿಸುವ ಚಲನಶೀಲತ್ವದ (Mobility) ಹೆಚ್ಚಳವೂ ಆಧುನೀಕರಣದ ಒಂದು ಲಕ್ಷಣವಾಗಿದೆ. ಇದರಿಂದ ಮೇಲೆ ತಿಳಿಸಿದ ರೀತಿಯಲ್ಲಿ ಅಂದರೆ ಮೇಲೆ ತಿಳಿಸಿದ ಆಧುನೀಕರಣದ ಲಕ್ಷಣಗಳನ್ನು -ವ್ಯಕ್ತಿತ್ವ ಮತ್ತು ಸಮಾಜದಲ್ಲಿ ಅಳವಡಿಸಿಕೊಂಡು ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿ ಸಮರ್ಥವಾಗಿ ಪಾಲುಗೊಳ್ಳಲು ಸಾಧ್ಯವಾಗುತ್ತದೆ.

ಆಧುನೀಕರಣವು ಮೂಲಭೂತವಾಗಿ ಸಾಮಾಜಿಕ ಪರಿವರ್ತನೆಯ ಬಗೆಗಿನ ಒಂದು ಸೈದ್ಧಾಂತಿಕ ದೃಷ್ಟಿಕೋನವಾಗಿದೆ. ಇದು ಸಮಾಜಿಕ ಪರಿವರ್ತನೆಯ ಮಾರ್ಗದಲ್ಲಿ ಏಕರೂಪತೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತದೆ. ಇದನ್ನು ಸಾಮಾಜಿಕ ಪರಿವರ್ತನೆಯ ದಿಸೆ (direction of social change) ಎಂದು ಕರೆಯಲಾಗುತ್ತದೆ. ಸಾಮಾಜಿಕ ಪರಿವರ್ತನೆಯ ಈ ಅಂಶಗಳು ಅದರ ಲಕ್ಷಣಗಳಿಗೆ ಅನ್ವಯವಾಗುತ್ತದೆ. ಆಧುನೀಕರಣವು ಸಮಾಜದಲ್ಲಿನ ಸಂರಚನೀಯ (Structural) ಅಂಶಗಳಿಗೆ ಸಂಬಂಧಿಸಿದೆ. ಇದು ಸಮಾಜದ ವಿಭಿನ್ನೀಕರಣ ಮತ್ತು ಕಾರ್ಯಾತ್ಮಕ ಸಮಾನ (functional equivalents) ತೆಗಳಿಗೆ ಅನ್ವಯವಾಗುತ್ತದೆ.

* ವೈಜ್ಞಾನಿಕ ಮನೋಧರ್ಮ.
* ಕಾರಣ (ತರ್ಕ) ಮತ್ತು ವೈಚಾರಿಕತೆ.
* ಧರ್ಮ ನಿರಪೇಕ್ಷತೆ
* ಉನ್ನತ ಧ್ಯೇಯಗಳು ಮತ್ತು ಸಾಧನೆ ನಿರ್ದೇಶಕತೆ.
* ಮನೋಭಾವನೆಗಳು, ನಿಯಮಗಳು ಮತ್ತು ಮೌಲ್ಯಗಳಲ್ಲಿ ಸಮಗ್ರ ಬದಲಾವಣೆ.
* ಹೊಸ ಕಾರ್ಯಶೀಲ ಸಂಸ್ಥೆಗಳ ಸೃಷ್ಟಿ.
* ಮಾನವ ಸಂಪನ್ಮೂಲಗಳ ಮೇಲೆ ಬಂಡವಾಳ ಹೂಡುವಿಕೆ.
* ಬೆಳವಣಿಗೆ ಅಭಿಮುಖೀ ಯೋಜನೆ.
* ಬಂಧುತ್ವ, ಜಾತಿ, ಧರ್ಮ, ಪ್ರಾಂತೀಯತೆ ಅಥವಾ ಭಾಷಾಧಾರಿತ.
  ಹಿತಾಸಕ್ತಿಗಳಿಗೆ ವಿರುದ್ಧವಾಗಿ ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ.
* ಮುಕ್ತ ಸಮಾಜ.
* ಚಲನಶೀಲ ವ್ಯಕ್ತಿತ್ವ.

• <u>ಆಧುನೀಕರಣದ ಅಳತೆಗೋಲುಗಳು *Measures of Modernization*</u>

ಆಧುನೀಕರಣದ ಅಳತೆಗೋಲುಗಳ ಬಗ್ಗೆ ಚರ್ಚಿಸುತ್ತಾ ರಸ್ಟೋವ್ ಮತ್ತು ವಾರ್ಡ್ *(1964:4)* ಈ ಅಂಶಗಳನ್ನು ಸೇರಿಸುತ್ತಾರೆ.

* ಆರ್ಥಿಕ ವ್ಯವಸ್ಥೆಯ ಔದ್ಯಮೀಕರಣ ಮತ್ತು ಕೈಗಾರಿಕೆ, ಕೃಷಿ, ಹೈನುಗಾರಿಕೆ ಇತ್ಯಾದಿಗಳಲ್ಲಿ, ಅವುಗಳಲ್ಲಿನ ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ, ವೈಜ್ಞಾನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಿಕೆ.
* ಭಾವನೆ ಅಥವಾ ವಿಚಾರಗಳ ಧರ್ಮನಿರಪೇಕ್ಷತೆ ಅಥವಾ ಜಾತ್ಯಾತೀತತೆ.

- ಭೌಗೋಳಿಕ ಮತ್ತು ಸಾಮಾಜಿಕ ಶಿಕ್ಷಣದ ಪ್ರಸರಣ.
- ಆರೋಪಿತ ಸ್ಥಾನಮಾನದಿಂದ ಸಾಧಿಕ ಸ್ಥಾನಮಾನಕ್ಕೆ ರೂಪಾಂತರ.
- ಜೀವನದ ಭೌತಿಕ ಮಟ್ಟಗಳಲ್ಲಿನ ಹೆಚ್ಚಳ.
- ಪ್ರಾಥಮಿಕ ಉತ್ಪಾದನಾ ಉದ್ಯೋಗಗಳಿಗೆ ಬದಲಾಗಿ ಮಾದ್ಯಮಿಕ ಮತ್ತು ಬೇರೆ ಬಗೆಯ ಉದ್ಯೋಗಗಳಲ್ಲಿ ಹೆಚ್ಚಾಗಿ ತೊಡಗಿರುವ ದುಡಿಮೆದಾರರ ವರ್ಗ.
- ಹೆಚ್ಚಿನ ಮಟ್ಟದ ನಗರೀಕರಣ.
- ಅಧಿಕ ಮಟ್ಟದ ಅಕ್ಷರತೆ.
- ರಾಷ್ಟ್ರೀಯ ಉತ್ಪಾದನೆಯಲ್ಲಿನ ತಲಾವಾರು ಹೆಚ್ಚಳ *(Per capita)*
- ಸಮೂಹ ಮಾಧ್ಯಮದ ಮುಕ್ತ ಪ್ರಸರಣೆ.
- ಜನನದಲ್ಲಿ ಅಧಿಕ ಜೀವಿತಾವಧಿಯ ನಿರೀಕ್ಷೆಯ ಹೆಚ್ಚಳ.

- **ಆಧುನೀಕರಣದ ಪೂರ್ವಾವಶ್ಯಕತೆಗಳು Prerequisites of Modernization**

ಯಾವುದೇ ಒಂದು ಸಮಾಜ ತನ್ನ ಸಾಂಪ್ರದಾಯಿಕ ಸ್ಥಿತಿಯಿಂದ ಆಧುನಿಕ ಸ್ಥಿತಿಗೆ ಬದಲಾಗಬೇಕಾದರೆ. ಅದರಲ್ಲಿ ಕೆಲವು ಪೂರ್ವಾವಶ್ಯಕತೆಗಳಿರ ಬೇಕಾಗುತ್ತದೆ. ಈ ಪೂರ್ವಗತ್ಯಗಳಾವುವೆಂದರೆ.

- ಉದ್ದೇಶದ ಅರಿವು ಮತ್ತು ಭವಿಷ್ಯತ್ತಿನ ಕಡೆ ಗಮನ.
- ತನ್ನ ಜಗತ್ತನು ಮಿರಿದ ಜೀವ ಅಸ್ತಿತ್ವವಿದೆ ಮತ್ತು ಇತರ ಅನೇಕ ಸಮಾಜಗಳಿವೆ ಎಂಬ ಅರಿವು.
- ತುರ್ತಿನ ಮನೋಭಾವ.
- ಅನೇಕ ಪಾತ್ರಗಳು ಮತ್ತು ಅವಕಾಶಗಳ ದೊರೆಯುವಿಕೆ.
- ನಿಷ್ಠೆ, ಚಲನಶೀಲವಾದ, ಮತ್ತು ಬದ್ಧತೆಯಿಂದ ಕೂಡಿದ ನಾಯಕತ್ವದ ಉದಯ.

ಆಧುನೀಕರಣವು ಬಹಳ ಕಠಿಣವಾದದ್ದು ಏಕೆಂದರೆ ಅದಕ್ಕೆ ಹೆಚ್ಚು ಕಡಿಮೆ ಸ್ಥಿರವಾದ ಹೊಸ ಸಂರಚನೆ ಸಮಸ್ಯೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವಂತಹ ವ್ಯವಸ್ಥೆ ಇರಬೇಕಾಗುತ್ತದೆ.

ಐಸೆನ್ಸ್ಟಾಟ್‌ರವರು ಆಧುನೀಕರಣಕ್ಕೆ ಯಾವುದೇ ಸಮಾಜದಲ್ಲಿ ಮೂರು ಸಂರಚನೀಯ ಲಕ್ಷಣಗಳಿರಬೇಕೆಂದು ತಿಳಿಸುತ್ತಾರೆ;

- ಸಂರಚನೀಯ ವಿಭಿನ್ನತೆ.
- ಸಾಮಾಜಿಕ ಚಲನಶೀಲತೆ, ಮತ್ತು
- ಸಾಪೇಕ್ಷ ರೀತಿಯಲ್ಲಿ ಕೇಂದ್ರೀಕೃತವಾದ ಮತ್ತು ಸ್ವತಂತ್ರವಾದ ಸಾಂಸ್ಥಿಕ ಚೌಕಟ್ಟು.

ಎಲ್ಲ ಸಮಾಜಗಳೂ ಏಕ ರೀತಿಯಲ್ಲಿ ಆಧುನೀಕರಣದ ಪ್ರಕ್ರಿಯೆಗೆ ಒಳಗಾಗುವುದಿಲ್ಲ ಹರ್ಬರ್ಟ್ ಬ್ಲೂಮರ್‌ರವರು ತಿಳಿಸುವಂತೆ. ಆಧುನೀಕರಣದ ಐದು ವಿಭಿನ್ನ ಮಾರ್ಗಗಳನ್ನು ತಿಳಿಯ ಪಡಿಸಬಹುದು ಅವೆಂದರೆ :

**1. ನಿರಾಕರಣ ಪ್ರತಿಕ್ರಿಯೆ (Rejective Response):**

ಒಂದು ಸಂಪ್ರದಾಯ ಬದ್ಧ ಸಮಾಜವು ಆಧುನೀಕರಣವನ್ನು ನಿರಾಕರಿಸಬಹುದು. ಈ ನಿರಾಕರಣವು ಅನೇಕ ಅಂಶಗಳಿಗೆ ಸಂಬಂಧಿಸಿದಂತೆ ಅನೇಕ ರೀತಿಯಲ್ಲುಂಟಾಗ ಬಹುದು.

**2. Disjunctive Response**

ಹಳೆಯ ಮತ್ತು ಹೊಸದರ ನಡುವಿನ ಸಂಯೋಗದ ಮತ್ತು ಸಾಂಪ್ರದಾಯಿಕತೆ ಮತ್ತು ಆಧುನಿಕತೆಯ ಸಹ-ಅಸ್ತಿತ್ವವು, ಆಧುನೀಕರಣ ಪ್ರಕ್ರಿಯೆಯಲ್ಲಿ ತಟಸ್ಥ ಅಥವಾ ನಿರ್ಲಿಪ್ತ ರೀತಿಯಲ್ಲಿ ಕ್ರಿಯಾಶೀಲವಾಗಿದ್ದು ಸಂಪ್ರದಾಯ ಬದ್ಧ ಜೀವನದ ಹೆಚ್ಚಿನ ಅಂಶಗಳ ಮೇಲೆ ಪ್ರಭಾವ ಬೀರದೇ ಹೋದಾಗ ಸಾಧ್ಯವಾಗುತ್ತದೆ.

**3. ಸ್ವಾಂಗೀಕರಣ ಪ್ರತಿಕ್ರಿಯೆ : Assimilative Response**

ಈ ಪ್ರಕ್ರಿಯೆಯು ಸಂಪ್ರದಾಯ ಬದ್ಧ ವ್ಯವಸ್ಥೆಯು ತನ್ನ ಸಂಘಟನೆಯಲ್ಲಿ ಯಾವುದೇ ಅವ್ಯವಸ್ಥೆಯನ್ನು ಮಾಡಿಸದೆ, ಆಧುನೀಕರಮ ಪ್ರಕ್ರಿಯೆಯನ್ನು ಅಂತರ್ಗತಗೊಳಿಸಿಕೊಳ್ಳುವುದಕ್ಕೆ ಅನ್ವಯವಾಗುತ್ತದೆ.

**4. ಉತ್ತೇಜನಾತ್ಮಕ ಪ್ರತಿಕ್ರಿಯೆ : Suppertive Response**

ಹೊಸ ಮತ್ತು ಆಧುನಿಕ ವಸ್ತು - ಸಂಗತಿಗಳನ್ನು ಅವು ಸಂಪ್ರದಾಯ ಬದ್ಧ ವ್ಯವಸ್ಥೆಯನ್ನು ಸದೃಢ ಅಥವಾ ಬಲಗೊಳಿಸುತ್ತದೆ ಎಂಬ ಕಾರಣದಿಂದ ಒಪ್ಪಿಕೊಳ್ಳುವುದಕ್ಕೆ ಅನ್ವಯಿಸುತ್ತದೆ.

**5. ಭಂಗಗೊಳಿಸುವ ಪ್ರತಿಕ್ರಿಯೆ : Disruptive Response**

ಈ ರೀತಿಯ ಪ್ರತಿಕ್ರಿಯೆಯಲ್ಲಿ ಅನೇಕ ಸಂದರ್ಭಗಳಲ್ಲಿ ಸಂಪ್ರದಾಯಿಕ ವ್ಯವಸ್ಥೆಯನ್ನು ಆಧುನೀಕರಣದ ಫಲವಾಗಿ ಅಗತ್ಯವಾಗುವ ಸನ್ನಿವೇಶಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವಾಗ, ಉಪೇಕ್ಷಿಸುವುದಕ್ಕೆ ಅನ್ವಯವಾಗುತ್ತದೆ.

## 25.5 ಆಧುನೀಕರಣದ ಕ್ಷೇತ್ರಗಳು ಅಥವಾ ಪ್ರಭಾವ ವಲಯಗಳು

ಆಧುನೀಕರಣದ ಕ್ಷೇತ್ರಗಳು ಎಂದರೆ, ಆಧುನೀಕರಣ ಪ್ರಕ್ರಿಯೆಯ ಪ್ರಭಾವಕ್ಕೆ ಒಳಗಾಗುವ ಸಮಾಜದ ಸಾಮಾಜಿಕ ರಚನೆಯ - ಧರ್ಮ, ರಾಜಕೀಯ, ಶಿಕ್ಷಣ ಮತ್ತು ಆರ್ಥಿಕ ಮುಂತಾದ ಮುಂತಾದ ಸಂಸ್ಥೆಗಳ ಸಮೂಹಗಳನ್ನೊಳಗೊಂಡ ಅನೇಕ ವಲಯಗಳಿಗೆ ಅನ್ವಯವಾಗುತ್ತದೆ. ಆಧುನೀಕರಣವು ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ವೈಚಾರಿಕತೆಯ ಅಂಶಗಳನ್ನು ಒಳಗೊಳ್ಳುತ್ತದೆ. ಇದಕ್ಕೆ ಮಾನವ ಸಮೂಹಗಳ ರಚನೆ ಮತ್ತು ಅವುಗಳ ಸಂಬಂಧಗಳು, ಮೌಲ್ಯಗಳು ಮತ್ತು ನಿಯಮಾವಳಿಗಳನ್ನು ಪರಿವರ್ತಿಸುವ ಸಾಮರ್ಥ್ಯವಿದೆ. ಆಧುನೀಕರಣದ ಕ್ಷೇತ್ರ ಸ್ವಾಭಾವಿಕವಾಗಿ ಅದರ ವ್ಯಾಪ್ತಿಗೆ ಅನ್ವಯವಾಗುತ್ತದೆ. ಇಲ್ಲಿ ಸಂಕ್ಷಿಪ್ತವಾಗಿ ಸಮಾಜದ ಬೇರೆ ಬೇರೆ ಅಂಶಗಳ ಮೇಲೆ ಆಧುನೀಕರಣದ ಪರಿಣಾಮಗಳನ್ನು ವಿಶ್ಲೇಷಿಸಬಹುದು.

ಆಧುನಿಕ ಸಮಾಜವು ಈ ಕೆಳಕಂಡ ಲಕ್ಷಣಗಳನ್ನು ಹೊಂದಿದೆ :

- ಅತ್ಯಂತ ಉನ್ನತ ಮಟ್ಟದ ಜ್ಞಾನವನ್ನು ವ್ಯವಸ್ಥಿತವಾದ ರೀತಿಯಲ್ಲಿ ಬಳಸಿಕೊಳ್ಳುವಿಕೆಯಿಂದ ರೂಪುಗೊಂಡ ಶ್ರೇಷ್ಠಮಟ್ಟದ ತಂತ್ರಜ್ಞಾನಾಭಿವೃದ್ಧಿ ಇದನ್ನು ಮುಖ್ಯವಾಗಿ ಕೈಗಾರಿಕಾ, ವಾಣಿಜ್ಯ ಮತ್ತು ಇತರ ಸೇವಾ ವ್ಯವಸ್ಥೆಗಳನ್ನೊಳಗೊಂಡ ಮಾಧ್ಯಮಿಕ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಲಾಗುತ್ತದೆಯೇ ಹೊರತು ಪ್ರಾಥಮಿಕ ಕ್ಷೇತ್ರವಾದ ಕೃಷಿವಲಯದಲ್ಲಿಲ್ಲ.
- ಆರ್ಥಿಕ ಪಾತ್ರಗಳ ಹೆಚ್ಚುವರಿಗೊಂಡ ವಿಶೇಷತೆ ಅಥವಾ ವೃತ್ತಿ ನೈಪುಣ್ಯತೆ.

  (ಸಾಮಾಜಿಕ ವಿಭಿನ್ನೀಕರಣಕ್ಕೆ ಅನ್ವಯವಾಗುತ್ತದೆ).

• ವಸ್ತು ಅಥವಾ ಸರಕು, ಶ್ರಮ ಮತ್ತು ಹಣದ ಮುಖ್ಯ ಮಾರುಕಟ್ಟೆಯ ವ್ಯಾಪ್ತಿ ಮತ್ತು ಸಂಕೀರ್ಣತೆಯ ಬೆಳವಣಿಗೆ.

ಹೀಗೆ ಆಧುನಿಕ ಸಮಾಜವು ಆಧುನೀಕರಣದ ದಿಸೆಯಿಂದ, ತನ್ನ ಸಾಮಾಜಿಕ ಮತ್ತು ಜನಸಂಖ್ಯಾತ್ಮಕ ಅಂಶಗಳಲ್ಲಿ ಮತ್ತು ಸಾಮಾಜಿಕ ಸಂಘಟನೆಯ ಸಂರಚನೀಯ ಅಂಶಗಳಲ್ಲಿ ಬದಲಾವಣೆಗಳನ್ನು ಅನುಭವಿಸುತ್ತದೆ.

ಸಾಮಾಜಿಕ ಚಲನೀಕರಣ (Social Mobilization) ಎಂಬ ಪದವು ಕಾರ್ಲ್ ಮಾರ್ಕ್ಸ್ ಡ್ಯೂಟ್‌ರವರು (Karl Duetsch) ರೂಪಿಸಿರುವ ಪದವಾಗಿದೆ. ಇದನ್ನು ಅವರು "ಸಮಾಜದ ಪ್ರಮುಖ, ಸಾಮಾಜಿಕ, ಆರ್ಥಿಕ, ಮತ್ತು ಮಾನಸಿಕ ಬದ್ಧತೆಯ ಅಂಶಗಳು ಸವಕಲಾಗಿ ಅವುಗಳಲ್ಲಿ ಅವ್ಯವಸ್ಥೆಯುಂಟಾಗಿ. ಜನರು ಹೊಸ ರೀತಿಯ ಸಮಾಜೀಕರಣಕ್ಕೆ ಮತ್ತು ವರ್ತನೆಗಳನ್ನು ರೂಢಿಸಿಕೊಳ್ಳುವುದಕ್ಕೆ ಸಿದ್ಧರಾಗಿರುವಿಕೆ" ಎಂಬುದಾಗಿ ವ್ಯಾಖ್ಯಾನಿಸುತ್ತಾರೆ. ಸಾಮಾಜಿಕ ಚಲನೀಕರಣದ ಕೆಲವು ಸೂಚ್ಯಂಶಗಳೆಂದರೆ, ಯಂತ್ರಗಳ ಬಳಕೆ, ಕಟ್ಟಡಗಳು, ಅನುಭೋಗಿಕ ವಸ್ತುಗಳು, ಸಮೂಹ ಮಾಧ್ಯಮಗಳಿಗೆ ಪ್ರತಿಕ್ರಿಯಿಸುವಿಕೆ; ಗೃಹಬದಲಾವಣೆ, ನಗರೀಕರಣ; ಕೃಷಿ ಸಂಬಂಧಿ ಚಟುವಟಿಕೆಗಳ ಅಥವಾ ಕೆಲಸಗಳ ಬದಲಾವಣೆ; ಅಕ್ಷರತೆ; ತಲಾದಾಯದ ಹೆಚ್ಚಳ ಇತ್ಯಾದಿ ಅಂಶಗಳಾಗಿವೆ.

ಆಧುನಿಕ ಸಮಾಜಗಳು ವ್ಯಕ್ತಿಗಳು ಚಟುವಟಿಕೆಗಳು ಮತ್ತು ತಮ್ಮ ಸಾಂಸ್ಥಿಕ ರಚನೆಗಳಿಗೆ ಸಂಬಂಧಿಸಿದಂತ ಹೆಚ್ಚು ವೈವಿಧ್ಯಮಯವಾಗಿರುತ್ತದೆ. ಇವುಗಳಿಗೆ ನೇಮಕ ಮಾಡಿಕೊಳ್ಳುವಿಕೆಯು ಪಾತ್ರ ಆರೋಪೀಕರಣ (aseription) ವನ್ನು ಅವಲಂಬಿಸಿರುವುದಿಲ್ಲ. ಬಂಧುತ್ವ ಜಾತಿ, ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಸಾಧನಾತ್ಮಕ ಅಂಶಗಳು ಪ್ರಧಾನ ಪಾತ್ರ ವಹಿಸುತ್ತವೆ. ಈ ವಿಶೇಷ ಪಾತ್ರಗಳು "ಮುಕ್ತವಾಗಿ ತೇಲುವವುಗಳು" (Free floating) ಎಂದು ಹೇಳಲಾಗುತ್ತದೆ. ಅಂದರೆ ಈ ಪಾತ್ರಗಳನ್ನು "ವ್ಯಕ್ತಿಗಳ ಆರೋಪಿತ ಲಕ್ಷಣಗಳ" ಆಧಾರದ ಮೇಲೆ ನೀಡಲಾಗುವುದಿಲ್ಲ. ಸಂಪತ್ತು ಮತ್ತು ಅಧಿಕಾರವನ್ನು ಆರೋಪಿತ ರೀತಿಯಲ್ಲಿ ಹಂಚಲ್ಪಡುವುದಿಲ್ಲ.

ಈ ಪಾತ್ರಗಳ ವೈವಿಧ್ಯೀಕರಣ ಮತ್ತು ನೈಪುಣ್ಯೀಕರಣದ ಮತ್ತೊಂದು ಪ್ರದಾನ ಅಂಶವೆಂದರೆ "ವ್ಯಕ್ತಿಯು ಹೊಂದಿರುವ ಪಾತ್ರಗಳ ಪ್ರತ್ಯೇಕೀಕರಣವಾಗಿದೆ. ಅದರಲ್ಲೂ ಉದ್ಯೋಗ ಮತ್ತು ರಾಜಕೀಯ ಹಾಗೂ ಕೌಟುಂಬಿಕ ಮತ್ತಿತರ ಪಾತ್ರಗಳು ಪರಸ್ಪರ ಪ್ರತ್ಯೇಕಿಸಲ್ಪಟ್ಟಿರುತ್ತವೆ" ಪಾತ್ರಗಳ ಪ್ರತ್ಯೇಕೀಕರಣವೆಂದರೆ, ಯಾವುದೇ ಒಂದು ಕ್ಷೇತ್ರದಲ್ಲಿ ವ್ಯಕ್ತಿ ಪಡೆದುಕೊಳ್ಳುವ ಯಾವುದೇ ? ಒಬ್ಬ ಪಾತ್ರವು ಆತ ಇನ್ನೊಂದು ನಿರ್ದಿಷ್ಟ ಪಾತ್ರವನ್ನು ಪಡೆದುಕೊಳ್ಳಲು ಅವಕಾಶವೊದಗಿಸುವುದಿಲ್ಲ. ಹೀಗೆ ಒಬ್ಬನ ಉದ್ಯೋಗಕ್ಕೆ ಸಂಬಂಧಿಸಿದ ಪಾತ್ರಗಳು ಆತ ಸಲೀಸಾಗಿ ರಾಜಕೀಯ ಅಥವಾ ಸಾಂಸ್ಕೃತಿಕ ವಲಯಗಳಲ್ಲಿ ಇತರ ಪ್ರಮುಖ ಪಾತ್ರಗಳನ್ನು ಪಡೆಯುಕೊಳ್ಳಲು ನೆರವು ನೀಡುವುದಿಲ್ಲ. ಈ ಪ್ರತ್ಯೇಕೀಕರಣದ ಮತ್ತೊಂದು ಅಂಶವೆಂದರೆ, ಸಂಪ್ರದಾಯ ಬದ್ಧ ಸಮಾಜಗಳಲ್ಲಿರುವಂತೆ ಆಧುನಿಕ ಸಮಾಜಗಳಲ್ಲಿನ ಪಾತ್ರಗಳು ಕುಟುಂಬ, ಬಂಧುತ್ವ, ಮತ್ತು ಪ್ರಾಂತೀಯತೆ ಅಥವ ಗಡಿಯ ಲಕ್ಷಣಗಳ ಆಧಾರದ ಮೇಲ ಪರಸ್ಪರ ಸೇರೀ ಹೋಗಿರುವುದಿಲ್ಲ. ಇಲ್ಲಿ ಉದ್ಯೋಗದ ಲಕ್ಷಣಗಳು ಪ್ರತಿ ಮಾನವರ ಚಟುವಟಿಕೆಗೆ ವಿಶಿಷ್ಟವಾದ ಗುರಿ ಮತ್ತು ಧ್ಯೇಯೋದ್ದೇಶಗಳ ಮೇಲೆ, ವಿಶಿಷ್ಟ ರೀತಿಯಲ್ಲಿ ರೂಪುಗೊಂಡಿರುತ್ತವೆ. ಆದ್ದರಿಂದ ಪಾತ್ರಗಳು ಬೇರೆ ಬೇರಿಯಾಗಿರುತ್ತವೆ. ಎಲ್ಲವೂ ಒಂದಾಗಿ ಬೆಸೆದುಕೊಂಡಿರುವುದಿಲ್ಲ.

ಆರ್ಥಿಕ ವಲಯದಲ್ಲಿ ಈ ಬೆಳವಣಿಗೆಗಳು, ಶ್ರೇಷ್ಠಮಟ್ಟದ ತಂತ್ರಜ್ಞಾನದ ಆಧಾರದ ಮೇಲೆ ರೂಪುಗೊಂಡು ಕೈಗಾರಿಕಾ ವ್ಯವಸ್ಥೆಯ ಬೆಳವಣಿಗೆ, ಆರ್ಥಿಕ ಪಾತ್ರಗಳ ಅಧಿಕ ನೈಪುಣ್ಯೀಕರಣ ಮತ್ತು ಆರ್ಥಿಕ ಚಟುವಟಿಕೆಯಲ್ಲಿ ಉತ್ಪಾದನೆ, ಅನುಭೋಗ ಮತ್ತು ಮಾರುಕಟ್ಟೆ ಇತ್ಯಾದಿಗಳ ಬೆಳವಣಿಗೆ ಮತ್ತು ಸರಕು ಸಾಮಗ್ರಿಗಳ ಮಾರುಕಟ್ಟೆ, ಶ್ರಮಿಕ ವರ್ಗದ ಮಾರುಕಟ್ಟೆ ಮತ್ತು ಹಣದ ಮಾರುಕಟ್ಟೆ ಹೀಗೆ ಮುಖ್ಯ ಮಾರುಕಟ್ಟೆಗಳ ವ್ಯಾಪ್ತಿ ಮತ್ತು ಸಂಕೀರ್ಣತೆಯ ಬೆಳವಣಿಗೆ - ಇತ್ಯಾದಿಗಳಲ್ಲಿ ಕಂಡು ಬರುತ್ತದೆ.

ಆಧುನೀಕರಣದ ಕ್ಷೇತ್ರಗಳನ್ನು ಸಾಮಾಜಿಕ ಸಂರಚನೆಯ ಅಂತರ್ ಸಂಬಂಧವುಳ್ಳ ಅಂಶಗಳ ಮೇಲೆ ಅದರ ಪರಿಣಾಮಗಳು ಎಂದು ಸಾರಾಂಶೀಕರಿಸಬಹುದು - ಈ ವಿವಿಧ ಅಂಶಗಳೆಂದರೆ, ಧರ್ಮ, ರಾಜಕೀಯ, ಶಿಕ್ಷಣ ಮತ್ತು ಆರ್ಥಿಕ ವ್ಯವಸ್ಥೆಗಳಾಗಿವೆ. ಆಧುನೀಕರಣವು ವಿಜ್ಞಾನ ಮತ್ತು ತಂತ್ರಜ್ಞಾನದ ಅಂಶಗಳನ್ನು ಒಳಗೊಂಡಿದೆ. ಅದು ತಂತ್ರಜ್ಞಾನ ಮತ್ತು ವೈಚಾರಿಕತೆಗಳಿಂದ ಸಂಭವಿಸುವ ಪರಿವರ್ತನೆಗಳನ್ನು ಒಳಗೊಂಡಿರುತ್ತದೆ. ಅದಕ್ಕೆ ಮಾನವ ಸಮೂಹಗಳ ರಚನೆಯನ್ನು ಮಾರ್ಪಾಡು ಸಾಮರ್ಥ್ಯವಿದೆ. -

VOP - 14 - 56·H

ಮೊದಲಿಗೆ ಆಧುನಿಕ ಸಮಾಜದ ಆರ್ಥಿಕ ವ್ಯವಸ್ಥೆಯ ಲಕ್ಷಣಗಳ ಕಡೆ ಗಮನ ಹರಿಸೋಣ.

- ಜ್ಞಾನದ ಕ್ರಮ ಬದ್ಧ ಸಮಾಜದ ಆರ್ಥಿಕ ವ್ಯವಸ್ಥೆಯ ಲಕ್ಷಣಗಳ ಕಡೆ ಗಮನ ಹರಿಸೋಣ.
- ಜ್ಞಾನದ ಕ್ರಮ ಬದ್ಧ ಬಳಕೆಯಿಂದ - ಉನ್ನತ ಮಟ್ಟದ ತಂತ್ರಜ್ಞಾನದ ಬೆಳವಣಿಗೆ - ಈ ತಂತ್ರಜ್ಞಾನದ ಬಳಕೆ ಮುಖ್ಯವಾಗಿ ಪ್ರಾಥಮಿಕ ಕ್ಷೇತ್ರವಾದ ಬೆಳವಣಿಗೆ - ಈ ತಂತ್ರಜ್ಞಾನದ ಬಳಕೆ ಮುಖ್ಯವಾಗಿ ಪ್ರಾಥಮಿಕ ಕ್ಷೇತ್ರವಾದ ಕೃಷಿಗಿಂತ, ಮಾಧ್ಯಮಿಕ ಕ್ಷೇತ್ರವಾದ, ಕೈಗಾರಿಕೆ ವಾಣಿಜ್ಯ ಮತ್ತು ಮಧ್ಯವರ್ತಿ ಅಂದರೆ, ಸೇವಾ ಕ್ಷೇತ್ರಗಳಲ್ಲಿ ಕಂಡು ಬರುತ್ತದೆ.
- ಆರ್ಥಿಕ ಪಾತ್ರಗಳ ಅಧಿಕಗೊಳ್ಳುತ್ತಿರುವ ವಿಶೇಷತೆ ಅಥವಾ ನೈಪುಣ್ಯತೆ.
- ಸರಕುಗಳು, ಶ್ರಮ ಮತ್ತು ಹಣಗಳ ಮಾರುಕಟ್ಟೆಯ ವಿಸ್ತರಣೆ ಮತ್ತು ಹೆಚ್ಚುತ್ತಿರುವ ಸಂಕೀರ್ಣತೆ.

ರಾಜಕೀಯ ವಲಯದಲ್ಲಿ ಆಧುನಿಕ ಸಮಾಜವು ಒಂದರ್ಥದಲ್ಲಿ ಪ್ರಜಾಸತ್ತಾತ್ಮಕವಾಗುರಿತ್ತದೆ ಅಥವಾ ಜನಸಾಮಾನ್ಯರಿಗೆ ಮಾನ್ಯತೆ ನೀಡುವುದಾಗಿರುತ್ತದೆ. ಜೇಮ್ಸ್ ಎಸ್ ಕೋಲ್‌ಮನ್‌ರವರು ರಾಜಕೀಯ ಆಧುನೀಕರಣದ ಮೂರು ಲಕ್ಷಣಗಳನ್ನು ಗುರುತಿಸಿದ್ದಾರೆ.

**1. ವಿಭಿನ್ನೀಕರಣ (Differentiation) :** ಇದು ರಾಜಕೀಯ ವ್ಯವಸ್ಥೆಯ ಬೆಳವಣಿಗೆಯಲ್ಲಿ ಪಾತ್ರಗಳ, ಸಾಂಸ್ಥಿಕವಲಯಗಳ ಮತ್ತು ಸಂಘಗಳ ಪ್ರಗತಿಪರ ಪ್ರತ್ಯೇಕೀಕರಣ ಮತ್ತು ನೈಪುಣ್ಯೀಕರಣಕ್ಕೆ ಅನ್ವಯವಾಗುತ್ತದೆ. ಉದಾ : ಪ್ರಜಾಸತ್ತೆಯ ಬೆಳವಣಿಗೆ ಮತ್ತು ಅಧಿಕಾರ ವಿಕೇಂದ್ರೀಕರಣ.

**2. ಸಮಾನತೆಯ ತತ್ವ ಅಥವಾ ಲಕ್ಷಣಗಳು : (Ethos of equality)**

ಸಮಾನತೆಯು ಆಧುನೀಕತೆಯ ಮುಖ್ಯ ಲಕ್ಷಣವಾಗಿದೆ. ಇದರ ಹುಡುಕಾಟ, ಮತ್ತು ಸಮಾನತೆಯ ಸಾಧನೆಯು ರಾಜಕೀಯ ಆಧುನೀಕರಣದ ಮುಖ್ಯ ತಿರುಳಾಗಿದೆ. ಇದು ಸಾರ್ವತ್ರಿಕ ವಯಸ್ಕ ನಾಗರೀಕತ್ವ, ಸರ್ಕಾರ ಮತ್ತು ನಾಗರೀಕರ ಸಂಬಂಧಗಳಿಗೆ ಸಂಬಂಧಿಸಿದಂತೆ, ಸಾರ್ವತ್ರಿಕವಾದ ಕಾನೂನು ನಿಯಮಗಳು ಇರುವಿಕೆ ಮತ್ತು ಸಾಧನೆಯ ಪ್ರಾಮುಖ್ಯತೆಗಳನ್ನು ಒಳಗೊಂಡಿರುತ್ತದೆ.

**3. ಸಾಮರ್ಥ್ಯ : (Capacity)** ಪರಿಸರವನ್ನು ತನ್ನ ಪ್ರಯೋಜನಕ್ಕಾಗಿ ಬಳಸಿಕೊಳ್ಳಲು ಮನುಷ್ಯನಿಗಿರುವ ಹೊಂದಾಣಿಕೆಯ ಮತ್ತು ಸೃಜನಾತ್ಮಕ ಸಾಮರ್ಥ್ಯ ಅಥವಾ ಅಂಥಃ ಸತ್ವಗಳು ನಿರಂತರ ವೃದ್ಧಿಯಾಗುವುದಕ್ಕೆ ಇದು ಅನ್ವಯಿಸುತ್ತದೆ.

ಸಾಂಸ್ಕೃತಿಕ ವಲಯದಲ್ಲಿ ಆಧುನೀಕರಣವು ಈ ಕೆಳಗಿನ ಲಕ್ಷಣಗಳಿಂದ ಕೂಡಿಗುತ್ತವೆ.

1. ಸಂಸ್ಕೃತಿ ಮತ್ತು ಮೌಲ್ಯತ್ಮಕ ವ್ಯವಸ್ಥೆಗಳ ಪ್ರಧಾನ ಅಂಶಗಳ ಅಂದರೆ ಧರ್ಮ, ತತ್ವಜ್ಞಾನ ಮತ್ತು ವಿಜ್ಞಾನಗಳ ಹೆಚ್ಚುತ್ತಿರುವ ವಿಭಿನ್ನೀಕರಣ.
2. ಅಕ್ಷರತೆ ಮತ್ತು ಧರ್ಮ ನಿರಪೇಕ್ಷ (ಲೌಕಿಕ) ಶಿಕ್ಷಣದ ಪ್ರಸರಣ.
3. ಬುದ್ಧಿಶಕ್ತಿಯಾಧಾರಿತ ವಿಜ್ಞಾನಗಳ ಆಧಾರದ ಮೇಲೆ ಬೆಳೆದು ಬರುವ ವಿಶೇಷ ಪಾತ್ರಗಳ ಅಭಿವೃದ್ಧಿಗಾಗಿ ಹೆಚ್ಚು ಸಂಕೀರ್ಣಮಯ ಸಾಂಸ್ಥಿಕ ವ್ಯವಸ್ಥೆ.

ಸಂವಹನ ಮಾಧ್ಯಮಗಳ ವಿಸ್ತರಣೆ.

ಸಂವಹನ ಮತ್ತು (ಸುಧಾರಣೆಗಳಿಗೆ) ವೃದ್ಧಿಪಡಿಸುವಿಕೆಗೆ, ಸುಖ ಸಂತೋಷ ಮತ್ತು ಸಾಮರ್ಥ್ಯಗಳ ಅಭಿವ್ಯಕ್ತಿಗೆ, ವ್ಯಕ್ತಿಗೆ, ನೈತಿಕ ಮೌಲ್ಯಗಳಿಗೆ, ಮತ್ತು ವ್ಯಕ್ತಿಯ ಘನತೆ ಮತ್ತು ದಕ್ಷತೆಗೆ ಒತ್ತು ನೀಡುವಂತಹ ನವ್ಯ ಸಾಂಸ್ಕೃತಿಕ (ದೃಷ್ಟಿಕೋನದ) ಮನೋಧರ್ಮದ ಬೆಳವಣಿಗೆ.

## 25.6 ಚಲನಾಶೀಲ ವ್ಯಕ್ತಿತ್ವದ ಪರಿಕಲ್ಪನೆ

ವ್ಯಕ್ತಿತ್ವವು ಯಾವುದೇ ವ್ಯಕ್ತಿಯ ವಿಶಿಷ್ಟ ನಡುವಳಿಕೆಗಳಿಗೆ ಅನ್ವಯವಾಗುತ್ತದೆ. ಆದ್ದರಿಂದ ವ್ಯಕ್ತಿತ್ವವನ್ನು ನಡುವಳಿಕೆ ಮತ್ತು ವರ್ತನೆಯ ಆಧಾರದ ಮೇಲೆ ನಿರ್ಣಯಿಸಲಾಗುತ್ತದೆ. ಮತ್ತು ಒಬ್ಬನ ವ್ಯಕ್ತತ್ವ ತನ ವರ್ತನೆಯ ಕಾರಣವಾಗಿ ರೂಪುಗೊಳ್ಳುತ್ತದೆ ಎಂದು ಹೇಳಬಹುದು. ಆಧುನೀಕರಣಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲಿ "ಚಲನಶೀಲ ವ್ಯಕ್ತಿತ್ವಕ್ಕೆ" ಕೇಂದ್ರ ಸ್ಥಾನವಿದೆ. ಅದು ವ್ಯಕ್ತಿಯ ಆಧುನೀಕರಣದ ಮಟ್ಟವನ್ನು ಗುರುತಿಸುವ ಸಾಧನವಾಗಿದೆ. ಇದು ಸ್ವಾಭಾವಿಕವಾಗಿ ಸಮಾಜದ ಸಂರಚನೆಗೆ ಸಂಬಂಧಿಸಿದ್ದಾಗಿದೆ. ಇಲ್ಲಿ ನಮ್ಮ ಪ್ರಯತ್ನ ಹೇಗೆ ಒಬ್ಬ ವ್ಯಕ್ತಿ ಒಂದು ಬಗೆಯ ಮನೋಧರ್ಮಗಳನ್ನು ಅರಿತುಕೊಳ್ಳುತ್ತಾನೆ ಎಂಬುದನ್ನು ಅರಿತುಕೊಳ್ಳುವುದಕ್ಕೆ ಮೀಸಲಾಗಿದೆ. ಚಲನಶೀಲ ವ್ಯಕ್ತಿತ್ವವು ಒಬ್ಬ ವ್ಯಕ್ತಿ ಉನ್ನತ ಮಟ್ಟದ ಅನುಸಂಧಾನತೆ (empathy)ಯನ್ನು ಬೆಳೆಸಿಕೊಳ್ಳುವಂತಹ ವ್ಯಕ್ತಿತ್ವವಾಗಿದೆ.

ಪಾಶ್ಚಿಮಾತ್ಯ ಸಮಾಜಗಳಲ್ಲಿನ ಜನ ಬದಲಾವಣೆಯ ಮನೋಧರ್ಮವನ್ನು ಸಂಪೂರ್ಣವಾಗಿ ರೂಢಿಸಿಕೊಂಡಿದ್ದರೆ, ಭಾರತದಂತಹ ಸಂಪ್ರದಾಯ ಬದ್ಧ ಸಮಾಜಗಳಲ್ಲಿ ಅಂಶಿಕ ಅಥವಾ ಬಾಗಶಃ ಬದಲಾವಣೆಯ ಪ್ರವೃತ್ತಿಗಳನ್ನು ರೂಢಿಸಿಕೊಂಡಿರುತ್ತಾರೆ. ಜನ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋದಾಗ ಅವರು ನೇರವಾಗಿ ಬದಲಾವಣೆಯ ಅನುಭವವನ್ನು ಎದುರ್ಗೊಳ್ಳುತ್ತಾರೆ. ಉದಾ: ಭಾರತದ ಚಲನಚಿತ್ರಗಳಲ್ಲಿ ಕೆಂದ್ರ ಪಾತ್ರ ತನ್ನ ಹುಟ್ಟೂರಿನಿಂದ ನಗರ ಪ್ರದೇಶಕ್ಕೆ ವಲಸೆ ಹೋದಾಗ ಆತ ಗಲಿಬಿಲಿಗೊಳ್ಳುತ್ತಾನೆ. ಮತ್ತು ಆತ ಹೊಸ ವ್ಯಕ್ತಿಗಳನ್ನು ಸಂಧಿಸಬೇಕಾಗುತ್ತದೆ. ಹೊಸ ಸಂಬಂಧಗಳನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಈ ಹಂತದಲ್ಲಿ ಅನುಸಂಧಾಸ ಪರಿಕಲ್ಪನೆ ಪ್ರಾಮುಖ್ಯತೆ ಪಡೆಯುತ್ತದೆ.

ಚಲನಶೀಲ ವ್ಯಕ್ತಿತ್ವವು ಆಧುನೀಕರಣದ ಪೂರ್ವಗತ್ಯಗಳಲ್ಲಿ ಒಂದಾಗಿದ್ದು ಎಲ್ಲದಕ್ಕೂ ಸುಲಭವಾಗಿ ಒಗ್ಗಿಕೊಳ್ಳಲು ಸಾಧ್ಯವಾಗುತ್ತದೆ. ಡೇನಿಯಲ್ ಲರ್ನರ್‌ರವರು ಆಧುನೀಕರಣ ಪ್ರಕ್ರಿಯೆಯಲ್ಲಿ ಹೇಗೆ ಭೌತಿಕ ಚಲನೆಯು ಸಾಮಾಜಿಕ ಚಲನೆಯನ್ನು ಒಳಗೊಳ್ಳುತ್ತದೆ ಎಂಬುದನ್ನು ವಿವರಿಸಿದ್ದಾರೆ. ಭೌತಿಕ ಚಲನೆಯುಂಟಾದಾಗ ಸಾಮಾಜಿಕ ಚಲನೆಯುಂಟಾಗುವ ಅಗತ್ಯವೂ ಇದ್ದು ಕ್ರಮೇಣ ಆಧುನೀಕರಣಕ್ಕೆ ಅನುಗುಣವಾದ ಸಂಸ್ಥೆಗಳು ರೂಪುಗೊಳ್ಳುತ್ತವೆ. ತಮ್ಮ ವಿಳಾಸ ಅಥವಾ ವಾಸಸ್ಥಾನವನ್ನು ಬದಲ- ಅಧಿಕ ಸಂಪಾದನೆ ಮಾಡುವ ವ್ಯಕ್ತಿಗಳಿಗೆ ತಮ್ಮ ನಿಧಿಯನ್ನು ಸಂರಕ್ಷಿಸಲು ತಮ್ಮ ನೆರೆಹೊರೆಯಲ್ಲಿ ಅನುಕೂಲ ಸ್ಥಳಬೇಕಾಗುತ್ತದೆ; ಅಲ್ಲದೆ ಅವ್ಯವಸ್ಥೆ ಮತ್ತು ಅವತಾಲೀಕರಣದಿಂದ ಅವರನ್ನು ರಕ್ಷಿಸಲು ಪೋಲಿಸು ಪಡೆ ಬೇಕಾಗುತ್ತದೆ. ಇತರರಿಗೆ ವರ್ತನೆಯ ಪ್ರಮಾಣಕಗಳನ್ನು ನಿಗದಿಪಡಿಸುವ ಅಧಿಕಾರವಾಣಿ ಬೇಕಾಗುತ್ತದೆ. ಹೀಗೆ ಸಾಮಾಜಿಕ ಪರಿವರ್ತನೆ ಸರ್ವೇ ಸಾಧಾರಣವೆಂದು ಪರಿಗಣಿಸುವ ಮೌಲ್ಯ ವ್ಯವಸ್ಥೆ ರೂಢಿಗೆ ಬರುತ್ತದೆ.

ಬದಲಾವಣೆಯ ವೇಗ ಮತ್ತು ದಿಸೆಗಳನ್ನು ನಿರ್ಣಯಿಸುವುದರಲ್ಲಿ ಕಂಡುಬರುವ ವಾದ ವಿವಾದಗಳನ್ನು ನಿವಾರಿಸಲು ಕೆಲವು ನಿಯಮಗಳನ್ನು ನಿರೂಪಿಸಬೇಕಾಗುತ್ತದೆ. ಯಾರಿಗೆ ಲಾಭವಾಗಬೇಕಿತ್ತು; ಹೇಗೆ ಮತ್ತು ಎಷ್ಟು? ಚಲನೆಯಿಂದ ಗಳಿಸಲ್ಪಡಬಹುದಾದ ಲಾಭ ಅಥವಾ ಸೌಲಭ್ಯಗಳ ಬಗೆಗೆ ಎಲ್ಲರಿಗೂ ಗೊತ್ತಾದಾಗ ಇಂತಹ ಅವಕಾಶಗಳ ಮೇಲೆ ಅಡಿತ ಸಾಧಿಸುವ ಅವಕಾಶಗಳಿಗೆ ಸಂಬಂಧಪಟ್ಟ ಘರ್ಷಣೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಪ್ರಕ್ರಿಯೆಯನ್ನು ಪಾಶ್ಚಾತ್ಯ ರೀತಿಯ ಆಸ್ತಿ ಮತ್ತು ತೆರಿಗೆ ಕಾನೂನುಗಳ ರೂಪುಗೊಳ್ಳುವಿಕೆಯಲ್ಲಿ ಗುರುತಿಸಬಹುದು ಇವುಗಳ ಮುಖ್ಯ ಉದ್ದೇಶ. ಉಳ್ಳವರನ್ನು, (haves)ಇಲ್ಲದವರ (have-nots) ನ್ನು ಅನರ್ಹಗೊಳಿಸದೆ, ಅಥವಾ ಸಂಪಾಧಿಸಲು ಪ್ರತಿ ವ್ಯಕ್ತಿಗಿರುವ ಅವಕಾಶವನ್ನು ರಕ್ಷಿಸುತ್ತಲೇ ಆಧುನಿಕ ಪಾಶ್ಚಾತ್ಯ ಸಮಾಜ ನಿರ್ಣಾಯಕವಾಗಿ ಸಾಮಾಜಿಕ ಚಲನೆಯ ದಿಕ್ಕಿನಲ್ಲಿ ಮುನ್ನಡೆಯ ತೊಡಗಿತು.

ಆಧುನೀಕರಣವು ಒಂದು ನಿರ್ಧಿಷ್ಟ ದಿಸೆಯಲ್ಲಿ ಸಾಮಾಜಿಕ ಸಂಬಂಧಗಳು ಮತ್ತು ಪರಿಸರದಲ್ಲಿ ಬದಲಾವಣೆಯಾಗುವುದನ್ನು ಒಳಗೊಳ್ಳುತ್ತದೆ ಎಂಬುದನ್ನು ನಾವು ಗಮನಿಸಲೇ ಬೇಕಾಗಿದೆ. ಈ ಬದಲಾವಣೆಗಳುಂಟಾಗ ಬೇಕಾದರೆ ಅದು ವೈಚಾರಿಕ ಮನೋಭಾವದಿಂದ ಕೂಡಿದ, ಅನೇಕ ಆಶಯಗಳನ್ನು ಮತ್ತು ಸಾಧಿಸಬೇಕೆಂಬ ಮನೋವೃತ್ತಿಯುಳ್ಳ ವ್ಯಕ್ತಿಗಳಿಂದ ಆರಂಭವಾಗ ಬೇಕಾಗುತ್ತದೆ.

ಬದಲಾವಣೆಯನ್ನು ತರುವ ಆಧುನೀಕರಣಗೊಳ್ಳುವ ವ್ಯಕ್ತಿಗಳಿಂದ ಹೊಸ ನಿರೀಕ್ಷೆಗಳು

ವ್ಯಕ್ತಿಗಳು..................... ಸಮಾಜ .....................ವ್ಯಕ್ತಿ

ಈ ಮೇಲಿನ ಚಿತ್ರ ಆಧುನೀಕರಣಗೊಳ್ಳುವ ಸಮಾಜ ಪರಿವರ್ತನೆಗೊಳ ಪಡುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ ಮತ್ತು ಈ ಬದಲಾವಣೆಗಳನ್ನು ಅಳವಡಿಸಿಕೊಳ್ಳ ಬಯಸುವ ವ್ಯಕ್ತಿಗಳು ಹೆಚ್ಚಿನ ಮಟ್ಟದ ಅನು ಸಂಧಾನ ಗುಣವನ್ನು ಹೊಂದಿರಬೇಕೆಂದು ನಿರೀಕ್ಷಿಸುತ್ತದೆ ಮತ್ತು ನಂತರ ಈ ವ್ಯಕ್ತಿಗಳು ಬದಲಾವಣೆಗಳು ಸಂಭವಿಸಲು ಕಾರಣರಾಗುತ್ತಾರೆ. ಹೀಗಾಗಿ ಇದು ಎರಡು ಮಗ್ಗಲುಳ್ಳದ್ದಾಗಿದೆ. ಚಲನಶೀಲವಾಗಿರಲು ಮತ್ತು ಹೊಸ ನಿರೀಕ್ಷೆಗಳನ್ನು ರೂಡಿಸಿಕೊಳ್ಳಲು ವ್ಯಕ್ತಿ ಅನು ಸಂಧಾನಾತ್ಮಕ ಗುಣವುಳ್ಳವನಾಗಿರ ಬೇಕಾಗುತ್ತದೆ.

ಚಲನಶೀಲ ವ್ಯಕ್ತಿತ್ವವನ್ನು ವಸ್ತುನಿಷ್ಠವಾಗಿ ಮತ್ತು ವೈಜ್ಞಾನಿಕವಾಗಿ ವಿವರಣೆ ಮಾಡಬಹುದು. ಚಲನಶೀಲ ವ್ಯಕ್ತಿಯನ್ನು ಆತ ತನ್ನ ಪರಿಸರದ ಹೊಸ ಅಂಶಗಳೊಡನೆ ಗುರುತಿಸಿಕೊಳ್ಳಲು ಆತ ಹೊಂದಿರುವ ಸಾಮರ್ಥ್ಯದಿಂದ ವಿಶಿಷ್ಟವಾಗಿ ಗುರುತಿಸಬಹುದಾಗಿದೆ. ತನ್ನ ಮಾಮೂಲಿ ಅನುಭವಗಳಿಂದ ಹೊರತಾಗಿ ಹೊಸ ನಿರೀಕ್ಷೆಗಳಿಗೆ ತನ್ನನ್ನು ತಾನು ಹೊಂದಾಣಿಕೆ ಮಾಡಿಕೊಳ್ಳಲು ಅನುವು ಮಾಡಿಕೊಡುವ ತಂತ್ರಗಳನ್ನು ಅವನು ಅಳವಡಿಸಿಕೊಳ್ಳಬೇಕಾಗಿರುತ್ತದೆ. ವ್ಯಕ್ತಿಯ ಹೆಗ್ಗುರುತನ್ನು (identity) ವಿಸ್ತಾರಗೊಳಿಸುವ ತಂತ್ರಗಳು ಎರಡು ರೀತಿಯಲ್ಲಿ ಕಾರ್ಯೋನ್ಮುಖವಾಗಿರುತ್ತವೆ.

- ತೋರ್ಪಡಿಸುವಿಕೆ (ನೇತ್ಯಾತ್ಮಕ ಅರ್ಥದಲ್ಲಿ)
- ಒಳಮುಖೀ ಅರಿವು (ಇತ್ಯಾತ್ಮಕ ಅರ್ಥದಲ್ಲಿ)

ತೋರ್ಪಡಿಸುವಿಕೆಯು ತನ್ನಲ್ಲಿನ (ಅಹಂನ) ಕೆಲವು ಆಯ್ದ ಲಕ್ಷಣಗಳನ್ನು ವಸ್ತುವಿಕೆ ಆರೋಪಿಸುವುದರ ಮೂಲಕ ಗುರುತಿಸಿಕೊಳ್ಳುವಿಕೆಯನ್ನು ಸರಳಗೊಳಿಸುತ್ತದೆ. ಬೇರೆಯವರನ್ನು ಏಕೀಕರಿಸಿಕೊಳ್ಳಲಾಗುತ್ತದೆ ಅಥವಾ ತಮ್ಮೊಡನೆ ವ್ಯಕ್ತಿ ಸೇರಿಸಿಕೊಳ್ಳುತ್ತಾನೆ. ಏಕೆಂದರೆ ಅವರೂ ತನ್ನ ಹಾಗೇ ಇರುತ್ತಾರೆ. (ಫ್ರಾಯಡ್ ಹೇಳುವಂತೆ ನೇತ್ಯಾತ್ಮಕ ಗುರುತಿಸುವಿಕೆ). ಒಳಮುಖೀ ಅರಿವು ಅಥವಾ ತೋರ್ಪಡಿಸಿಕೊಳ್ಳುವಿಕೆಯು ತನ್ನತನ ಅಥವ ಸ್ವಯಂಗೆ ವಸ್ತುಗಳಲ್ಲಿನ ಕೆಲವು ಅಪೇಕ್ಷಣೀಯ ಲಕ್ಷಣಗಳನ್ನು ಆರೋಪಿಸಿಕೊಳ್ಳುವುದರ ಮೂಲಕ ಗುರುತಿಸಿಕೊಳ್ಳುವಿಕೆಯನ್ನು ವಿಸ್ತರಿಸಿಕೊಳ್ಳಲಾಗುತ್ತದೆ -ಬೇರೆಯವರನ್ನು ಏಕೀಕರಿಸಿಕೊಳ್ಳಲಾಗುತ್ತದೆ (incorporated) ಏಕೆಂದರೆ 'ನಾನು ಅವರ ಹಾಗೆಯೇ ಇದ್ದೇನೆ'.

## 25.7 ಅನುಭೂತಿ ಶಕ್ತಿ

ಡೇನಿಯಲ್ ಲರ್ನರ್‌ರವರು ಈ ಪದವನ್ನು ತೋರ್ಪಡಿಸುವಿಕೆ ಮತ್ತು ಒಳಗೊಳ್ಳುವಿಕೆ ತಂತ್ರಗಳ (projection and Interjection) ನ್ನುಸೂಚಿಸಲು ಸಂಕ್ಷಿಪ್ತವಾಗಿ ಅನುಸಂಧಾನ ಅಥವಾ ಅನುಭೂತಿ ಪದವನ್ನು ಬಳಸಿದ್ದಾರೆ. ಈ ಮನೋವಿಶ್ಲೇಷಣಾತ್ಮಕ ಪದಕ್ಕೆ ಸೈದ್ಧಾಂತಿಕ ಉದ್ದೇಶವಿಲ್ಲ ಬದಲಾಗಿ ಪ್ರಾಯೋಗಿಕ ಉದ್ದೇಶವಿದೆ ಎಂದು ಅವರು ತಿಳಿಸುತ್ತಾರೆ.

ಇದು ಚಲನಶೀಲ ವ್ಯಕ್ತಿಗಳು ಪರಿವರ್ತನಾಶೀಲ ಸಮಾಜದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಮರ್ಥರಾಗಿರುವಂತೆ ಅನುವುಗೊಳಿಸುತ್ತದೆ. ಅನುಭೂತಿ, ಸರಳವಾಗಿ ಹೇಳಬೇಕೆಂದರೆ "ಒಬ್ಬ ವ್ಯಕ್ತಿ ತನ್ನನ್ನು ತಾನು ಇತರರು ಇರುವ ಇರುವ ಸನ್ನಿವೇಶದಲ್ಲಿ ಗುರುತಿಸಿಕೊಳ್ಳುವಿಕೆ" ಯಾಗಿದೆ. ಅನುಭೂತಿ ವ್ಯಕ್ತಿತ್ವವುಳ್ಳವನಾಗಿ ಒಬ್ಬ ವ್ಯಕ್ತಿ ತನಗಿಂತ ಭಿನ್ನವಾದ ಒಂದು ಸ್ಥಳ ಅಥವಾ ಕಾಲದಲ್ಲಿ ತನಗಿಂತ ಭಿನ್ನವಾದ ಪಾತ್ರದಲ್ಲಿರುವಂತೆ ತನ್ನನ್ನು ತಾನು ಕಲ್ಪಿಸಿಕೊಳ್ಳಬಲ್ಲ ಸಾಮರ್ಥ್ಯಉಳ್ಳವನಾಗಿರುತ್ತಾನೆ. ಅನುಭೂತಿ ಅಥವಾ ಅನುಸಂಧಾನ ಗುಣವು ಎಲ್ಲುಮುಖಿ ಚಲನೆಯ ಭಾವನೆಯನ್ನು ಹೆಚ್ಚು ಮಾಡಿ, ಒಬ್ಬ ವ್ಯಕ್ತಿ ತನ್ನ ಸಂಬಂಧಗಳ ಸಾಮಾಜಿಕ ಜಾಲಬಂಧವನ್ನು ವಿಸ್ತರಿಸಿಕೊಳ್ಳಲು ಅನುಕೂಲ ಮಾಡಿಕೊಡುತ್ತದೆ. (ನಿಷ್ಪನ್ನ ಪರಿಣಾಮ : derivative effect). ಈ ಯಾಂತ್ರಿಕ ರಚನೆ ಅಥವಾ ಲಕ್ಷಣವು ಸ್ವಭಾವ ಜನ್ಯವಾಗಿದ್ದು ಜನರು ತಮ್ಮನ್ನು ತಾವು ಉತ್ತಮ ಪಡಿಸಿಕೊಳ್ಳುವ ಉದ್ದೇಶದಿಂದ ಕಾರ್ಯಶೀಲರಾಗಿರುವಂತೆ ಪ್ರೇರೇಪಿಸುವಂತೆ ಮಾಡಬಲ್ಲದು. ಲಕ್ಷಣ ಹೆಚ್ಚಾಗುವಂತೆ ಜನರಿಗೆ

ತರಬೇತಿ ನೀಡಬಹುದು ಈ ತರಬೇತಿಯು ಸಮೂಹ ಮಾಧ್ಯಮ, ಪುಸ್ತಕಗಳು, ಚಲನಚಿತ್ರ, ರೇಡಿಯೋ ಎಲೆಕ್ಟ್ರಾನಿಕ್ ವಿಧಾನಗಳು ಇತ್ಯಾದಿಯಾದ ಜನರಿಗೆ ವೈವಿಧ್ಯಮಯ ಚರ್ವಿತ ಚರ್ವಣ ಸನ್ನಿವೇಶಗಳ ಬಗೆಗೆ ತಿಳಿಸುವ ಮತ್ತು ಅವರು ಕಲ್ಪಿಸಿಕೊಳ್ಳುವಂತೆ ಪ್ರೇರೇಪಿಸುವ ಮಾಧ್ಯಮಗಳ ಮೂಲಕ ದೊರೆಯುತ್ತದೆ. ಅನುಭೂತಿಯ ಹೆಚ್ಚಿದ ಪ್ರಸರಣದಿಂದ ಜನರ ಬಯಕೆಗಳು ಮತ್ತು ಆಶೋತ್ತರಗಳು ಅಧಿಕಗೊಂಡಿದೆ. ಆದರೆ ಈ ಆಶೋತ್ತರ ಮತ್ತು ಬಯಕೆಗಳು ಅಪೂರ್ಣ ರೀತಿಯಲ್ಲಿ ಅಸಮ ರೀತಿಯಲ್ಲಿ ಈಡೇರಿಸಲ್ಪಟ್ಟು ಜನರಲ್ಲಿ ಆಶಾಭಂಗ ಉಂಟಾಗುತ್ತದೆ. ಇದು ವಿಘಟನಾತ್ಮಕ ಅಸಮತೋಲನೆಗಳಲ್ಲಿ ಪರ್ಯವಸಾನಗೊಳ್ಳುತ್ತದೆ. ಇದನ್ನು ಗಣಿತಶಾಸ್ತ್ರದ ಸೂತ್ರದ ರೀತಿಯಲ್ಲಿ ಅರಿತುಕೊಳ್ಳುವುದಾದರೆ.

ಆಶಾಭಂಗತೆ = ಬಯಕೆ want

(Frustration) ಪಡೆ (Get)

(ಈ ವಿಷಯವಾಗಿ ಹೆಚ್ಚಿನ ಮಾಹಿತಿಗೆ : Modernization : Social Aspects - Lerner ನೋಡಿ).

- ನಿಮ್ಮ ಪ್ರಗತಿ ಪರೀಕ್ಷಿಸಿ

1. ಆಧುನೀಕರಣವು ಸಾಮಾಜಿಕ ಬದಲಾವಣೆಯ ಒಂದು ಪ್ರಮುಖ ಪರಿಕಲ್ಪನೆಗಳಲ್ಲಿ ಒಂದಾಗಿದೆ ಎಂಬುದನ್ನು ತಿಳಿಸಿ.
2. ಆಧುನೀಕರಣವು ಪ್ರಾಚೀನ ಸಾಮಾಜಶಾಸ್ತ್ರೀಯ ಸಿದ್ಧಾಂತಗಳಲ್ಲಿ ಹೇಗೆ ಪ್ರತಿ ಬಿಂಬಿತವಾಗಿದೆ ಎಂಬುದನ್ನು ವಿಶ್ಲೇಷಿಸಿ.
3. ಸಮಾಜಶಾಸ್ತ್ರಜ್ಞರ ದೃಷ್ಟಿಯಲ್ಲಿ ಆಧುನೀಕರಣದ ಲಕ್ಷಣಗಳನ್ನು ಚರ್ಚಿಸಿ.
4. ಚಲನಾ ವ್ಯಕ್ತಿತ್ವ ಮತ್ತು ಅನುಭೂತಿ ಶಕ್ತಿಗಳು ಆಧುನೀಕರಣವನ್ನು ವೇಗಗೊಳಿಸುತ್ತವೆ ಎಂಬುದನ್ನು ಪರೀಕ್ಷಿಸಿ.

## 25.7 ಸಾರಾಂಶ

20 ನೇ ಶತಮಾನದ ಅಂತ್ಯ ಹಾಗೂ 21ನೇ ಶತಮಾನದ ಪ್ರಾರಂಭದಲ್ಲಿ ಜಾಗತೀಕರಣವು ಸಮಾಜಶಾಸ್ತ್ರೀಯ ಸಾಹಿತ್ಯಕ್ಕೆ ತಡೆಯನ್ನುಂಟು ಮಾಡಿದ್ದು ಆಂತರಿಕ ಸಂಬಂಧಗಳಲ್ಲಿ ಸಂಕೀರ್ಣತೆ ಮತ್ತು ಮಾನವ ಸಾಮಾಜಿಕ ರಚನೆಯನ್ನು ನಿರೂಪಿಸುತ್ತವೆ. ಆಧುನೀಕರಣವನ್ನು ಅರ್ಥಮಾಡಿಕೊಳ್ಳುವುದು ಖಿಡ್ಡಾಯವೆನಿಸಿದರೂ ಸಾಮಾಜಿಕ ರಚನೆಯಲ್ಲಿ ಆಧುನೀಕರಣವು ಬದಲಾವಣೆಯನ್ನುಂಟು ಮಾಡಿದರೂ ಆಧುನೀಕರಣವು ಸಂಶೋಧನಾತ್ಮಕ ವಿಷಯಗಳಿಗೆ ಉತ್ತೇಜನ ನೀಡಿ ಅಭಿವೃದ್ಧಿ ಹೊಂದಿದ ಸಮಾಜಗಳು ಅಭಿವೃದ್ಧಿ ಹೊಂದಿದ ಸಮಾಜಗಳನ್ನು ಪ್ರತಿಬಿಂಬವನ್ನು ನೋಡಿಕೊಳ್ಳುವಂತಾಗಿದೆ. ಆಧುನೀಕೃತ ಸಮಾಜಗಳು ಸಂಕೀರ್ಣ ಸಾಮಾಜಿಕ ರಚನೆಯ ಲಕ್ಷಣಗಳನ್ನು ಹೊಂದಿವೆ ಮತ್ತು ಸಾಮಾಜಿಕ ತಾರತಮ್ಯದ ಫಲದಿಂದಾಗಿ ಕಾರ್ಯಾತ್ಮಕ ಪರಿಣಿತಿಯನ್ನು ತರುತ್ತವೆ. ಆಧುನೀಕರಣದ ಮುಖ್ಯ ಕೇಂದ್ರ ಬಿಂದು ಎಂದರೆ ವಿಜ್ಞಾನ ಮತ್ತು ತಂತ್ರಜ್ಞಾನದಿಂದಾಗಿ ಆರ್ಥಿಕ ಅಭಿವೃದ್ಧಿಯನ್ನುಂಟು ಮಾಡುವುದೇ ಆಗಿದೆ. ಆಧುನೀಕರಣದಿಂದಾಗಿ ಮಾನವ ಸಾಮಾಜಿಕ ರಚನೆಯ ಮೇಲೆ ಸಂಚಿತ ಪರಿಣಾಮವನ್ನುಂಟು ಮಾಡುತ್ತದೆ. ವ್ಯಕ್ತಿಗಳು ಬದಲಾವಣೆಯನ್ನು ತರುವಾಗ ಉನ್ನತ ಮಟ್ಟದ ಅನುಭೂತಿ ಶಕ್ತಿಯನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ.

## 25.8 ಪ್ರಮುಖ ಪದಗಳು

- **ಸಾಮಾಜಿಕ ರಚನೆ** : ಮಾನವ ಜೀವಿಗಳ ನಡುವಿನ ಆಂತರಿಕ ಕ್ರಿಯೆಯು ಅಲ್ಪ ಮಟ್ಟದಲ್ಲಿ ಸತತವಾಗಿ ಮತ್ತು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ ಮತ್ತು ಸಮಾಜ ಆಂತರಿಕ ಸಂಸ್ಥೆಗಳ ಸಂಬಂಧಗಳ ನಡುವೆ ಕಂಡು ಬರುತ್ತಿದ್ದ ವ್ಯಕ್ತಿಗಳ ಆಂತರಿಕ ಕ್ರಿಯೆಯನ್ನು ಒಳಗೊಂಡಿದೆ.
- **ಸಾಮಾಜಿಕ ತಾರತಮ್ಯ** : ಸಾಮಾಜಿಕ ತಾರತಮ್ಯವು ಒಂದು ಕ್ರಿಯೆಯಾಗಿದ್ದು ಸಾಂಸ್ಥಿಕ ಚಟುವಟಿಕೆಗಳು ವಿಭಜಿಸಲ್ಪಟ್ಟಿದ್ದು ಎರಡು ಅಥವಾ ಹೆಚ್ಚಿನ ಪ್ರತ್ಯೇಕತೆಯಾಗಿ ಸಾಂಸ್ಥಿಕ ಚಟುವಟಿಕೆಗಳನ್ನು ಹೊಂದಿವೆ.

- ಪ್ರಾಂತೀಯ : ಸಂಕುಚಿತ ವ್ಯಾಪ್ತಿಗೆ ಸೀಮಿತವಾದದ್ದು.

## 25.9 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

1) 25.2 2) 25.3 3) 25.4 4) 25.6 & 25.7

## 25.10 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1) ಆಧುನೀಕರಣವನ್ನು ಕುರಿತು ಟಿಪ್ಪಣಿ ಬರೆಯಿರಿ.

2) ಆಧುನೀಕರಣದ ಲಕ್ಷಣಗಳನ್ನು ವಿವರಿಸಿ.

3) ಆಧುನೀಕರಣದ ವಿವಿಧ ಕ್ಷೇತ್ರಗಳನ್ನು ವಿಶ್ಲೇಷಿಸಿ.

4) ಚಲನಾ ವ್ಯಕ್ತಿತ್ವ ಎಂದರೇನು?

5) ಅನುಭೂತಿ ಶಕ್ತಿಯನ್ನು ಕುರಿತು ಟಿಪ್ಪಣಿ ಬರೆಯಿರಿ.

1) 25.3 2) 25.4 3) 25.5 4) 25.6 5) 25.7

## 25.11 ಸಲಹಾ ಗ್ರಂಥಗಳು


1. **Learner . D , The Processes of Traditional Society**, Glancoe, Free Press, 1958.

2. **Rudolph and Rudolph, Modernity and Tradition**, Chicago, University Press, Chicago, 1958.

3. **Yogendra Singh, Modernisation of Indian Tradition**, Thomson Press, Delhi 1973.

4. **Desai A.R. (ed) Modernisation in under developed societies**, Bombay, Thacker, 1971.

5. **Singer Milton, When a Great Tradition Modernises**, Vikas, Delhi, 1972.

6. **Srinivas.M.N, Social change in Modern India**, Allied Publishers, Bombay, 1968.



- ಡಾ. ಬಿ.ಎಸ್. ಪರೇಶ್‌ಕುಮಾರ್, ಸಮಾಜಶಾಸ್ತ್ರ ಪ್ರವಾಚಕರು (ನಿವೃತ್ತ) ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - 570 006.

## ಘಟಕ 26 : ಭಾರತದಲ್ಲಿ ಆಧುನೀಕರಣ

ರಚನೆ

26.1 ಉದ್ದೇಶಗಳು

26.2 ಪರಿಚಯ

26.3 ಭಾರತದಲ್ಲಿ ಆಧುನೀಕರಣ

26.4 ಪರಂಪರೆಯ ಕಲ್ಪನೆ

26.5 ಆಧುನೀಕರಣ ಪರಿಕಲ್ಪನೆಯ ಉಗಮ

26.6 ಪರಂಪರೆ ಮತ್ತು ಆಧುನೀಕತೆಗಳ ನಡುವಿನ ಸಂಬಂಧಗಳು

26.7 ಸಾರಾಂಸ

26.8 ಪ್ರಮುಖ ಪದಗಳು

26.9 ನಿಮ್ಮ ಪ್ರಗತಿ ಪರೀಕ್ಷೆ:ಉತ್ತರಗಳು

26.10 ಘಟಕದ ಕೊನೆಯಲ್ಲಿ ಅಭ್ಯಾಸಗಳ ಮತ್ತು ಉತ್ತರಗಳು

26.11 ಸಲಹಾ ಗ್ರಂಥಗಳು

## 26.1 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನಿಮಗೆ ಕೆಲಕಂಡ ವಿಷಯಗಳನ್ನು ಅರ್ಥಮಾಡಿಕೊಳ್ಳಬಹುದು.

- ಆಧುನೀಕರಣ ಪರಿಕಲ್ಪನೆಯ ಅರ್ಥ
- ಪರಂಪರೆಯ ಅರ್ಥ
- ಆಧುನೀಕರಣದ ಪರಿಕಲ್ಪನೆಯ ಉಗಮ ಮತ್ತು
- ಭಾರತದಲ್ಲಿ ಪರಂಪರೆ ಮತ್ತು ಆಧುನೀಕತೆಯ ನಡುವಿನ ಸಂಬಂಧಗಳೇ ಆಗಿವೆ.

## 26.2 ಪರಿಚಯ

ನೀವು ಹಿಂದಿನ ಘಟಕದಲ್ಲಿ ಆಧುನೀಕರಣ, ಅದರ ಅರ್ಥ, ಲಕ್ಷಣಗಳು, ಚಲನಾ ವ್ಯಕ್ತಿತ್ವದ ಕ್ಷೇತ್ರಗಳು ಮತ್ತು ಅನುಭೂತಿ ಶಕ್ತಿಗಳನ್ನು ಅಧ್ಯಯನಮಾಡಿದ ತರುವಾಯ ಈ ಘಟಕದಲ್ಲಿ ಭಾರತದಲ್ಲಿನ ಆಧುನೀಕರಣ ಹಾಗೂ ಪರಂಪರೆ ಮತ್ತು ಆಧುನೀಕತೆಗಳ ನಡುವಿನ ಸಂಬಂಧವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಬಹುದು.

## 26.3 ಭಾರತದಲ್ಲಿ ಆಧುನೀಕರಣ

ಸಮಾಜ ಶಾಸ್ತ್ರೀಯ ಪರಿಕಲ್ಪನೆಗಳು ಅವು ಸಾಮಾನ್ಯವಾಗಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಅನ್ವಯವಾಗುವಂತೆ ಬಳಕೆ ಮಾಡಲ್ಪಟ್ಟಾಗ ಯಾವುದೇ ತೊಡಕುಗಳಿಗೂ ಅವಕಾಶ ನೀಡುವುದಿಲ್ಲ. ಹಾಗೆಯೇ ವಾಸ್ತವತೆಯನ್ನು ಪರಿಗಣಿಸಿ ಅವು ರೂಪುಗೊಂಡಾಗ ಯಾವುದೇ ತೊಡಕಿಗೂ ಕಾರಣವಾಗುವುದಿಲ್ಲ. ಆದರೆ ಆಧುನೀಕರಣ ಮತ್ತು ಪರಂಪರೆಯ ಪರಿಕಲ್ಪನೆಯನ್ನು ಭಾರತದ ಸಂದರ್ಭದಲ್ಲಿ ಬಳಸುವಾಗ ಬಹಳ ಎಚ್ಚರ ಕಾಯ್ದುಕೊಳ್ಳಬೇಕು. ಅವುಗಳ ಅರ್ಥದಲ್ಲಿನ ವ್ಯತ್ಯಾಸವನ್ನು ಗಮನವಿಟ್ಟು ಅರಿತುಕೊಳ್ಳಬೇಕಾಗುತ್ತದೆ. ಹಾಗೆಯೇ ಪರಂಪರೆ ಮತ್ತು (Traditionalism) ಪರಂಪರ್ಯಬದ್ಧತೆ ಆಧುನೀಕರಣ ಮತ್ತು ಆಧುನಿಕತೆ ಇವುಗಳ ಒಳಾಂಶಗಳಲ್ಲಿನ ವ್ಯತ್ಯಾಸವನ್ನು ಅರಿಯಬೇಕಾಗುತ್ತದೆ. ಹಾಗೆಯೇ ಕೆಲವು ಸಮಾಜಶಾಸ್ತ್ರಜ್ಞರು ಪರಂಪರೆ ಸಂಪೂರ್ಣವಾಗಿ ನೇತ್ಯಾತ್ಮಕವಾದದ್ದು, ಆಧುನೀಕತೆ ಸಂಪೂರ್ಣವಾಗಿ ತ್ಯಾತ್ಮಕವಾದುದ್ದ. ವಿವರಣೆನೀಡಬೇಕಾದ ಮತ್ತೊಂದು ತಪ್ಪುಕಲ್ಪನೆ. ಪರಂಪರೆ ಮತ್ತು ಆಧುನೀಕತೆಗೆ ಸಂಬಂಧಿಸಿದೆ. ಈ ಎರಡು ಕಲ್ಪನೆಘಲು ಒಂದು ಸ್ಥಿತಿಯ ಎರಡು ತೀವ್ರ ಭಿನ್ನ ಅಂಶಗಳನ್ನು ಸೂಚಿಸುತ್ತದೆ. ಪರಂಪರೆಯ ನಡುವೆ ಕಂಡುಬರುವ ಆಧುನೀಕತೆಯನ್ನು ಹಾದಿ ತಪ್ಪಿದ ಸ್ಥಿತಿ ಅಥವಾ ನಡವಳಿಕೆ ಎಂದು ಭಾವಿಸಲಾಗುತ್ತದೆ. ಇನ್ನೊಂದು ತತ್ವ ಶಾಸ್ತ್ರೀಯ ಅಥವಾ ಮೌಲ್ಯ ಆಧರಿತ ಕಲ್ಪನೆಯು ಆಧುನೀಕತೆ ಮತ್ತು ಪರಂಪರೆಗಳು ಪರಸ್ಪರ ತದ್ವಿರುದ್ಧವಾದವುಗಳು ಎಂಬುದಾಗಿ ಕೆಲವು ಸೈದ್ಧಾಂತಿಕ ಪಂತಗಳು ವ್ಯಕ್ತಪಡಿಸಿವೆ. ಈ ಎಲ್ಲಾ ಪರಿಕಲ್ಪನೆಗಳನ್ನು ಉನ್ನತ ಸ್ಥರದ ಅಮೂರ್ತತೆಯಲ್ಲಿ ಪರಿಶೀಲಿಸಿದಾಗ ಅವು ಎರಡು ವಿಭಿನ್ನ, ತದ್ವಿರುದ್ಧ ಪರಿಕಲ್ಪನೆಗಳಂತೆ ಕಂಡು ಬರುವುದಿಲ್ಲ. ಆದರೆ ವಾಸ್ತವತೆಯನ್ನು ಬಿಡಿಸಿ ನೋಡಿದಾಗ ಅವು ಎರಡು ವಿಭಿನ್ನ, ತದ್ವಿರುದ್ಧ ಪರಿಕಲ್ಪನೆಗಳಂತೆ ಕಂಡು ಬರುವುದಿಲ್ಲ. ಆದರೆ ವಾಸ್ತವತೆಯನ್ನು ಬಿಡಿಸಿ ನೋಡಿದಾಗ ಅಥವಾ ವಾಸ್ತವತೆಯ ವಿಶ್ಲೇಷಣಾತ್ಮಕ ಅಧ್ಯಯನ ಕೈಗೊಂಡಾಗ, ಮೇಲೆ ತಿಳಿಸಿ ವ್ಯತ್ಯಾಸವು ಈ ಪರಿಕಲ್ಪನೆಗಳ ಅರ್ಥ ಪೂರ್ಣ ಅರಿವಿಗೆ ಅವಕಾಶ ಮಾಡಿಕೊಡುತ್ತದೆ. ಇಲ್ಲಿ ಸುದೀಪ್ತ ಕವಿರಾಜ್‌ರವರ ಅಭಿಪ್ರಾಯಗಳನ್ನು ಉದಾಹರಿಸುವುದು ಅಗತ್ಯ.

"ತೃತೀಯ ಜಗತ್ತಿನಲ್ಲಿನ ರಾಜಕೀಯ ವಿಶ್ಲೇಷಣೆಯ ಕಾರ್ಯವು ಬೃಹಳ ತೊಡಕಿನ ಸಂಗತಿಯಾಗಿದೆ. ಏಕೆಂದರೆ ನಾವು ಯಾವುದೇ ಸಾಮಾಜಿಕ ವಿಜ್ಞಾನದ ಪದವನ್ನು ಬಳಕೆ ಮಾಡುವಾಗ ನಾವು ನಿರಂತರವಾಗಿ ಅದನ್ನು ಅನುಮಾನದಿಂದ ನೋಡಬೇಕಾಗುತ್ತದೆ ಮತ್ತು ಗಮನವಿಟ್ಟು ಕಾಯಬೇಕಾಗುತ್ತದೆ ಅಥವಾ ಪರಿಶೀಲಿಸಬೇಕಾಗುತ್ತದೆ. ಭಾಷೆಯ ಬಳಕೆ ಮಾಡುವುದು ಮತ್ತು ಅದರ ಹಾದಿ ತಪ್ಪಿದ ಬಳಕೆ ಮಾತ್ರ ಜಾರಿ ಹೋಗುವಿಕೆಯನ್ನು ( ಅಂದರೆ ವ್ಯತ್ಯಾಸವಾಗುವುದನ್ನು ) ಗಮನವಿಟ್ಟು ನೋಡುವುದು ಯಾವುದೇ ರೀತಿಯಲ್ಲೂ ಸರಳವಾದ ಕಾರ್ಯವಲ್ಲ".

ಸುದೀಪ್ತಕವಿರಾಜ್‌ರವರು ರಾಜಕೀಯ ವಿಶಏಷಣೆಯ ಬಗೆಗೆ ಹೇಳಿರುವುದು ನಮ್ಮ ಪ್ರಸ್ತುತ ಚರ್ಚೆಗೂ ಅನ್ವಯವಾಗುತ್ತದೆ.

ನಾವು 'ಆಧುನಿಕರಣ ಮತ್ತು ಪರಂಪರೆ' ಮತ್ತು 'ಆಧುನಿಕತೆ' ಮತ್ತು ' ಪರಂಪರೆ ಅಥವಾ ಸಂಪ್ರದಾಯ ಬದ್ಧತೆ'(Traditionalism) ಇವುಗಳ ನಡುವಿನ ಸಂಬಂಧವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡುವುದು ಸರಿಯೆನ್ನಿಸುತ್ತದೆ.

ಆಧುನೀಕತೆಯು ಒಂದು ಮನಃಸ್ಥಿತಿಯಾಗಿದೆ. ಅದು ಆಧುನಿಕ ಸಂಕೀರ್ಣ ಸಮಾಜಗಳ ತ್ವರಿತ ಬಗೆಯ ಬದಲಾಗುವ ಸನ್ನಿವೇಶಗಳಿಗೆ ವ್ಯಕ್ತಿ ಆಂತರಿಕವಾಗಿ ಹೊಂದಾಣಿಕೆ ಮಾಡಿಕೊಳ್ಳುವಂತೆ ಅನುಗೊಳಿಸುವ ಮಾನವ ಪ್ರಜ್ಞೆಯಲ್ಲಿನ ಕೆಲವು ಅಂಶಗಳನ್ನು ರೂಪಿಸುತ್ತದೆ. ಅದು ವೈಜ್ಞಾನಿಕ ಮತ್ತು ವೈಚಾರಿಕ ವಿಶ್ವದೃಷ್ಟಿಕೋನವನ್ನು ಸೂಚಿಸುತ್ತದೆ ಮತ್ತು ಸಾರ್ವತ್ರಿಕ ಧರ್ಮ ನಿರಪೇಕ್ಷ (ಜಾತ್ಯಾತೀತ) ಮೌಲ್ಯವನ್ನು ಎತ್ತಿಹಿಡಿಯುತ್ತದೆ.

ಆಧುನಿಕರಣದ ಬಗೆಗೆ ಹೇಳುವುದಾದರೆ ಅದು ಸಾಮಾಜಿಕ ರಚನೆಯಲ್ಲಿನ ಪಾತ್ರಗಳು, ಸ್ಥಾನಮಾನಗಳು, ಉದ್ಯೋಗಗಳ ವೈವಿಧ್ಯೀಕರಣಗಳ ಮೂಲಕ ಪರಿವರ್ತನೆಯನ್ನುಂಟು ಮಾಡುವ ಒಂದು ಸಂಕೀರ್ಣಪ್ರಕ್ರಿಯೆ ಎಂಬುದಾಗಿ ವ್ಯಾಖ್ಯಾನಿಸಲಾಗಿಲ್ಪಟ್ಟಿದೆ. ಆಧುನೀಕತೆಯು (Modernity) ಆಧುನೀಕರಣದ ಉಪ ಶಾಖೆಯಾಗಿದೆ.

## 26.4 ಪರಂಪರೆಯ ಪರಿಕಲ್ಪನೆ

ಈ ಪರಿಕಲ್ಪನೆಯು ಗೋಚರಿಸುವ ಅಂಸಗಲಿಂದ ಅದರ ಸತ್ಯಾಸತ್ಯತೆಯನ್ನು ನಿರೂಪಿಸುವಂತಹ ಒಂದು ವಾಸ್ತವಿಕತೆಯ ಭಾವನೆಯುಂಟು. (ಈ ಪರಿಕಲ್ಪನೆಯ ಮುಖ್ಯಾಂಶವು ಅದು ಸ್ವಯಂ ನಿರೂಪಣಾ ಅಥವಾ ಸ್ವವೇಧಅಯವಾದ ಪರಿಕಲ್ಪನೆ ಎಂಬುದಕ್ಕೆ ಅನ್ವಯವಾಗುತ್ತದೆ) ನಾವು ಈಗ ಪರಂಪರೆಯು ಒಂದು ಪರಿಕಲ್ಪನೆಯಾಗಿ ಹೇಗೆ ವಾಸ್ತವೀಕತೆಯನ್ನು ವಿವರಿಸುತ್ತದೆ ಎಂಬುದನ್ನು ಪರಿಶೀಲಿಸೋಣ. ವಿ.ಕೆ.ಆರ್.ವಿ. ರಾವ್ ರವರು ಪರಂಪರೆಯನ್ನು " ಸಂಸ್ಥೆಗಲನ್ನಿಲ್ಲನ ಅಂಗಾಂಶಗಳಾಗಿ ರೂಪುಗೊಳ್ಳುವ ಹವ್ಯಾಸಗಳು, ಸಂಪ್ರದಾಯಗಳು, ಮನೋಧರ್ಮಗಳು, ಜೀವನ ವಿಧಾನಗಳು "ಎಂದು ತಿಳಿಸುತ್ತಾರೆ. ಇವು ಈ ಸಂಸ್ಥೆಗಳ ದೃಡತೆ ಮತ್ತು ಸ್ವತಂತ್ರ ಅಸ್ತಿತ್ವದ ದೆಸೆಯಿಂದ ತಟಸ್ಥವಾಗಿ ಮುಂದುವರಿಸಿಕೊಂಡು ಬರುತ್ತವೆ"

ಕೆಲವು ಹೊಳವುಗಳಿಂದ ಕೂಡಿದ್ದರೂ ಕೂಡ ರಾವ್‌ರವರ ವ್ಯಾಖ್ಯೆಯು ಪರಂಪರೆಯ ಸಂಪೂರ್ಣ ಅರ್ಥ ನೀಡುವಲ್ಲಿ ವಿಫಲಗೊಂಡಿದೆ ಮತ್ತು ಪರಂಪರೆ ಪೂರ್ಣವಾಗಿ ತಟಸ್ಥ ಅಥವಾ ಅಪರಿವರ್ತನಾ ಶೀಲವಾದುದಲ್ಲ.

ಜೇಕಬ್ ಕ್ಯಾಟ್ಸ್‌ರವರು " ಪರಂಪರೆಯು ವ್ಯಕ್ತಿಯ ಆಲೋಚನೆ ಮತ್ತು ಕ್ರಿಯೆಗಳಿಗೆ ಮಾರ್ಗದರ್ಶನ ಮಾಡುವ ಮಾದರಿಯನ್ನು, ಪರಿಕಲ್ಪನೆಗಳಶ್ರೇಣಿಯನ್ನು ಸ್ವೀಕೃತ ನಿಯಮಗಳು ಮತ್ತು ನೀತಿಗಳನ್ನು ರೂಪಿಸುತ್ತದೆ. ಇದನ್ನು ಒಂದು ತರ್ಕಪೂರ್ಣ ಕಾರ್ಯಾತ್ಮಕ ವ್ಯಾಖ್ಯೆ ಎಂದು ಅಂಶೀಕರಿಸಬಹುದು. ಒಂದು ಪಾರಂಪರಿಕ ಸಮಾಜವು ತನ್ನ ಅಸ್ಥಿತ್ವವವುಹಿಂದಿನಿಂದ ಏಕರೂಪದ ಜ್ಞಾನಮೌಲ್ಯಗಳ ಆಧಾರದ ಮೇಲೆ ನಿಂತಿದೆ ಎಂದು ಭಾವಿಸುವ ಒಂದು ಬಗೆಯ ಸಮಾಜವಾಗಿದೆ.

ಪರಂಪರಾಗತ ಸಮಾಜದ ರಚನೆಯು ಆಧುನೀಕರಣ ಪ್ರಕ್ರಿಯೆಗೆ ಅಗತ್ಯವಾದ (ವಿಭಿನ್ನತೆ) ವೈವಿಧ್ಯತೆಯ ಕೊರತೆಯಿಂದ ಕೂಡಿರುತ್ತದೆ.

ವಿಭಿನ್ನತೆಯ ಕೊರತೆ ಎಂದರೆ ಸರಳವಾದ ಪಾತ್ರಗಳು, ಸಂಸ್ಥೆಗಳಿಂದ ಕೂಡಿದ ಸಾಮಾಜಿಕ ರಚನೆಯಿರುವುದು ಎಂದರ್ಥ. ಉದಾಹರಣೆಗೆ: ಅದರ ಆರ್ಥಿಕ ವ್ಯವಸ್ಥೆ ಸರಳವಾಗಿರುತ್ತದೆ. ಸರಳವಾದ ಉದ್ಯೋಗಗಳಿರುತ್ತವೆ. ವಿಶ್ಲೇಷತೆ ಇರುವುದಿಲ್ಲ. ತತ್ಪರಿಣಾಮವಾಗಿ ಕಡಿಮೆ ಉತ್ಪಾದನೆ ಮತ್ತು ಸಾಂಸ್ಕೃತಿಕ ಮತ್ತು ಸಾಂಕೇಧಿಕ ಕ್ಷೇತ್ರಗಲ ಮೇಲೆ ಅದರ ಪ್ರಭಾವ ಹೆಚ್ಚಾಗಿರುವುದಿಲ ಆಗಸ್ಟ್ ಕೋಮ್ಟ್‌ನ ಕಾಲದಿಂದಲೂ ಸಮಾಜದ ಬಗೆಗಿನ ಸಮಾಜ ಶಾಸ್ತ್ರವನ್ನು ತಿಳಿಯಪಡಿಸ ಬಯಸುನಗೇನೆಂದರೆ ಸಮಾಜ ಅನೇಕ ಭಾಗಗಳ ಅಥವಾ ಅಂಗಗಳ ಸಾರ್ವತ್ರಿಕ ಅಂತರ್ ಸಂಬಂದಗಳಿಂದುಂಟಾಗಿದೆ; ಒಂದು ಅಂಶದಲ್ಲಿ ಬದಲಾವಣೆ ಉಂಟಾದ ಅದರ ದೆಸೆಯಿಂದ ಬೇರೆ ಅಂಶಗಳಲ್ಲೂ ಬದಲಾವಣೆ ಸಂಭವಿಸುತ್ತದೆ. ಈ ಮೇಲಿನ ವಾದದಂತೆ ಆಧುನೀಕರಣ ಉಂಟಾದಾ ಏನಾಗಬಹುದು [illegible] ಬಗೆಗೆಗ ಯಾರೇ ಆಗಲಿ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ. ಒಂದು ಕ್ಷೇತ್ರದಲ್ಲಿ ಆಧುನೀಕರಣ ಉಂಟಾದ [illegible] ಅದು ಇತರ ಕ್ಷೇತ್ರದಲ್ಲೂ ಪರಿವರ್ತನೆ [illegible] ಮಾಡಿಕೊಡುತ್ತದೆ. ಭಾರತವು ಆಧುನೀಕತೆ [illegible] ಪರಂಪರೆಯ

ನಡುವಿನ ಸಂಬಂಧದ ವಿಶ್ಲೇಷಣಾತ್ಮಕ ಪರಿಶೀಲನೆಗೆ ಒಂದು ವಿಶಿಷ್ಟ ಉದಾಹರಣೆಯನ್ನೊಗಿಸುತ್ತದೆ. ಇದನ್ನು ಪ್ರೊ. ಯೋಗೇಂದ್ರ ಸಿಂಗ್‌ರವರು ' ಭಾರತೀಯ ಪರಂಪರೆಯ ಆಧುನೀಕರಣ ಎಂದು ಕರೆದಿದ್ದಾರೆ.

ಸುಸುನ್ನೆ ಎಚ್. ರುಥಾಲ್ಫ್ ಮತ್ತು ಲಾಯ್ಡ್ ಐ. ರುಥಾಲ್ಫ್‌ರವರು ಆಧಿನಿಕತೆ ಮತ್ತು ಪರಂಪರೆಯ ಈ ಒಡನಾಟವನ್ನು ' ಪರಂಪರೆಯ ಆಧುನಿಕತೆ' ಎಂದು ಕರೆದಿದ್ದಾರೆ.

ಆಧುನೀಕತೆಯು ವೈಚಾರಿಕ ಮತ್ತು ಸ್ವಯ ಮತ್ತು ವಿಜ್ಞಾನಗಳ ಗೆಲುವಿನಿಂದ ಕೂಡಿದ ಭಾವನಗಳು ಅಥವಾ ಆಯೋಚನೆಳ ಮತ್ತು ಶೈಲಿಗಳಿಗೆ ಅಲ್ವಯವಾಗುತ್ತದೆ. ಮಾನವರು ಪರಸ್ಪರರ ಕ್ರಿಯೆಗಳಿಗೆ ಅರ್ಥ ನೀಡಿ ವಿವರಣೆ ಮಾಡುತ್ತಾರೆ. ಇದು ಮೂಲ ಸ್ತಂಬವಾಗಿದೆ. ಸಂಸ್ಥೆಗಳು, ಸಂಘಟನೆಗಳೂ ಕೂಡ ಇದೇ ರೀತಿ ಮಾಡುತ್ತವೆ.

ಭಾರತದಲ್ಲಿ ಪರಂಪರೆ ಆಧುನೀಕತೆಯ ಜೊತೆ ಮುಖಾಮುಖಿಯಾದಾಗ ಸಮಾಜದ ರಚನೆ ಮತ್ತು ಉಪರಚನೆಗೆಲಮೇಲೆ ಅನೇಕ ಬಗೆಯ ಪರಿಣಾಮಗಳುಂಟಾಗುವುವು. ಆದ್ದರಿಂದ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ.

ಅವುಗಳನ್ನು ಹೀಗೆ ವಿಂಗಡಿಸಬಹುದು

- ಹಿಂದೂ ಧರ್ಮ ಮತ್ತು ಇಸ್ಲಾಂನ ಪ್ರಮುಖ ಪರಂಪರೆಗಳು ಆಧುನಿಕತೆಯ ಅಗತ್ಯಗಳಿಗೆ ಹೇಗೆ ಪ್ರತಿಕ್ರಿಯಿಸಿದವು?
- ಹೇಗೆ ರಾಜಕೀಯ ಆರ್ಥಿಕ ಮತ್ತು ಉದ್ಯೋಗಿಕ ಸಂರಚನೆಗಳು ಅಥವಾ ಸಾಮಾಜಿಕ ವಿಧಗಳು ಅಂದರೆ ಗಣ್ಯವರ್ಗ, ಉದ್ಯೋಗಸ್ಥ ಸಮೂಹಗಳು, ಕಾರ್ಮಿಕ ವರ್ಗಗಳು ಇತ್ಯಾದಿ ಆಧುನೀಕರಣದ ದಿಸೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಪರಿವರ್ತನೆಗಳನ್ನು ಮಾಡಿಕೊಂಡವು?
- ಜಾತಿ, ಕುಟುಂಬ ಮತ್ತು ಗ್ರಾಮೀಣ ವ್ಯವಸ್ಥೆಗಳು ಹೇಗೆ ಆಧುನೀಕರಣದ ದಿಸೆಯಲ್ಲಿ ಒಡನಾಟದಲ್ಲಿ ತೊಡಗಿದ್ದವು?
- ಆಧುನೀಕರಣದ ಭವಿಶ್ಯತ್ತಿನ ಪ್ರಮುಖ ಸಮಸ್ಯೆಗಳಾವುವು?

ಟಾಲ್ಕಾಟ್ ಪಾರ್ಸ್‌ನ್ಸ್ ರವರ ಪ್ರಕಾರ ಯಾವುದೇ ಸಾಮಾಜಿಕ ವ್ಯವಸ್ಥೆಯ ಆಂತರಿಕ ನಮೂನೆ, ವ್ಯವಸ್ಥೆಯ ರಕ್ಷಣೆಯು ನೌಲ್ಯಗಳ ಆಧಾರದ ಮೇಲೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಯೋಗೇಂದ್ರ ಸಿಂಗ್‌ರವರು ತಿಳಿಸುವಂತೆ, ಆಧುನೀಕರಣದ ಆರಂಭಕ್ಕಿಂತ ಮುಂಚಿನ ಸಮಯದಲ್ಲಿ ಭಾರತೀಯ ಸಮಾಜದ ಪೂರ್ಣ ಸಾಮಾಜಿಕ ವ್ಯವಸ್ಥೆಯ ಏಣಿ ಶ್ರೇಣಿ, ತತ್ವಗಳು( ಹೋಲಿಸಂ) ಸಮಷ್ಟಿ ತತ್ವ, ನಿರಂತರತೆ ಮತ್ತು ಅಲೌಕಿಕತೆ (ಟ್ರಾನ್ಸೆಂಡೆನ್ಸ್) ತತ್ವಗಳ ಆಧಾರದ ಮೇಲೆ ಸಂಘಟಿಸಲ್ಪಟ್ಟಿದೆ. ಈ ನಾಲ್ಕು ತತ್ವಗಳು ಬಾರತೀಯ ಸಾಮಾಜಿಕ ಸಂರಚನೆಯ ಇತರ ಅಂಶಗಳಲ್ಲಿ ಆಳವಾಗಿ ಪರಸ್ಪರ ಹೆಣೆದುಕೊಂಡಿದೆ. ಏಣಿ-ಶ್ರೇಣಿ ತತ್ವವು ಜಾತಿ ಮತ್ತು ಉಪಜಾತಿ ಸ್ತರವಿನ್ಯಾಸದಲ್ಲಷ್ಟೇ ಅಲ್ಲದೆ, ಮಾನವ ಸ್ವಬಾವದ ಬಗೆಗಿನ ಹಿಂಧೂ ಪರಿಕಲ್ಪನೆಯಲ್ಲಿ, ಉದ್ಯೋಗಗಳು, ಜೀವನ ಚಕ್ರಗಳಲ್ಲಿ (ಆಶ್ರಮಗಳು) ಮತ್ತು ನೈತಿಕ ಕರ್ತವ್ಯಗಳಲ್ಲೂ ಕೂಡ ಹಾಸುಹೊಕ್ಕಾಗಿವೆ. ಸಮಷ್ಟಿ ತತ್ವವು (Holism) ವ್ಯಕ್ತಿ ಮತ್ತು ಸಮೂಹಗಳ ಸಂಬಂಧಕ್ಕೆ ಅನ್ವಯಿಸುತ್ತದೆ. ವ್ಯಕ್ತಿಯು ಸಮಷ್ಟಿಯಲ್ಲಿ ಸೇರಿಹೋಗಿ ಸಮಷ್ಟಿಗೆ ಧೀನವಾಗಿರುವುದಕ್ಕೆ ಅನ್ವಯಿಸುತ್ತದೆ. ಸಮೂಹವು (ಸಂಘವು) ವ್ಯಕ್ತಿಗಿಂತ ಇಗಿಲಾಗಿದ್ದು ಕುಟುಂಬ , ಜಾತಿ, ಗ್ರಾಮ ಸಮೂದಾಯ, ಜಾತಿ ರಾಜಕೀಯ ಗಡಿ ಪ್ರದೇಶ ಅಥವಾ ರಾಷ್ಟ್ರಗಳು ವ್ಯಕ್ತಿಗಿಂತ ಮುಖ್ಯವಾಗುತ್ತವೆ. ಕರ್ಮತತ್ವ, ಆತ್ಮದ ಪುನರ್ಜನನ ಮತ್ತು ಪರಿವರ್ತನೆಯ ಚಕ್ರಸಿದ್ಧಾಂತಗಳು ಪಾರಂಪರಿಕ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿನಿಧಿಸುತ್ತವೆ.

(Transendence) ತತ್ವವು , ಅಪವಿತ್ರವಾದ ಅಥವಾ ಪವಿತ್ರದಲ್ಲಿನ ಮೌಲ್ಯಮಾಪನ ಅಂಶಗಳ ಆಧಾರದ ಮೇಲೆ, ಮೌಲ್ಯಗಳ ನ್ಯಾಯ ಬದ್ಧತೆಯನ್ನು ಪ್ರಶ್ನಿಸಲಾಗದೆ ಇರುವುದಕ್ಕೆಲ ಅನ್ವಯವಾಗುತ್ತದೆ.

ಇಡೀ ಭಾರತೀಯ ಸಮಾಜದ ಆದರ್ಶ ಸಾಮಾಜಿಕ ಸಂರಚನೆಯಲ್ಲಿ ಹಾಸು ಹೊಕ್ಕಾಗಿರುವ ಏಣಿ- ಶ್ರೇಣಿ ತತ್ವದ ಬಗೆಗೆ ಮಾತನಾಡುತ್ತಾ ಲೂಯಿ ಡ್ಯೂಮಾರವರು (Law's Duimant ) ಭಾರತೀಯ ಸಮಾಜದ ಸ್ವರೂಪವನ್ನು ಪರಿಶುದ್ಧತೆ ಮತ್ತು ಅಪರಿಶುದ್ಧತೆ

(Purity and un purity) ಅಂಶಗಳು ನಿರ್ಧರಿಸುತ್ತವೆ. ಈ ರೀತಿಯ ಮೌಲ್ಯಾತ್ಮಕ ಅಂಶಗಳ ಮೇಲೆ ರೂಪುಗೊಂಡ ಪಾರಂಪರಿಕ ಸಂಘಟನೆ ಭಾರತೀಯ ಸಮಾಜಕ್ಕೆ ಮಾತ್ರ ವಿಶಿಷ್ಟವಾದದ್ದು ಎಂದೇನೂ ಭಾವಿಸಬೇಕಾಗಿಲ್ಲ ಇದೇ ರೀತಿಯ ಸಂಗತಿಗಳು ಪಾರಂಪರಿಕ ಪಾಶ್ಚಾತ್ಯ ಸಮಾಜಗಳಲ್ಲೂ ರೂಢಿಯಲ್ಲಿದ್ದವು.

ಎಸ್.ಎನ್. ಐಸೆನ್‌ಸ್ಟಾಟ್‌ರವರು " ಆಧುನಿಕತೆಯು ಯೂರೋಪಿನಲ್ಲಿ ಒಂದಾದ ಮೇಲೊಂದರಂತೆ ಘಟಿಸಿದ ಐತಿಹಾಸಿಕ ಪ್ರಕ್ರಿಯೆಗಳಿಂದ ರಬಪುಗೊಂಡಿತು ಮತ್ತು ಹೊಸ ಸಾಮಾಜಿಕ ಸಂರಚನೆಗಳು ಮತ್ತು ಸಂಘಟನೆಗಳನ್ನು ರೂಪಿಸಿದಷ್ಟೇ ಅಲ್ಲದೆ ಹೊಸ ನಾಗರೀಕತೆಯನ್ನು ಸೃಷ್ಟಿಸಿತು. ಇದನ್ನು 'ಮಹಾನ್ ಪರಂಪರೆ' ('Great Tradition') ಈ ಪ್ರಕ್ರಿಯೆಗಳು, ಮಹಾನ್ ರಾಜಕೀಯ ಕ್ರಾಂತಿಗಳು ಮತ್ತು ವಿಜ್ಞಾನ ಮತ್ತು ವೈಚಾರಿಕತೆಯ ಸಂಚಯನಾತ್ಮಕ ಅಭಿವೃದ್ಧಿಯ ದೆಸೆಯಿಂದ ಬೆಳೆದು ಬಂದವು. ಐತಿಹಾಸಿಕವಾಗಿ ಭಾರತದಲ್ಲಿ ಸಾಮಾಜಿಕ ಸಂರಚನೆ ಮತ್ತು ಪರಂಪರೆಗಳು ಆಧುನೀಕತೆಯ ಪ್ರಮುಖ ಅಂಶಗಳಿಂದ ಪಾಶ್ಚಾತ್ಯ ಸಮಾಜದ ಸಂಪರ್ಕ ವಸಾಹತುಗಳ ಬೆಳವಣಿಗೆಯ ಮೂಲಕ ಉಂಟಾಗುವವರೆಗೂ ಅಬೇದ್ಯವಾಗಿಯೇ ಉಳಿದವು. ನಾವು ಆಧುನೀಕರಣವನ್ನು ಒಂದು ಸಾಪೇಕ್ಷ ಪ್ರಕ್ರಿಯೆಯಾಗಿ ಪರಿಗಣಿಸಿದ್ದಾರೆ. ಇಸ್ಲಾಂ ಮತ್ತು ಹಿಂದೂ ಧರ್ಮಗಳ ಎರಡು ಮಹಾನ್ ಪರಂಪರೆಗಳ ನಡುವಿನ ಸಂಪರ್ಕದ ಪರಿಣಾಮಗಳನ್ನು ವಿಶ್ಲೇಷಿಸಬೇಕಾಗುತ್ತದೆ.

ಭಾರತೀಯ ಸಮಾಜದಲ್ಲಿ ಮುಖ್ಯ ಮಾರ್ಪಾಡುಗಳನ್ನುಂಟುಮಾಡುವಲ್ಲಿ ಇಸ್ಲಾಂ ಏಕೆ ವಿಫಲವಾಯಿತು.?

Why Islam Failef is Brining Major Transformation in Indian Society?

ಪ್ರೊಫೆಸರ್ ಯೋದೇಂದ್ರಸಿಂಗ್‌ರವರು ತಮ್ಮ ಪಾಂಡಿತ್ಯಪೂರ್ಣ ಚರ್ಚೆಯಲ್ಲಿ ವರ್ಣಮಯ ವಾದ...ನ್ನು ಪ್ರಕತಿಪಾದಿಸಿದ್ದು ಇವ... ಸಮಾಜ ಶಾಸ್ತ್ರಜ್ಞರು ವೈಜ್ಞಾನಿಕ ಪಥದಲ್ಲಿ ಮುನ್ನಡೆಯಲು ನೆರವು ನೀಡುತ್ತದೆ. ಪ್ರೊ. ಸಿಂಗ್‌ರವರ ಪ್ರಕಾರ ಇಸ್ಲಾಂ ಪರಂಪರೆಯ ಬಲವರ್ಧನೆ ಮಾಡಿತು. ಇಸ್ಲಾಂ ಹಿಧೂದರ್ಣಕ್ಕಿಂತ ಅನೇಕ ಅಂಶಗಳಲ್ಲಿ ಮೂಲಭೂತವಾಗಿ ವಿಭಿನ್ನವಾಗಿದೆ. ಆದರ್ಶ ರೀತಿಯಲ್ಲಿ ಅದು ತನ್ನ ಸಮೂದಾಯದೊಳಗೆ. ಸ್ತರ ವಿನ್ಯಾಸಕ್ಕೆ ಅಥವಾ ವ್ಯಕ್ತಿಗಳ ಶ್ರೇಣಿಕೃತ ವಿಭಾಗೀಕರಣಕ್ಕೆ ಅವಕಾಶ ನೀಡುವುದಿಲ್ಲ. ಅದರ ಪ್ರಾಪಂಚಿಕ ದೃಷ್ಟಿಯುಹಿಂಧೂ ಧರ್ಮದ ದೃಷ್ಟಿಕೋನವಾದ ನಿರಂತರತೆ ಮತ್ತು ಲೌಕಿಕ ಅನುಭವ ಮೀರಿನಿಂತ ಅಲೌಕಿಕ ಅನುಭವ ಪಡೆದ (Transdance) ತತ್ವಕ್ಕೆ ವಿರುದ್ಧವಾದ ಪ್ರವಾದಿಕ - ಐತಿಹಾಸಿಕ (Massainichistorical) ವಾದದ್ದಾಗಿದೆ. ಇಸ್ಲಾಂ ಕಟ್ಟುನಿಟ್ಟಾಗಿ ಏಕದೇವೋಪಾಸನೆಯ ಧರ್ಮವಾಗಿದ್ದು ಹಿದೂಗಳ ಬಹುದೇವತಾರಾಧನೆಗೆ ವಿರುದ್ಧವಾಗಿದೆ. ಸಮಷ್ಟಿ ತತ್ವ (Holism) ಇಸ್ಲಾಂನಲ್ಲಿದ್ದರೂ ಕೂಡ ಅದು ಹಿಂದೂ ಧರ್ಮದ ಸಮಷ್ಟಿ ತತ್ವಕ್ಕಿಂತ ಭಿನ್ನವಾದದ್ದಾಗಿದೆ. ಈ ಅಂಶಗಳು ಇಸ್ಲಾಂ ಧರ್ಮ ಭಾರತದಲ್ಲಿ ಪರಿವರ್ತನೆಗಳನ್ನುಂಟುಮಾಡುವಲ್ಲಿ ಏಕೆ ವಿಫಲವಾಯಿತು ಎಂಬುದಕ್ಕೆ ವಿಷಾದವಾದ ವಿವರಣೆ ನೀಡುತ್ತದೆ.

1. ತಮ್ಮ ಸ್ವಂತಿಕೆಯ ಪುನರ್ ನಿರೂಪಣೆ(Self image)

2. ಪ್ರಸ್ತುತ (ಹಿಂದೂ) ಸಾಮಾಜಿಕ ವ್ಯವಸ್ಥೆಯ ಮುಚ್ಚಿದ ಸ್ಥಿತಿಯಿಂದ ಕ್ಷೋಭೆಗೊಳಗಾಗಿದ್ದುದರಿಂದ . (Frustration from the of existing social systems)

3. ಮತಾಂತರ ತಮ್ಮ ಸಾಮಾಜಿಕ ಅಂತಸ್ತನ್ನು ಉತ್ತಮಗೊಳಿಸುತ್ತದೆ ಎಂಬ ನಿರೀಕ್ಷೆ(Anticipation that Convertion would omprove socia; status).

ಇಸ್ಲಾಂಗೆ ಮತಾಂತರಗೊಂಡಂತವರು ಮೂಲ ಇಸ್ಲಾಂನವರ ಅವಕೃಪೆಗೆ ಮತ್ತು ಅವರ ಪ್ರತಿರೋಧಕ್ಕೆ ಗುರಿಯಾದರು ಮತ್ತು ಹೀಗಾಗಿ ಅವರು ಪ್ರತ್ಯೇಕವಾಗಿ ಗುರುತಿಸಲ್ಪಟ್ಟರು. ಇದು ಸಂರಚನೀಯ ಬದಲಾವಣೆಗೆ ಅವಕಾಶ ಮಾಡಿಕೊಟ್ಟು ಇಸ್ಲಾಂಗೆ ಹೊಸದಾಗಿ ಸೇರಿದ ಜಾತಿಗಳ ನಿಂಗಡೀಕರಣ ಉಂಟಾಯಿತು. ಮತಾಂತರ ಹೊಂದಿ ಇಸ್ಲಾಂಧರ್ಮದಲ್ಲೇ ಉಳಿದ ಅನೇಕರು ತಮ್ಮ ಹಿಂದಿನ ಆಚಾರ - ವಿಚಾರಗಳನ್ನು ಪೂರ್ತಿಯಾಗಿ ಬಿಟ್ಟುಬಿಡಲಿಲ್ಲ. ಇದರ ದೆಸೆಯಿಂದ "ಪುಟ್ಟ ಪರಂಪರೆ " (little Tradition) ರೂಪುಗೊಂಡಿತು.

## 26.5 ಆಧುನಿಕತೆಯ ಉಗಮ

ಈ ಚರ್ಚೆಯಲ್ಲಿ ಹಿಂದೂ ಪರಂಪರೆ ಪಾಶ್ಚತ್ಯ ಪರಂಪರೆಯ ಜೊತೆಯ ಒಡನಾಟದ ದೆಸೆಯಿಂದ ಉಂಟಾದ ಪರಿವರ್ತನೆಗಳನ್ನು ಅರಿತುಕೊಳ್ಳುವುದು ಮುಖ್ಯ ಉದ್ದೇಶವಾಗಿದೆ.

- ಆಧುನೀಕತೆಯ ಸಾಂಪ್ರದಾಯಿಕ ಹಿಂಧೂ ಸಮಾಜದಲ್ಲಿ ಅದರ ವಿವಿಧ ಉಪಸಂರಚನೆ (ವ್ಯವಸ್ಥೆಗಳಲ್ಲಿ ) ಯಾವ ರೀತಿಯ ಪರಿವರ್ತನೆಗಳನ್ನು ಉಂಟುಮಾಡಿತು?
- ಸಂಪ್ರದಾಯಬದ್ಧ ಘಟಕಗಳಿಂದ ಉಂಟಾದ ಪ್ರಕ್ರಿಯೆಗಳೇನು?

ಭಾರತದಲ್ಲಿನ ಆಧುನಿಕತೆಯ ಬಗ್ಗೆ ಚರ್ಚಿಸುವಾಗ ನಾವು ಉದ್ದೇಶಪೂರ್ವಕವಾಗಿಯೇ ಕೆಲವು ಪೂರ್ವಾಗ್ರಹ ಪೀಡಿತ ಭಾವನೆಗಳಾದ ಯೂರೋಸೆಂಟ್ರಿಕ್, ವೆಸ್ಟರ್ನ ಭಾವನೆಗಳನ್ನು ಪರಿಗಣಿಸದೇಇರುವಂತಹ ಎಚ್ಚರ ವಹಿಸಿದ್ದೇವೆ. ಪಾಆಶ್ಚಾತ್ಯ ಸಮಾಜಗಳಲ್ಲಿ ಏನೆಲ್ಲಾ ಪರಿಗಣನೆಗಳು ಉಂಟಾದವೋ ಅವೆಲ್ಲವೂ ಭಾರತದಲ್ಲಿ ಸಂಭವಿಸುತ್ತವೆ ಎಂದು ನಾವು ನಿರೀಕ್ಷಿಸಲಾಗುವುದಿಲ್ಲ. ಆಧುನಿಕತೆಯು ಮೂಲ ಅಂಶಗಳ ಒಂದೇ ರೀತಿಯಾಗಿದ್ದರೂ ಕೂಡ ಆಧುನೀಕರಣದ ಅಂತಿಮ ದಿಕ್ಕು ದೆಸೆಯು ವಿವಿಧ ಸಮಾಜಗಳಲ್ಲಿ ಅಸ್ತಿತ್ವದಲ್ಲಿರುವ ಐತಿಹಾಸಿಕ ಪರಿಸ್ಥಿತಿಗಳನ್ನು ಅನುಸರಿಸಿ ವಿಭಿನ್ನವಾಗಿರುತ್ತದೆ.

ಭಾರತದಲ್ಲಿ ಆಧುನೀಕರಣವು ಇಲ್ಲಿ ಬ್ರಿಟೀಷರು ತಮ್ಮ ಆಡಳಿತಾಧಿಕಾರವನ್ನು ಆರಂಭಿಸಿದುದರಿಂದುಂಟಾದ ಪಾಶ್ಚಾತ್ಯ ಸಂಪರ್ಕದ ದೆಸೆಯಿಂದ ಉಂಟಾಯಿತು. ಪಾಶ್ಚಾತ್ಯ ಪರಿಪರೆ ಭಾರತಕ್ಕೆ ಬರುವ ವೇಳೆಗೆ ತಾನೇ ಮೂಲಭೂತ ಪರಿವರ್ತನೆಗೆ ಒಳಗಾಗಿದ್ದಿತು. ಮತ ಸುಧಾರಣೆಗಳು ಪುನರುಜ್ಜೀವನ, ವೈಜ್ಞಾನಿಕ ಮತ್ತು ತಂತ್ರಜ್ಞಾನದ ಅಭಿವೃದ್ಧಿ ಮತ್ತು ಕೈಗಾರಿಕಾ ಕ್ರಾಂತಿಗಳು ಬದಲಾವಣೆಗಳನ್ನು ಉಂಟುಮಾಡಿದ್ದವು. ಪವಿತ್ರ ಚರ್ಚು ಮತ್ತು ಊಳಿಮಾನ್ಯ ವ್ಯವಸ್ಥೆಗಳು ಪ್ರತಿನಿಧಿಸುತ್ತಿದ್ದ ಪಾಶ್ಚಾತ್ಯ ಸಂಪ್ರದಾಯಿಕ ಶ್ರೇಣೀಕೃತ ತತ್ವ ಮತ್ತು ಸ್ತರ ವಿನ್ಯಾಸ ವ್ಯವಸ್ಥೆಗಳು ಪೂರ್ಣವಾಗಿ ವಿಚಲಿತಗೊಂಡಿದ್ದವು ಪ್ರಾಟಿಸ್ಟೆಂಟ್ ಧರ್ಮದ ಉಗಮದಿಂದ ಪಾಶ್ಚಾತ್ಯ ಸಂಸ್ಕೃತಿಯ ಮದ್ಯಕಾಲಿನ ಸಮಷ್ಟಿ ಮೌಲ್ಯ ವ್ಯವಸ್ಥೆಯು ಸಂಪೂರ್ಣವಾಗಿ ಅಪಾಯದ ಸ್ಥಿತಿಯಲ್ಲಿದ್ದಿತು. ಇದರ ಸ್ಥಾನವನ್ನು ಕ್ರಮೇಣ ವೈಚಾರಿಕವಾದ ವ್ಯಕ್ತಿ ನಿಷ್ಠವಾದ (rational individualism) ಮತ್ತು ಆರ್ಥಿಕ ವ್ಯವಸ್ಥೆಗಳು ಆವರಿಸಿಕೊಳ್ಳತೊಡಗಿದ್ದವು. ವಿಜ್ಞಾನ ಮತ್ತು ತಂತ್ರಜ್ಞಾನದ ಸರಣಿ ಆವಿಷ್ಕಾರಗಳ ದೆಸೆಯಿಂದ ಮೂಲಭೂತ ಪರಿವರ್ತನೆಗಳುಂಟಾಗತೊಡಗಿದ್ದವು. ಇದು ತಾವ್ರಬಗೆಯ ಆಸೆ ಭರವಸೆಗಳಿಂದ ಕೂಡಿದೆ ಸಮಯಯವಾಗಿದ್ದಿತು. ಪಾಶ್ಚಾತ್ಯ ಸಮಾಜದಲ್ಲಿ ಅದರಲ್ಲೂ ಬ್ರಿಟನ್ನಿನಲ್ಲಿ ತಾವ್ರಗತಿಯಲ್ಲಿ ತೀವ್ರತರಹದ ಪರಿವರ್ತನೆಗಳುಂಟಾಗತೊಡಗಿದ್ದವು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅಂದಿನ ಯೂರೋಪಿನ ಸಾಮಾಜಿಕ ಸಂರಚನೆಗೂ ಮತ್ತು ಅಲ್ಲಿ ಉಂಟಾಗುತ್ತಿದ್ದ ಬೆಳವಣಿಗೆಗಳಿಗೂ ಬಾಂಧವ್ಯ ಉಂಟಾಗಿದ್ದಿತು.ಅಲ್ಲದೆ, ಅಸ್ತಿತ್ವದಲ್ಲಿದ್ದ ಸಾಮಾಜಿಕ ಸಂರಚನೆಯೂ ಕೂಡ ಅವಿಕ ಪರಿವರ್ತನೆಗಳ ಪರಿಸ್ಥಿತಿಯನ್ನು ಸೃಷ್ಟಿಸಿತು. ಇದನ್ನು ಅನೇಕ ಚಿಂತಕಾರರು ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ. ಇವೆಲ್ಲವೂ ಬಂಡವಾಳ ಶಾಹಿ ವ್ಯವಸ್ಥೆ, ಆರ್ಥಿಕ ಕ್ಷೇತ್ರದಲ್ಲಿ ಹಣದ ಮಾರುಕಟ್ಟೆಗಳು ( ಹಣಕಾಸು ಸಂಸ್ಥೆಗಳು) ಪ್ರಜಾಸತ್ತಾತ್ಮಕ ವ್ಯವಸ್ಥೆ ಮತ್ತು ಅದರ ಪರಿಣಾಮಗಳಾದ ಸಾರ್ವತ್ರಿಕ ಮಯಸ್ಕ ಮತದಾನ ವ್ಯವಸ್ಥೆ, ಸಮಾನತೆ ರಾಜಕೀಯ ಕ್ಷೇತ್ರದಲ್ಲಿ ದೈವದತ್ತವಾದ, ಬುಡಕಟ್ಟು, ಬಂಧುತ್ವಗಳ ಆಧಾರದಿಂವ ರೂಪುಗೊಂಡಿದ್ದು ಅಧಿಕಾರ ವ್ಯವಸ್ಥೆಯ ತಿರಸ್ಕರಿಸುವಿಕೆ ಧಾರ್ಮಿಕ ಕ್ಷೇತ್ರದಲ್ಲಿ ಪ್ರಾಟಿಸ್ಟೆಂಟ್ ಪಂತದಿಂದ ಕ್ರಿಸ್ತ ಧರ್ಮದ ನವ ನಿರೂಪಣೆ ಇಂತಹ ಹೊಸ ಸಂಸ್ಥೆಗಳು, ಮೌಲ್ಯಗಳು, ಹೊಸ ಬೆಳವಣಿಗೆಗಳುಂಟಾದವು. ಇವೆಲ್ಲವೂ ತಾವ್ರ ತರದ ಪ್ರಭಾವ ಬೀರಿ ಬ್ರಿಟನ್ ಮತ್ತು ಯೂರೋಪಿನ ರಾಷ್ಟ್ರಗಳಲ್ಲಿ ಅಮೂಲಾಗ್ರ ಪರಿವರ್ತನೆಗಳಿಗೆ ದಾರಿ ಮಾಡಿಕೊಟ್ಟಿತು.

## 26.6 ಪರಂಪರೆ ಮತ್ತು ಆದುನಿಕತೆಗಳ ನಡುವಿನ ಸಂಬಂಧ

ನಾವು ಈಗ ಟಾಲ್ಕಾಟ್ ಪಾರ್ಸನ್ಸ್‌ರವರು ನಿರೂಪಿಸಿರುವ ನಮೂನೆ- ಪ್ರಭಾವಿಕ ಲಕ್ಷಣಗಳನ್ನು (Pattern-variable)ತಿಳಿದುಕೊಳ್ಳೋಣ. ಇದನ್ನು ಆಧುನೀಕರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಮಾಜಶಾಸ್ತ್ರೀಯ ಸಿದ್ಧಾಂತಗಳು ವ್ಯಾಪಕವಾಗಿ ಬಳಕೆ ಮಾಡಿದ್ದಾರೆ.

| | ಪಾರಂಪರಿಕ | ಆಧುನಿಕ |
|---|---|---|
| 1. | ಆರೋಪಿತತೆ | ಸಾಧನೆ ನಿರ್ದೇಶಿತತೆ – |
| | Ascriptiveness | Achivement Orientation |
| 2. | ನಿಗಧಿತತೆ | ಸರ್ವವ್ಯಾಪಕತೆ |
| | Particularism | Universalism |
| 3. | ಕಾರ್ಯಭಾಹುಳ್ಯತೆ | ಕಾರ್ಯನಿಗದಿತತೆ |
| | funnctionally diffrents | Functional Specility |
| 4. | ಪ್ರಬಾವಕ್ಕೆ ಗುರಿಯಾಗುವಿಕೆ | ಪ್ರಭಾವ ತಟಸ್ಥತೆ. |
| | Affectivety | Affective mentality |
| 5. | ಸ್ವ ನಿರ್ದೇಶಿತತೆ | ಸಮೂಹ ನಿರ್ದೇಶಿತತೆ |
| | Self Orientation | Collective Orientalities |

ಈ ಮೇಲೆ ತಿಳಿಸಿರುವ ಪ್ರಭಾವಿಕ ಲಕ್ಷಣಗಳ ನಮೂನೆಯು ಪಾರಂಪರಿಕ ಆಧುನಿಕ ಸಮಾಜಗಳ ನಡುವಿನ ತೀವ್ರ ಬಗೆಯ ವ್ಯತ್ಯಾಸಗಳನ್ನು ತಿಳಿಯಪಡಿಸುತ್ತದೆ. ಇವು ಸಾಮಾಜಿಕ ಕ್ರಿಯೆ (ವ್ಯಕ್ತಿಗಳ ಮಟ್ಟದಲ್ಲಿ )ಮತ್ತು ಸಾಮಾಜಿಕ ಸಂಸ್ಥೆ ಇತ್ಯಾದಿ ಮಾನವ ಸಾಮಾಜಿಕ ಸಂರಚನೆಯ ವಿವಿಧ ಹಂತಗಳಲ್ಲಿ ಕಂಡು ಬರುತ್ತದೆ. ವಾಸ್ತವಾಗಿ ಈ ನಮೂನೆ ಪ್ರಭಾವಾಂಶಗಲು ಆದರ್ಶ ನಮೂನೆಗಳಿಂದ ಬಂದ ಬೆಳವಣಿಗೆ ಸಂರಣೆಯ ಎರಡು ತಾವ್ರವಾದ ವಿಬಿನ್ನ ಸ್ಥಿತಿಗಳನ್ನು ಪ್ರತಿನಿಧಿಸುತ್ತದೆ. ಆದರೆ ಈ ಆದರ್ಶ ನಮೂನೆಗಳನ್ನು ಕರಾರಪುವಕ್ಕಾಗಿ ವಾಸ್ತವತೆಯನ್ನು ಪ್ರತಿಬಿಂಬಿಸುತ್ತದೆ ಎಂದೇನು ಅರ್ಥವಲ್ಲ. ಅನೇಕ ವೇಳೆ ಅವು ವಿಭಿನ್ನವಾಗಿರುತ್ತವೆ. ಉದಾ: ಆರೋಪಿತತೆ, ನಿರ್ಣಾಯಕತಗೆ (Judgement) ಗೆ ಅನ್ವಯವಾಗುವಿಕೆ, ಸಂಪ್ರದಾಯಬದ್ಧ ಭಾರತದಲ್ಲಿ ವ್ಯಕ್ತಿಯ ಬಗೆಗಿನ ತೀರ್ಮಾನ ಅಥವಾ ನಿರ್ಣಯ, ಆರೋಪಿತ ಲಕ್ಷಣಗಳ ಆಧಾರದ ಮೇಲೆ ಮಾಡಲ್ಪಡುತ್ತಿದ್ದಿತು. ಆದರೆ ಕ್ರಮೇಣ ಅದು ಸಾಧಿತ ಸ್ಥಾನಮಾನಕ್ಕೆ (ಅಂತಸ್ತಿಗೆ) ಅವಕಾಶ ಮಾಡಿಕೊಟ್ಟಿತು. ಪಾರಂಪರಿಕ ಭಾರತದಲ್ಲಿ ಸಂಬಂಧಗಳು, ಪ್ರಭಾವಿಕತೆ(Affectual aspects) ಅಂಶಗಳ ಆಧಾರದ ಮೇಲೆ ನಿಯೊತ್ರಿಸಲ್ಪಡುತ್ತಿದ್ದವು. ಆದರೆ ಆಧುನಿಕ ಭಾರತದಲ್ಲಿ ಪ್ರಭಾವ ಅಂಶಗಳ ತಾಟಸ್ಥ್ಯವನ್ನು ಕಾಣಬಹುದು. ಪಾರಂಪರಿಕ ಭಾರತದಲ್ಲಿ ಒಬ್ಬ ವ್ಯಕ್ತಿಯು ಅನೇಕ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಆದರೆ ಆಧುನಿಕ ಭಾರತದಲ್ಲಿ ವ್ಯಕ್ತಿಗಳು ವಿಶೇಷವಾದ ನಿಗಧಿತ ಪಾತ್ರಗಳನ್ನು ನಿರ್ವಹಿಸುತ್ತಾರೆ.

ಈ ಮುಂದಿನ ಚರ್ಚೆಯು ಭಾರತದಲ್ಲಿ ಪರಂಪರೆ ಮತ್ತು ಆಧುನೀಕತೆಯ ಸಂಬಂಧಗಳ ವಿಶ್ಲೇಷಣೆಯಲ್ಲಿ ಪ್ರಭಾವಿಕ ನಮೂನೆಗಳ ಸಾಮರ್ಥ್ಯವನ್ನು ತೋರಿಸಿಕೊಡುತ್ತದೆ. ಈ ಕೆಳಕಂಡ ಕೋಷ್ಟಕವು (Table) ಪರಂಪರಾನುಗತ ಸಂರಚನೆಯ ಮೇಲೆ ಆಧುನಿಕ ಅಂಶಗಳ ಪ್ರಭಾವವನ್ನು ಸೂಡಿಸುತ್ತದೆ.

- **ಕೋಷ್ಟಕ**

  ಇಲ್ಲಿ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ.

- ಆಧುನೀಕತೆಯ ಅಂಶವು ಪಾರಂಪರಿಕ ಸಂರಚನೆಯನ್ನು ಹೊಸ ಸಂರಚನೆ ಸೃಷ್ಟಿಸುವುದರ ಮೂಲಕ ನಿಯಂತ್ರಿಸುತ್ತದೆಯೇ? ಅಥವಾ

- ಪರಂಪರೆಯ ಜೊತೆ ಅದರ ಒಡನಾಟವು ಆಯ್ಕೆ ತೆಗೆದುಕೊಳ್ಳುವುದಕ್ಕೆ (ಆಯ್ಕೆಗೆ) ಅವಕಾಶ ಮಾಡಿಕೊಡುತ್ತದೆಯೇ ಮತ್ತು

ಪರಂಪರೆಯಲ್ಲಿ ಅದನ್ನು ಪೂರ್ಣ ಬದಲಾಯಿಸದೆ, ಮಾರ್ಪಾಡುಗಳನ್ನು ಉಂಟು ಮಾಡುತ್ತದೆಯೇ?

ಈ ಎರಡು ಪ್ರಶ್ನೆಗಳು ಭಾರತದ ಸಮಾಜಿಕ ಶ್ರೇಣಿ ವ್ಯವಸ್ಥೆಯನ್ನು ಪ್ರಾಥಮಿಕಾಂಶಗಳನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಇದು ಜಾತಿ ವ್ಯವಸ್ಥೆಯಲ್ಲಿ ಉಂಟಾದ ಪರಿವರ್ತನೆಗಳನ್ನು ಮತ್ತು ಜಾತಿ ಇತರ ವ್ಯವಸ್ಥೆಗಳೊಡನೆ ಹೊಂದಿರುವ ಸಂಬಂಧವನ್ನು ವಿವರಿಸುತ್ತದೆ. ಈ ಕೆಳಗಿನ ಚಿತ್ರ ವಿಷದವಾಗಿ, ಪಾರಂಪರಿಕ ಅಂಶಗಳು ಆಧುನೀಕರಣಕ್ಕೊಳಪಡುವುದನ್ನು ನಿರೂಪಿಸುತ್ತದೆ.

- ಅಂತಸ್ತು ವ್ಯತ್ಯಾಸ, ಕ್ರಿಯಾಮಾಲೆ

ಲೂಯಿ ಡ್ಯೂಮಾ ಮತ್ತು ಆಂದ್ರೆ ಬೆಥೆಯವರು ಅನೇಕ ವೇಳೆ ಪರಸ್ಪರ ಒಂದೇ ಎನ್ನಬಹುದಾದ ಮೂರು ಬಗೆಯ ಅಸಮಾನತೆ(Inequlity)ಯ ವಿಧಗಳಿವೆ ಎಂಬುದನ್ನು ಒತ್ತಿ ಹೇಳಿದ್ದಾರೆ. ಅವರ ಪ್ರಕಾರ ಧಾರ್ಮಿಕ ವಿಧಿಕ (ritual)ರಾಜಕೀಯ ಮತ್ತು ಆರ್ಥಿಕ ಅಂಶಗಳು ಇಲ್ಲಿ ಪರಿಗಣಿಸಲ್ಪಡುತ್ತವೆ ಮತ್ತು ಇವು ಅಸಮಾನತೆಗಳಿಗೆ ಕಾರಣವಾಗಿವೆ. ಪ್ರೊ. ಸಿಂಗ್‌ರವರು ಜಾತಿ ವ್ಯವಸ್ಥೆಯ ಬಗೆಗಿನ ತಮ್ಮ ವಿವರಣೆಯಲ್ಲಿ ಎರಡು ಅಂಶಗಳಿಗೆ (Structural and Cultural Components) ಮಹತ್ವ ನೀಡಿದ್ದಾರೆ. ಲೂಯಿ ಡ್ಯೂಮಾರವರು ಭಾರತೀಯ ಸಾಮಾಜಿಕ ಇತಿಹಾಸದಲ್ಲಿ ಅಂತಸ್ತುಮತ್ತು ಅಧಿಕಾರದ ನಡುವೆ ಕಂದರ ಇರುವುದು ಕಂಡು ಬರುತ್ತದೆ. ಅಥವಾ ಅಂತಸ್ತು ಅಧಿಕಾರ ಮತ್ತು ಐಶ್ವರ್ಯ(ಸಂಪತ್ತು)ಗಳನ್ನು ಮೀರಿ ಸ್ಥಪಿತವಾಗಿರುತ್ತದೆ. ಎಂದು ಅಭಿಪ್ರಾಯಪಟ್ಟಿದ್ದಾರೆ. ಲೌಕಿಕ ಸಂಗತಿಗಳಿಗೆ ಸಂಬಂಧಪಟ್ಟ ರಾಜ / ರಾಜಕೀಯ ಅಧಿಕಾರವು ಪುರೋಹಿತರಿಗಿಂತ ಹೆಚ್ಚು ಅಧಿಕಾರ ಹೊಂದಿದ್ದಾರೆ. ದೈವಿಕ, ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಪುರೋಹಿತ ರಾಜನಿಗಿಂತ ಹೆಚ್ಚಿನ ಅಧಿಕಾರ ಹೊಂದಿರುತ್ತಿದ್ದರು. ಹೀಗಾಗಿ ಸಂಪತ್ತಿನ ಸ್ಥಿತಿಯಲ್ಲಿ ಏರಿಕೆಯಾದಾಗ ಸಾಮಾಜಿಕ ಚಲನೆಯು ಸಂಸ್ಕೃತಾನುಕರಣೆಯ ಮೂಲಕ ಉಂಟಾಗಿರುವುದು ಕಂಡು ಬರುತ್ತದೆ. ಕ್ಷತ್ರಿಯರ ಸ್ಥಾನಮಾನವು ವರ್ಗದ ಪರಿಣಾಮವಾಗಿ ಅನೇಕ ವೇಳೆ ಉತ್ತಮವಾಗಿರುತ್ತಿದ್ದಿತು. ಜಾತಿಯ ಆದರ್ಶ ನಮೂನೆಯನ್ನು ಅರಿತುಕೊಳ್ಳುವುದರಿಂದ ಅಂತಸ್ತಿನ ವ್ಯತ್ಯಾಸದ ಕ್ರಿಯಾಮಾಲೆಯನ್ನು ಮೆಚ್ಚಿಕೊಳ್ಳುವುದು ಸಾಧ್ಯವಾಗುತ್ತದೆ.

ಸತೀಶ್ ಸಬೆರ್‌ವಾಲ್‌ರವರು " ಚಲನಶೀಲಮಾನವ"(Moliel Man)ಎಂಬ ತಮ್ಮ ಶ್ರೇಷ್ಠ ಗ್ರಂಥದಲ್ಲಿ ಕ್ರಿಯಾಮಾಲೆ (Paradigm) ಪದವನ್ನು ಬಳಸಿದ್ದಾರೆ. ಇವರು ಶ್ರೇಣಿಕೃತ ವ್ಯವಸ್ಥೆಯಲ್ಲಿ ಕೆಳಸ್ಥಾನಗಳನ್ನು ಪಡೆದಿದ್ದ ಮೂರು ಜಾತಿಗಳ ತೌಲನಿನ ಅಧ್ಯಯನ ಮಾಡಿದ್ದಾರೆ. ಇವರು ಪಂಜಾಬ್ ಪ್ರಾಂತ್ಯದ ವಾಲ್ಮೀಕಿ, ಆದಿಧರಾಮಿಗಳು ಮತ್ತು ರಾಮಗರಿಯಾ ಜಾತಿಗಳಾಗಿವೆ. ಆದಿಧರಾಮಿಜಾತಿಯವರು ಚರ್ಮದ ಉದ್ಯೋಗಗಳಲ್ಲಿ ಪ್ರಮುಖವಾಗಿ ತೊಡಗಿ ಕೊಂಡಿದ್ದಾರೆ. ರಾಮಗರಿಯಾ ಜಾತಿಯವರು ಬಡಗಿಗಳು, ಈ ಉದ್ಯೋಗಗಲಿಗೆ ಜಾತಿಯ ಏಣಿ ಶ್ರೇಣಿಯಲ್ಲಿ ಕೀಳಾಗಿ ಪರಿಗಣಿಸಲಾಗಿದ್ದಿತು. ಆದಾಗ್ಯೂ ಈ ಕೆಳಜಾತಿಯ ಅನೇಕರು ತಮ್ಮ ಜಾತಿ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದಂತೆ ವಿವಿಧ ರೀತಿಯಲ್ಲಿ ಮೌಲ್ಯ ನಿರ್ಣಾಯಕತೆ ಮಾಡಿದ ಅನುಭವಗಳಿಗೆ ಗುರಿಯಾಗಿದ್ದರು. ಕುಶಲ ಕರ್ಮಿಗಳು(Skilled Workers) ಯಾವುದೇ ಜಾತಿಗೆ ಸೇರಿರಲಿ ಬ್ರಿಟೀಷರು ರೂಪಿಸಿದ ಅಧಿಕಾರ ವ್ಯವಸ್ಥೆಯಲ್ಲಿ ಹೆಚ್ಚು ಪ್ರಾಮುಖ್ಯತೆಗಳಿಸಿಕೊಳ್ಳತೊಡಗಿದರು. ಈ ಯೂರೋಪಿಯನ್ ಅವರನ್ನು ಮೆಚ್ಚಿಕೊಳ್ಳಲು ತಯಾರಿದ್ದುದಷ್ಟೇ ಅಲ್ಲದೆ, ಕುಶಲ ಕರ್ಮಿಗಳು ನಿರ್ವಹಿಸುವ ಕೆಲಸಗಳಿಗೆ ಹೆಚ್ಚಿನ ಸಂಬಳ ನೀಡಲು ತಯಾರಿದ್ದರು. ಹೀಗೆ ಪರಕೀಯ ನಯೋಗಿಗಳಿಂದ ತಮಗೆ ದೊರೆತ ಮನ್ನಣೆ ಮತ್ತು ಉತ್ತಮಗೊಂಡ ಆರ್ಥಿಕ ಪ್ರತಿಫಲಗಳು ಮೂಲ ಸಾಮಾಜಿಕ ವ್ಯವಸ್ಥೆಯಲ್ಲಿ, ಅತಿ ಕಡಿಮೆ ಪ್ರತಿಫಲ ಪಡೆಯುತ್ತಿದ್ದ ಸ್ಥಳೀಯ ಬಡಗಿಗಳಿಗೆ ಉತ್ತಮ ಸ್ಥಾನಮಾನಗಳು ದೊರಕತೊಡಗಿದವು. ಸಮಾನತೆಯ ನೀತಿ, (egalitarian morality) ಶ್ರೇಣೀಕೃತ ನೀತಿಯನ್ನು ಮತ್ತು ಅದರ ಸೈದ್ಧಾಂತಿಕ ಸಮರ್ಥನೆಯನ್ನು ದಿಕ್ಕರಿಸಿ ಅಂದರೆ, ಪರಿಶುದ್ಧತೆ, ಅಪವಿತ್ರತೆ, ಮಡಿ ಮೈಲಿಗೆ, ಪುನರ್ಜನ್ಮವನ್ನು ಸಮರ್ಥಿಸುವ ಕರ್ಮಸಿದ್ಧಾಂತ ಇವುಗಳನ್ನು ಧಿಕ್ಕರಿಸಿ ಶಾಸನಗಳ ಮೂಲಕ ಅಸ್ಪೃಶ್ಯತೆಯ ನಿವಾರಣೆಯ ಪ್ರಯತ್ನಗಳ ದೆಸೆಯಿಂದ ಪಾರಂಪರಿಕ ಭೇದಭಾವಗಳ ನ್ಯಾಯಬದ್ಧತೆಯನ್ನು ಅಪ್ರಾಮುಖ್ಯಗೊಳಿಸಿತು. ಇದು ಕೆಳಜಾತಿಯವರಿಗೆ ಮೇಲು ಜಾತಿಯವರಿಗೆ ಸರಿಸಮನಾದ ಅಂತಸ್ತನ್ನು ಪಡೆದುಕೊಳ್ಳುವ ಅವಕಾಶ ಮಾಡಿಕೊಟ್ಟಿತು. ಆದರೆ ದುರದೃಷ್ಟವಶಾತ್ ಈ ರೀತಿಯ ಅವಕಾಶಗಳು ನಗರ ಪ್ರದೇಶಗಳಿಗೆ ಮೀಸಲಾಗಿದ್ದ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಬದಲಾವಣೆಗಳು ಉಂಟಾಗಲಿಲ್ಲ. ಇದು ನಗರ ಪ್ರದೇಶಗಳಲ್ಲಿ ಪ್ರಿವರ್ತನೆಗಳಿಗೆ ಗುರಿಯಾಗಿದ್ದು ಅನೇಕ ಜಾತಿಗಳಲ್ಲಿ ಹೆಚ್ಚಿನ ಮಟ್ಟದ ಅತೃಪ್ತಿಯನ್ನುಂಟುಮಾಡಿತು. ಮತ್ತು ಜಾತಿ ಶ್ರೇಣಿ ವ್ಯವಸ್ಥೆಯಲ್ಲಿ ಬದಲಾವಣೆಯಾಗದೆ ಉಳಿದವರಲ್ಲೂ ಅತೃಪ್ತಿ ಹೊಗೆಯಾಡತೊಡಗಿತು. ಈ ವ್ಯತ್ಯಾಸದ ವಿರುದ್ಧ ನಿಂತು ಹೋರಾಡುವುದು ಮುಖ್ಯವಾಗಿ

ತಮ್ಮ ಸಾಮರ್ಥ್ಯಗಳ ದೆಸೆಯಿಂದ ಭೂಮಿ, ಮನೆ, ಮುಂತ ...ಪನ್ಮೂಲಗಳನ್ನು ಗಳಿಸಿಕೊಳ್ಳುವುದನ್ನು ಅವಲಂಬಿಸಿದ್ದಿತು. ಇದುವರೆಗೆ ಚೌಕಾಶಿಯ ಸಾಮರ್ಥ್ಯವನ್ನು ನೀಡಿ, ಸಮಾಜದ ಮುಖ್ಯ ಸಂಪನ್ಮೂಲಗಳನ್ನು ನಿಯಂತ್ರಿಸುವ ಅವಕಾಶವನ್ನು ನೀಡುತ್ತದೆ.

ಎಫ್. ಜಿ. ಬೈಲಿಯವರು, ಗ್ರಾಮೀಣ ಪ್ರದೇಶಗಳಲ್ಲಿ ಹಣದ ಚಲನೆಯ ದೆಸೆಯಿಂದ ಸ್ಥಳೀಯವಾಗಿ ಹೆಂಡ ಇಳಿಸುವ ಜಾತಿಯವರಾದ ನೋನಿಯಾ ಜಾತಿಯವರು ತಮ್ಮ ಸಾಮರ್ಥ್ಯ ಮತ್ತು ಕುಶಲತೆಗಳಿಂದ ಹಣ ಗಳಿಸಿ ಭೂ ಆಸ್ತಿ ಸಂಪಾದಿಸಲು ಸಮರ್ಥರಾಗಿದ್ದನ್ನು ವಿವರಿಸಿದ್ದಾರೆ. ಇಂದಿಗೂ ಕೂಡ ಗ್ರಾಮೀಣ ಸಾಮಾಜಿಕ ವ್ಯವಸ್ಥೆಯಲ್ಲಿ ಭೂ ಆಸ್ತಿಗೆ (ಜಮೀನಿಗೆ) ವಿಶಿಷ್ಟ ಸ್ಥಾನವಿದೆ ಎಂಬುದನ್ನು ನಾವು ಮನಗಾಣಬಹುದು. ಭೂ ಆಸ್ತಿಯನ್ನು ಗಳಿಸಿಕೊಂಡ ನೋನಿಯಾ ಜಾತಿಯವರು ವರ್ಗಶ್ರೇಣಿಯಲ್ಲಿ ಮೇಲಕ್ಕೇರತೊಡಗಿದರು. ಪಂಜಾಬಿನ ಮೂರು ಜಾತಿಯವರಿಗೆ ಸಂಬಂಧಿಸಿದಂತೆಯೂ ಇದೇ ರೀತಿಯ ಬೆಳವಣಿಗೆ ಉಂಟಾಯಿತು. ಸಬರವಾಲ್‌ರವರು ನಿರೂಪಿಸಿದ ಈ ಕ್ರಿಯಾ ಮಾಲೆಯು (Paradigm) ಭಾರತದಾದ್ಯಂತ ಜಾತಿ ವ್ಯವಸ್ಥೆಯಲ್ಲಿ ಜರುಗುವ ಪರಿವರ್ತನೆಗಳನ್ನು ಸಮರ್ಥವಾಗಿ ನಿರೂಪಿಸುತ್ತದೆ. ತಮಿಳುನಾಡಿನ ನಾಡಾರ್ ಜಾತಿಯವರು ಅಲ್ಲಿನ ಸಮಾಜದಲ್ಲಿದ್ದ ಕಟ್ಟು ನಿಟ್ಟಾದ ಸಂಪ್ರದಾಯ ಬದ್ಧತೆಯನ್ನು ವಿರೋಧಿಸಿ ತಮ್ಮ ಇತಿಹಾಸದ ಪುನರ್ ನಿರೂಪಣೆಯ ಪ್ರಯತ್ನ ಮಾಡಿದರು ಮತ್ತು ಆಗ ಆಡಳಿತ ನಡೆಸುತ್ತಿದ್ದ ಬ್ರಿಟೀಷರಿಗೆ ಜಾತಿಯ ಸಾಮರ್ಥ್ಯವುಳ್ಳ ಜಾತಿ ಎಂಬುದನ್ನು ಮಾನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾದರು. ಸ್ವಾತಂತ್ರ್ಯಾನಂತರದ ಹೆಂಡ ಇಳಿಸುವ ಈ ಜಾತಿಯವರು ರಾಜಕೀಯ ಕ್ಷೇತ್ರದಲ್ಲಿ ಹೆಚ್ಚು ಸಮರ್ಥರಾದ ಮೇಲುಜಾತಿಯವರ ಮೇಲೂ ಅಧಿಕಾರ ಚಲಾಯಿಸುವ ಮಟ್ಟಕ್ಕೆ ಬೆಳೆದು ನಿಂತರು ತಮ್ಮ ಭಾರತೀಯ ಪರಂಪರೆಯ ಆಧುನೀಕರಣ ಗ್ರಂಥದಲ್ಲಿ ರುಥಾಲ್ಫ್ ಮತ್ತು ರೂಥಾಲ್ಫ್‌ರವರು ಈ ವಿಷಯವನ್ನು ವಿಷದವಾಗಿ ಚರ್ಚಿಸಿದ್ದಾರೆ.

- **ಅಂತಸ್ತಿನ ವ್ಯತ್ಯಾಸದ ಕ್ರಿಯಾಮಾಲೆಯ ಚಿತ್ರ**

ಎಸ್. ಎನ್. ಐಸೆನ್‌ಟಾಟ್‌ರವರು ವಿಭಿನ್ನ ನ್ಯಾಯ ವಿತರಣೆಯ ವಿರುದ್ಧ ಚಳುವಳಿ ನಡೆಸುವುದರ ಮೂಲಕ ಆಧುನೀಕರಣವು ಸಂರಚನೀಯ ಚಲನೆಗೆ ಅವಕಾಶ ಮಾಡಿಕೊಡುತ್ತದೆ. ಎಂದು ವಾದಿಸಿದ್ದಾರೆ. ಆಧುನೀಕರಣವು ಅಸಮಾನತೆಯಿಂದ ಕೂಡಿದ ವಿತರಣಾ ವ್ಯವಸ್ಥೆಯ ವಿರುದ್ಧ ಪ್ರಕ್ರಿಯಿಸುವುದರ ಮೂಲಕ ಹಿಂದಿನ ಅಸಮಾನತೆಗಳನ್ನು ನಾಶಪಡಿಸುವ ಸಾಮಥಲರ್ಯವನ್ನು ಹೊಂದಿದೆ. ಇದು ಭಾರತದ ಪಾರಂಪರಿಕ ಜಾತಿ ವ್ಯವಸ್ಥೆಯಲ್ಲಿ ಪ್ರಮುಖವಾಗಿ ಕಂಡು ಬರುತ್ತಿದ್ದಿತು. ಆಧುನೀಕರಣ ಪ್ರಕ್ರಿಯೆಗೆ ನೇರವಾಗಿ ಉತ್ತೇಜನ ನೀಡುವ ಮೂರು ಬಗೆಯ ಚಲನೆಗಳನ್ನು ರೂಥಾಲ್ಫ್ ಮತ್ತು ರುಥಾಲ್ಫ್‌ರವರು ಗುರುತಿಸಿದ್ದಾರೆ.

- ಲಂಬಕ(Vertical)
- ಸಮಾಂತರ (Horizaltal)
- ವೈವಿಧ್ಯಮಯ(Differenntial)(ವಿಭಿನ್ನಬಗೆ)

ಹೊಸ ವಿಚಾರಗಳ ಪ್ರಸರಣ ಮತ್ತು ಒಡನಾಟದ ವ್ಯವಸ್ಥೆಗಳು, ಸಂವಹನ ಮಾಧ್ಯಮಗಳ ವೃದ್ಧಿಗೆ ಪಾಶ್ಚಾತ್ಯ ಶಿಕ್ಷಣದ ಅವಕಾಶಕ್ಕೆ ಅವಕಾಶ ಮಾಡಿಕೊಟ್ಟವು. ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯಿಂದ ಉಂಟಾದ ಸಾಮೂಹಿಕ ಮತ್ತು ವ್ಯಕ್ತಿಗತ ಪರಿಣಾಮಗಳು ಮತ್ತು ರಾಜ್ಯದ ಆರ್ಥಿಕ ಚಟುವಟಿಕೆಗಲ ಹೆಚ್ಚುವಿಕೆ, ಇತ್ಯಾದಿ ಅಂಶಗಳು ಸ್ಥಿತ್ಯಂತರಗೊಳ್ಳುತ್ತಿದ್ದ ಈ ಸಮೂಹಗಳ ಪರಿಸ್ಥಿತಿಗಳು ಉತ್ತಮಗೊಳ್ಳಲು ಅನುಕೂಲ ಮಾಡಿಕೊಟ್ಟವು. ಮತ್ತೊಂದು ಪ್ರಮುಖ ಅಂಶವೆಂದರೆ, ಜಾತಿ ಸಂಘಟನೆಗಳ ಬೆಳವಣಿಗೆ, ಈ ಸಂಘಟನೆಗಳು ಸಂರಚನೀಯ ಮತ್ತು ಸಾಂಸ್ಕೃತಿಕ ಪರಿವರ್ತನೆಗಲನ್ನುಂಟುಮಾಡುವ ಸಾಮರ್ಥ್ಯ ಹೊಂದಿದ್ದವು. ಇದೂ ಕೂಡ ಸ್ಥಿತ್ಯಂತರಗೊಳ್ಳುತ್ತಿದ ಜಾತಿಗಲಿಗ ಅನುಕೂಲವಾಗಿ ಪರಿಣಮಿಸಿತು.

ನಿರಂತರ ರಾಜಕೀಯ ಪ್ರಭಾವದ ಪರಿಣಾಮವಾಗಿ , ರೂಪುಗೊಂಡ ಶಾಸನಗಳೂ ಕೂಡ ಬದಲಾವಣೆಗೊಳಗಾಗಿದ್ದ ಅನೇಕ ಜಾತಿಗಳು ತಮ್ಮ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳಲು ನೆರವು ನೀಡಿದವು. ಜಾತಿ ಸಂಘಟನೆಗಳು ಸಮಾಂತರ ಸಮುದಾಯಗಳಿಗೆ ಅಥವಾ ಪರ್ಯಾಯ ವ್ಯವಸ್ಥೆಗಳಾಗಿ (Para- Communities) ತಮ್ಮ ಹಕ್ಕು ಚಲಾಯಿಸಲು ಗ್ರಿ ತಮ್ಮ ಸದಸ್ಯರಿಗೆ ರೂಢಿಯಲ್ಲಿದ್ದ

ಅಸಮಾನತೆಗಳ ಬಗ್ಗೆ ಅರಿವು ಮೂಡಿಸಲು ಸಮರ್ಥವಾಗಿ ತಮ್ಮ ಜಾತಿಯವರ ರಾಜಕೀಯ ಪ್ರವೇಶಕ್ಕೆ ಮತ್ತು ರಾಜ್ಯ ರಾಜಕೀಯದ ಮಧ್ಯೆ ಪ್ರವೇಶಕ್ಕೆ ಉತ್ತೇಜನ ನೀಡಿ ತಮ್ಮ ಧ್ಯೇಯೋದ್ದೇಶಗಲನ್ನು ಯಶಸ್ವಿಯಾಗಿ ಈಡೇರಿಸಿಕೊಳ್ಳಲು ಪ್ರಯತ್ನ ನಡೆಸಿದವು. ಈ ವ್ಯವಸ್ಥೆಯು ಪರಂಪರೆ ಮತ್ತು ಆಧುನಿಕತೆಗಳ ಕಟ್ಟುನಿಟ್ಟಿನ ಮಿಶ್ರಣಕ್ಕೆ ಹಾದಿ ಮಾಡಿಕೊಟ್ಟಿತು ಮತ್ತು ಮುಂದುವರಿಯಲು ಅವಕಾಶ ಮಾಡಿಕೊಟ್ಟಿತು. ಆದ್ದರಿಂದ ಪರಂಪರೆ ಮತ್ತು ಆಧುನಿಕತೆಗಳು ಪರಸ್ಪರ ನೀಶಪಡಿಸುವ ಪ್ರಕ್ರಿಯೆಗಳಲ್ಲ ಬದಲಾಗಿ ಪರಸ್ಪರ ಪೂರಕವಾದ ಪ್ರಕ್ರಿಯೆಗಳು ಎಂದು ಅರ್ಥಮಾಡಿಕೊಳ್ಳಬೇಕಾಗಿದೆ.

- ನಿಮ ಪ್ರಗತಿ ಪರೀಕ್ಷಿಸಿ

1) ಭಾರತದಲ್ಲಿ ಆಧುನೀಕರಣವನ್ನು ಕುರಿತುಪ ಪ್ರಬಂಧವನ್ನು ಬರೆಯಿರಿ.

2) ಪರಂಪರೆಯ ಪರಿಕಲ್ಪನೆಯನ್ನು ವಿವರಿಸಿ.

3) ಭಾರತದಲ್ಲಿ ಆಧುನಿಕತೆಯ ಯುಗವನ್ನು ಪರಿಶೀಲಿಸಿ

4) ಭಾರತದಲ್ಲಿ ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಸಂಬಂಧವನ್ನು ಹೊರತನ್ನಿ.

## 26.7 ಸಾರಾಂಶ

ಹಿಂದಿನ ವಿಶ್ಲೇಷಣೆಯಿಂದ ನಮಗೆ ತಿಳಿಯುವುದೇನೆಂದರೆ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಅನ್ವಯವಾಗುವಂತೆ ಬಳಕೆ ಮಾಡಲ್ಪಟ್ಟಾಗ ಯಾವುದೇ ತೊಡಕುಗಳಿಗೂ ಅವಕಾಶವನ್ನು ನೀಡುವುದಿಲ್ಲ. ಹಾಗೆಯೇ ವಾಸ್ತವತೆಯನ್ನು ಪರಿಗಣಿಸಿ ಅವು ರೂಪುಗೊಂಡಾಗ ಯಾವುದೇ ತೊಡಕಿಗೂ ಕಾರಣವಾಗುವುದಿಲ್ಲ. ಆದರೆ ಆಧುನೀಕರಣ ಮತ್ತು ಪರಂಪರೆಯ ಕಲ್ಪನೆಗಳನ್ನು ಭಾರತಕ್ಕೆ ಬಳಸುವಾಗ ಬಹಳ ಎಚ್ಚರವನ್ನು ಕಾಯ್ದುಕೊಳ್ಳಬೇಕು. ಅವುಗಳ ಅರ್ಥದಲ್ಲಿನ ವ್ಯತ್ಯಾಸವನ್ನು ಗಮನವಿಟ್ಟು ಅರಿತುಕೊಳ್ಳಬೇಕಾಗುತ್ತದೆ. ಹಾಗೆಯೇ ಪರಂಪರೆ ಮತ್ತು ಪಾರಂಪರ್ಯಬದ್ಧತೆ ಮತ್ತು ಆಧುನೀಕರಣ ಮತ್ತು ಆಧುನಿಕತೆ ಇವುಗಳ ಒಳಾಂಶಗಳಲ್ಲಿನ ವ್ಯತ್ಯಾಸವನ್ನು ಅರಿಯಬೇಕಾಗುತ್ತದೆ. ಹಾಗೆಯೇ ಕೆಲವು ಸಮಾಜಶಾಸ್ತ್ರಜ್ಞರು ಪರಂಪರೆ ಪರಿಪೂರ್ಣವಾಗಿ ನೇತ್ಯಾತ್ಮಕವಾದುದ್ದು. ಆಧುನಿಕತೆ ಪರಿಪೂರ್ಣವಾಗಿ ಇತ್ಯಾತ್ಮಕವಾದುದ್ದು ಎಂದು ಪರಿಗಣಿಸುವುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ವಾಸ್ತವವಾಗಿ ಸಮಾಜಶಾಸ್ತ್ರಜ್ಞರ ಅಭಿಪ್ರಾಯ ದೋಷ ಪೂರ್ಣವಾದದ್ದು. ವಿವರಣೆ ನೀಡಬೇಕಾದ ಮತ್ತೊಂದು ತಪ್ಪು ಕಲಲ್ಪನೆ. ಪರಂಪರೆ ಮತ್ತು ಆಧುನಿಕತೆಗೆ ಸಂಬಂಧಿಸಿದೆ. ಈ ಎರಡು ಕಲ್ಪನೆಗಳು ಒಂದು ಸ್ಥಿತಿಯ ಎರಡು ತೀವ್ರ ಭಿನ್ನವಾದ ಅಂಶಗಳನ್ನು ಸೂಚಿಸುತ್ತದೆ. ಪ ಂಪರೆಯ ನಡುವೆ ಕಂಡು ಬರುವ ಆಧುನಿಕತೆಯನ್ನು ಹಾದಿ ತಪ್ಪಿದ ಸ್ಥಿತಿ ಅಥವಾ ನಡವಳಿಕೆ ಎಂದು ಭಾವಿಸಲಾಗುತ್ತದೆ. ಆದುನಿಕತೆ ಮತ್ತು ಪರಂಪರೆಯು ಪರಸ್ಪರ ತದ್ವಿರುದ್ಧವಾದವುಗಳೆಂದು ಹೇಳಲಾಗಿದೆ.

ಆಧುನಿಕತೆಯು ಒಂದ ರೀತಿಯ ಮನಸ್ಥಿತಿಯಾಗಿದೆ. ಅದು ಆಧುನಿಕ ಸಂಕೀರ್ಣ ಸಮಾಜಗಳ ತ್ವರಿತ ಬಗೆಯ ಬದಲಾಗುವ ಸನ್ನಿವೇಶಗಳಿಗೆ ವ್ಯಕ್ತಿ ಆಂತರಿಕವಾಗಿ ಹೊಂದಾಣಿಕೆ ಮಾಡಿಕೊಳ್ಳುವಂತೆ ಅನುವುಗೊಳಿಸುವ ಮಾನವ ಪ್ರಜ್ಞೆಯಲ್ಲಿನ ಕೆಲವು ಅಂಶಗಳನ್ನು ರೂಪಿಸುತ್ತದೆ. ಅದು ವೈಜ್ಞಾನಿಕ ಮತ್ತು ವೈಚಾರಿಕ ವಿಶ್ವ ದೃಷ್ಟಿಕೋನವನ್ನು ಸೂಚಿಸುತ್ತದೆ ಮತ್ತು ಸಾರ್ವತ್ರಿಕ ಧರ್ಮ ನಿರಪೇಕ್ಷ ಮೌಲ್ಯವನ್ನು ಎತ್ತಿಹಿಡಿಯುತ್ತದೆ.

ಆಧುನೀಕರಣದ ಬಗೆಗೆ ಹೇಳುವುದಾದರೆ, ಅದು ಸಾಮಾಜಿಕ ರಚನೆಯಲ್ಲಿನ ಪಾತ್ರಗಳು, ಸ್ಥಾನಮಾನಗಳು, ಉದ್ಯೋಗಗಳ ವೈವಿಧ್ಯಕರಣಗಳ ಮೂಲಕ ಪರಿವರ್ತನೆಯನ್ನುಂಟು ಮಾಡುವ ಒಂದು ಸಂಕೀರ್ಣ ಪ್ರಕ್ರಿಯೆ ಎಂಬುದಾಗಿ ವ್ಯಾಖ್ಯಾನಿಸಲ್ಪಟ್ಟಿದ್ದು ಆಧುನಿಕತೆಯು ಆಧುನೀಕರಣದ ಉಪಶಾಖೆಯಾಗಿದೆ.

## 26.8 ಪ್ರಮುಖ ಪದಗಳು

ಆಧುನಿಕತೆ: ಆಧುನಿಕತೆಯು ವೈಚಾರಿಕತೆ, ಸತ್ಯ ಮತ್ತು ವಿಜ್ಞಾನಗಳ ಗೆಲುವಿನಿಂದ ಕೂಡಿದ ಭಾವನೆಗಳು ಅಥವಾ ಆಲೋಚನೆಗಳು ಮತ್ತು ಶೈಲಿಗಳಿಗೆ ಅನ್ವಯಿಸುತ್ತದೆ. ಮಾನವರ ಪರಸ್ಪರ ಕ್ರಿಯೆಗಳಿಗೆ ಅರ್ಥನೀಡಿ ವಿವರಣೆ ಮಾಡುತ್ತಾನೆ. ಇದು ಮೂಲ ಸ್ತಂಭವಾಗಿದೆ. ಸಂಸ್ಥೆಗಳು, ಸಂಘಟನೆಗಳಿಗೂ ಕೂಡ ಇದೇ ರೀತಿಯಾಗಿದೆ.

ಪರಂಪರೆ: ವಿ.ಕೆ. ಆರ್.ವಿ.ರಾವ್ ಅವರು ಪರಂಪರೆಯನ್ನು " ಸಂಸ್ಥೆಗಲಲ್ಲಿನ ಅಂಗಾಂಸಗಳಾಗಿ ರೂಪುಗೊಳ್ಳುವ ಹವ್ಯಾಸಗಳು, ಸಂಪ್ರದಾಯಗಳು, ಮನೋಧರ್ಮ, ಜೀವನ ವಿಧಾನಗಳು ಎಂದು ವ್ಯಾಖ್ಯಾನಿಸಿದ್ದಾರೆ."

## 26.9 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

1) 26.3 2)26.4 3) 26.5 4) 26.6

## 26.10 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1. ಭಾರತದಲ್ಲಿನ ಆಧುನೀಕರಣದ ವಿಶೇಷ ಲಕ್ಷಣಗಳನ್ನು ವಿವರಿಸಿ.
2. ಪರಂಪರೆಯನ್ನು ಕುರಿತು ಟಿಪ್ಪಣಿ ಬರೆಯಿರಿ.
3. ಭಾರತದ ಆಧುನೀಕರಣದ ಉಗಮವನ್ನು ಪರಿಶೀಲಿಸಿ
4. ಭಾರತದ ಪರಂಪರೆ ಮತ್ತು ಆಧುನಿಕರಣಗಳಿರುವ ವ್ಯತ್ಯಾಸವನ್ನು ತಿಳಿಸಿ.

**ಉತ್ತರಗಳು: ನೋಡಿ**

1) 26.3 2) 26.4 3) 26.5 4) 26.6

## 26.11 ಸಲಹಾ ಗ್ರಂಥಗಳು


- Learner D. The Passing of traditional Society, Glencoe, Free, 1958.
- Rudolph and Rudolph, Mobility and tradtion, Chicago University Press, Chicago 1958.
- Yogendra Singh, Modernaisation of Indian Tradition Delhi, Thomson Press, 1973.
- Desai A.R. (ed), Modernasation under Development societies, Bombay, Thacker 1971.
- Singer Milton, when a Great Tradition Modernises, Delhi, Vikas, 1972.
- Srinivas. M.N., Social Change in Modern India, Bombay, Allied Publishers, 1968.



- ಡಾ. ಬಿ.ಎಸ್. ಪರೇಶ್‌ಕುಮಾರ್, ಸಮಾಜಶಾಸ್ತ್ರ ಪ್ರವಾಚಕರು (ನಿವೃತ್ತ) ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - 570 006.

## ಘಟಕ : 27 ಸಾಮಾಜಿಕ ಆಧುನೀಕರಣದ ಸಮಸ್ಯೆಗಳು

ರಚನೆ


27.0 ಉದ್ದೇಶಗಳು

27.1 ಪರಿಚಯ

27.2 ಸಾಮಾಜಿಕ ಆಧುನಿಕರಣದ ಸಮಸ್ಯೆಗಳು

27.3 ರಾಜಕೀಯ ಆಧುನಿಕರಣದ ಸಮಸ್ಯೆಗಳು

27.3.1 ಸೈದ್ಧಾಂತಿಕ ದೃಷ್ಟಿಕೋನಗಳು

27.3.2 ರಾಜಕೀಯ ಆಧುನೀಕರಣದ ಪ್ರಕ್ರಿಯೆಗಳು

27.4 ಸಾರಾಂಶ

27.5 ಪ್ರಮುಖ ಪದಗಳು

27.6 ನಿಮ್ಮ ಪ್ರಗತಿ ಪರೀಕ್ಷಿಸಿ: ಉತ್ತರಗಳು

27.7 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

27.8 ಸಲಹಾ ಗ್ರಂಥಗಳು

## 27.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದರೆ ಕೆಳಗಿನ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಬಹುದು.

- ಸಾಮಾಜಿಕ ಆಧುನೀಕರಣಕ್ಕೆ ಸಂಬಂಧಿಸಿದ್ದ ವಿಚಾರಗಳು
- ರಾಜಕೀಯ ಆಧುನೀಕರಣಕ್ಕೆ ಸಂಬಂಧಿಸಿದ ವಿಷಯಗಳು
- ರಾಜಕೀಯ ಆಧುನೀಕರಣದ ಪ್ರಕ್ರಿಯೆಯಲ್ಲಿನ ಸಮಸ್ಯೆಗಳ ಸೈದ್ಧಾಂತಿಕ ದೃಷ್ಟಿಕೋನ
- ಮತ್ತು ರಾಜಕೀಯ ಆಧುನೀಕರಣದ ಹಾಗೂ ವೃತ್ತಿ ಧರ್ಮದ ಬೆಳವಣಿಗೆಯ ಹರಿಕಾರನಾಗಿ ಗಾಂಧೀಜಿ.

## 27.1 ಪರಿಚಯ

ಹಿಂದಿನ ಘಟಕದಲ್ಲಿ ನೀವು ಆಧುನಿಕತೆ ಮತ್ತು ಪರಂಪರೆ ನಡುವಿನ ವಿಷಯಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡಿದ ನಂತರ ಈ ಘಟಕದಲ್ಲಿ ಸಾಮಾಜಿಕ ಆಧುನೀಕರಣ ಮತ್ತು ರಾಜಕೀಯ ಆದುನೀಕರಣಕ್ಕೆ ಸಂಬಂಧಿಸಿದ ವಿಷಯಗಳನ್ನು ಅಧ್ಯಯನ ಮಾಡುತ್ತೀರಿ.

## 27.2 ಸಾಮಾಜಿಕ ಆಧುನೀಕರಣದ ಸಮಸ್ಯೆಗಳು

ಸಾಮಾಜಿಕ ಆಧುನೀಕರಣದ ಸಮಸ್ಯೆಗಳನ್ನು ಎರಡು ದೃಷ್ಟಿಯಿಂದ ನೋಡಬಹುದು.

ಮೊದಲನೆಯದು. ಸಿದ್ಧಾಂತಗಳು ಮತ್ತು ಪರಿಕಲ್ಪನೆಗಳಿಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಮೊದಲನೆಯದಕ್ಕೆ ಹೆಚ್ಚು ಹೋಲಿಕೆಯನ್ನು ವೈವಿಧ್ಯತೆ ಏಕ ರೂಪತೆ ಮತ್ತು ಆಧುನೀಕರಣದಲ್ಲಿ ಕುಪಿತ ಉಂಟಾಗುವ ಸನ್ನಿವೇಶಗಳಿಗೆ ಸಂಬಂಧಿಸಿದ್ದು ಎರಡನೆಯದು.

ಇಲ್ಲಿ ನಾವು ಈ ಸಂಗತಿಯನ್ನು ವಿಶ್ಲೇಷಣಾತ್ಮಕವಾಗಿ ಪರಿಶೀಲಿಸಬೇಕಾಗುತ್ತದೆ. ಸಾಮಾಜಿಕ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಆಧುನೀಕರಣದ ಪರಿಣಾಮಗಳು ಜಾತಿ, ಶೈಕ್ಷಣಿಕ ವ್ಯವಸ್ಥೆ, ಮತ್ತು ಭಾರತದಲ್ಲಿ ನಿರಾಕರಣೆಗೆ-(amorphism)ಗೆ ಅವಕಾಶ ಮಾಡಿಕೊಡುತ್ತಿರುವ ಜಾತಿ ಮತ್ತು ವರ್ಗಗಳ ನಡುವಿನ ಹೊಸ ಬಾಂಧವ್ಯಗಳು ಕಂಡು ಬರುತ್ತವೆ. ಮತ್ತು ಸಾಮಾನ್ಯವಾಗಿ ತಡವಾಗಿ ಆಧುನೀಕರಣದ ಪ್ರಭಾವಕ್ಕೆ ಒಳಗಾದವರು ಹೇಗೆ ಪ್ರತಿಕ್ರಿಯಿಸುತ್ತಾರೆಂಬುದು ಮುಖ್ಯವಾಗುತ್ತದೆ.

ಎ.ಆರ್. ದೇಸಾಯಿ ಯವರು ತಮ್ಮ " ಮಾಡರ್ನೈಸೇಷನ್, ದಿ ಕಾನ್ಸೆಪ್ಟ್ ಅಂಡ್ ಇಟ್ಸ್ ಕ್ರಿಟಿಕ್ಸ್" ಎಂಬ ಪ್ರಬಂಧದಲ್ಲಿ ಆಧುನೀಕರಣವು ಸಾಮಾಜಿಕ ರಚನೆಯಲ್ಲಿ ಗುಣಾತ್ಮಕ ಪರಿವರ್ತನೆಗಳನ್ನು ಉಂಟು ಮಾಡುವ ಪರಿಪೂರ್ಣ ಪ್ರಕ್ರಿಯೆಯಾಗಿದೆ ಎಂದು ಪರಿಗಣಿಸಿದ್ದಾರೆ. ಇಲ್ಲಿ ಕೆಲವು ಸೈದ್ಧಾಂತಿಕ ಗೊಂದಲಗಳಿರುವಂತೆ ಕಂಡು ಬರುತ್ತದೆ. ಪ್ರಜಾ ಪ್ರಭುತ್ವ ಪೂರ್ವಾವಶ್ಯಕತೆಗಳಲ್ಲಿ ಆಧುನೀಕರಣವು ಮುಖ್ಯವಾಗಿದೆ. ಆದರೆ ಆಧುನೀಕತೆ[madernity] ಮತ್ತು ಆಧುನೀಕರಣ [modernization] ಈ ಪದಗಳಲ್ಲಿ ಒಂದು ಬಗೆಯ ಗೊಂದಲ ಮತ್ತು ಅಸ್ಪಷ್ಟತೆ ಕಂಡು ಬರುತ್ತದೆ. ದೇಸಾಯಿಯವರು ಯೂರೋ ಸೆಂಟ್ರಿಕ್ ಮತ್ತು ಸೆಂಟ್ರಿಕ್ ಅಂಶಗಳ ಬಗೆಗೆ ಪ್ರಾಮುಖ್ಯತೆಯನ್ನು ನೀಡಿ ಆಧುನೀಕರಣದ ಇತರ ಪ್ರಭಲ ಅಂಶಗಳನ್ನು ಉಪೇಕ್ಷಿಸುವುದನ್ನು ಟೀಕೆ ಮಾಡಿದ್ದಾರೆ.

ಇದೇ ರೀತಿಯಲ್ಲಿ ಪ್ರೊ. ಯೋಗೇಂದ್ರ ಸಿಂಗ್‌ರವರು " ಮುಖ್ಯವಾಗಿ ಸಮಾಜ ವಿಜ್ಞಾನಿಗಳಲ್ಲಿ ಆಧುನೀಕರಣ ಪ್ರಕ್ರಿಯೆಯ ಪರಿಕಲ್ಪನೆಗಳು ಮತ್ತು ಮೌಲ್ಯ ನಿರ್ಣಾಯಕ ಪ್ರಮಾಣಗಳ ಬಗೆಗೆ ಏಕ ರೂಪದ ಅಭಿಪ್ರಾಯಗಳಿಲ್ಲ ಮತ್ತು ಪ್ರತಿಯೊಂದು ದೃಷ್ಟಿಕೋನವು ಸೈದ್ಧಾಂತಿಕ ಗೊಂದಲದಿಂದ ಕೂಡಿದೆ ಎಂದು ಹೇಳಬಹುದು. "ಎಂದು ತಿಳಿಸಿದ್ದಾರೆ.

ಸಾಮಾಜಿಕ ಆಧುನೀಕರಣದ ಸಮಸ್ಯೆಗಳನ್ನು ಎರಡು ದೃಷ್ಟಿಯಿಂದ ಅಧ್ಯಯನ ಮಾಡಬಹುದು. ಒಂದು ಸಂರಚನಾತ್ಮಕ[structural]ಎರಡು ವಿಕಾಸಾತ್ಮಕ[evolutions]ಸಂರಚನಾತ್ಮಕ ದೃಷ್ಟಿಕೋನವು ಕೆಲವು ಅಂಶಗಳಿಗೆ ಸಂಬಂಧಿಸಿದಂತೆ ಪ್ರಧಾನವಾಗಿ ಬಳಕೆಯಾಗುತ್ತದೆ. ಅದು ವಾಸ್ತವ-ಸ್ಥಿತಿಗತಿಗಳನ್ನು ಸಂರಚನೆಯ ಅಂಶಗಳ ಆಧಾರದ ಮೇಲೆ ವಿವರಿಸುತ್ತದೆ. ಈ

ಸಂರಚನೆಯ ಲಕ್ಷಣವು ಯಾವುವೆಂದರೆ, ಸಾಮಾಜಿಕ ಚಾಲನೆ, ಸಂವಹನ ಬೆಳವಣಿಗೆ, ಮಾಧ್ಯಮಗಳ ಮೂಲಕ ಪ್ರಸರಣ ಗೊಳ್ಳುವಿಕೆ, ಪ್ರಜಾಸತ್ತಾತ್ಮಕ ರಾಜಕೀಯ ಸಂಸ್ಥೆಗೂ ಮೌಲ್ಯಗಳು ಆಧುನೀಕರಣಕ್ಕೆ ಪೂರಕವಾದ ನೈತಿಕತೆ ಮತ್ತು ನಿಯಮಾವಳಿಗಳು ಸಮಾಜದ ತಂತ್ರಜ್ಞಾನದ ಮತ್ತು ಆರ್ಥಿಕ ಸಂಪನ್ಮೂಲಗಳು ಆಧುನೀಕರಣ ಇತಿಹಾಸಕ್ಕೆ ಸಂಬಂಧಪಟ್ಟ, ಸಮಾಜದಲ್ಲಿ ಶುರುವಿನಲ್ಲಿ ಕಂಡುಬರುವ ಸನ್ನಿವೇಶಗಳೂ ಕೂಡ ಪ್ರಭಾವ ಬೀರುವ ಅಂಶಗಳಾಗಿವೆ. ಆಧುನೀಕರಣವು ಈ ಪ್ರಭಾವಶಾಲಿ ಅಂಶಗಳಿಂದ ಮೂಡಿಬರುವ ಸಂಗತಿಯಾಗಿದೆ. ಡೇನಿಯಲ್ ಲರ್ನರ್‌ವರು ಆಧುನೀಕರಣವು ನಗರೀಕರಣ, ಅಕ್ಷರತೆ, ಮತ್ತು ಕೈಗಾರಿಕೀಕರಣ, ಮಾಧ್ಯಮ ಪಾಲ್ಗೊಳುವಿಕೆ ಮೂಲಕ ಉಂಟಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಆಧುನೀಕರಣ ಪ್ರಕ್ರಿಯೆ ಈ ರೀತಿಯಲ್ಲಿ ತರ್ಕಬದ್ಧರೀತಿಯಲ್ಲಿಯೇ ಜರುಗುತ್ತದೆ ಎಂದು ಹೇಳಲಾಗುವುದಿಲ್ಲ. ಸ್ಥೂಲಹಂತದಲ್ಲಿ [magolevel] ನಗರೀಕರಣವು ಕೈಗಾರಿಕೀಕರಣದಿಂದ ಬಲವರ್ಧನೆಯನ್ನು ಪಡೆಯುತ್ತದೆ. ಆದರೆ, ನಗರೀಕರಣವೆಂದರೆ ಪಾರಂಪರಿಕವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಲ್ಲಿನ ಬದಲಾವಣೆ ಮಾತ್ರ ಎಂದು ಭಾವಿಸುವುದಾದರೆ, ಕೈಗಾರಿಕೀಕರಣವು ನಗರೀಕರಣಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಹೇಳಲಾಗುವುದಿಲ್ಲ. ಅಲ್ಲದೆ. ಭಾರತದಲ್ಲಿನ ನಗರೀಕರಣವು, ಬಂಧುತ್ವ, ಜಾತಿ ಮತ್ತು ಇತರೆ ಪಾರಂಪರಿಕ ಸಂಗತಿಗಳಿಂದ ಮುಕ್ತವಾಗಿಲ್ಲ. ನಗರೀಕರಣದಿಂದ ಈ ಅಂಶಗಳು ಕಾಣೆಯಾಗಬೇಕಿತ್ತು. ಅದು ಭಾರತದಲ್ಲಿ ಸಂಭವಿಸಿಲ್ಲ. ನಮ್ಮ ಸಮಾಜ ಶಾಸ್ತ್ರೀಯ ನಿರೀಕ್ಷೆಗಳಿಗಿಂತ ವಿರುದ್ಧವಾದ ಈ ಅಂಶಗಳು ಇಂದಿಗೂ ಪ್ರಭಾವಶಾಲಿ ಅಂಶಗಳಾಗಿ ಮುಂದುವರಿಯುತ್ತಿವೆ. ನಗರಗಳಲ್ಲಿ ಜಾತಿ ಮತ್ತು ಬಂಧುತ್ವದ ಆಧಾರದ ಮೇಲೆ ನೆರೆಹೊರೆಯ ವಿಷಯವನ್ನು ಕುರಿತು ಅಧ್ಯಯನಗಳು ನಡೆದಿದ್ದು ನಗರಗಳಲ್ಲಿಯೂ ಕೂಡ ನೆರೆಹೊರೆ ಗ್ರಾಮಗಳಂತೆ, ಜಾತಿ - ಬಂಧುತ್ವದ ಅಂಶಗಳ ಪ್ರಭಾವಕ್ಕೆ ಒಳಗಾಗಿರುವುದು ಕಂಡು ಬರುತ್ತದೆ. ನಗರಾಭಿಮುಖಿ ವಲಸೆಗಳೂ ಕೂಡ " ಕುಟುಂಬ ಕೇಂದ್ರೀಕೃತ ಸಾಂಘಿಕ ವಲಸೆ" ಗಳಾಗಿವೆ. ನಗರೀಕರಣ ಮತ್ತು ಕೈಗಾರಿಕೀಕರಣಗಳ ನಡುವಿನ ಸಂಬಂಧವೂ ಬೇರೆಬೇರೆಯಾಗಿರುತ್ತದೆ. ಅನೇಕ ವೇಳೆ ಕೈಗಾರಿಕೀಕರಣ ಉಂಟಾಗಿಯೂಕೂಡ ನಗರೀಕರಣ ಪ್ರಕ್ರಿಯೆ ಜರುಗಬಹುದು. ಲರ್ನರ್ ಅವರು ಅಕ್ಷರತೆಯು (liter-a:y) ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತದೆ. ಎಂದು ತಿಳಿಸುತ್ತದೆ. ಆದರೆ, ಅನೇಕ ರಾಷ್ಟ್ರಗಳಲ್ಲಿ ಅನಕ್ಷರಸ್ತ ಜನರೂ ಕೂಡ ಅನೇಕ ಚಳುವಳಿಗಳಲ್ಲಿ ಪಾಲ್ಗೊಂಡು ತಮ್ಮ ರಾಷ್ಟ್ರಕ್ಕೆ ಸ್ವಾತಂತ್ರಗಳಿಸುವಲ್ಲಿ ಸಫಲರಾಗಿದ್ದಾರೆ. ಇದು ಲರ್ನರ್ ಅವರ ಅಭಿಪ್ರಾಯವನ್ನು ಹುಸಿಗೊಳಿಸುತ್ತದೆ.

ವಿಕಾಸ ದೃಷ್ಟಿಕೋನಕ್ಕೆ ಎರಡು ವಿಧಾನಗಳಿವೆ. ಅವುಗಳೆಂದರೆ ಅ)ಸಂರಚನೆ ಕಾರ್ಯಾತ್ಮಕ (Structural functional)

ಆ) ದ್ವಂದ್ವಾತ್ಮಕ ಬೌತವಾದ Dialectical

ದ್ವಂದ್ವಾತ್ಮಕ ಬೌತವಾದದ (Dialectical Theorists) ಸಿದ್ಧಾಂತಗಳು ಮಾರ್ಕ್ಸ್ ಅವರ ಕ್ರಾಂತಿಗೆ, ಆಧುನೀಕರಣದ ವೈಫಲ್ಯವು (Breakdown) ಒಂದು ಅಪವಿತ್ರ ಪರ್ಯಾಯವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ ಇದು ಆಧುನೀಕರಣದ ಪೂರ್ವಾವಶ್ಯಕತೆಯಾಗಿದೆ. ಅವರು ಆಧುನೀಕರಣ ಪ್ರಕ್ರಿಯೆಯನ್ನು ಬದಲಾಗುವ ಉತ್ಪಾದನಾ ಬಾಂದವ್ಯಗಳ ಮತ್ತು ಉತ್ಪಾದನಾ ಮೂಲಗಳ ಮತ್ತು ಸ್ತರ ವಿನ್ಯಾಸದಲ್ಲಿನ ಮಾರ್ಪಾಡು ಮತ್ತು ವರ್ಗಸಂಘರ್ಷಗಳ ಮೂಲಕ ಗುರುತಿಸುತ್ತದೆ.

ಸಂರಚನೆಯ ಮತ್ತು ಕಾರ್ಯಾತ್ಮಕ ವಿಧಾನವು ಜೈವಿಕ ಸಾದೃಶ್ಯ (organic analogy) ದ ಆಧಾರದ ಮೇಲೆ ರೂಪುಗೊಂಡಿದ್ದು, ವಿಕಾಸವು ಪ್ರಾಣಿಯ ಹಂತದಿಂದ ಮಾನವನ ಹಂತದವರೆಗೆ ಮತ್ತು ಅದರಿಂದಾಚೆ, ಉಂಟಾಗುವ ನಿರಂತರ ಪರಿವರ್ತನೆಗೆ ಅನ್ವಯವಾಗುತ್ತದೆ ಎಂದು ಭಾವಿಸುತ್ತದೆ. ಈ ರೀತಿಯ ಚಿಂತನೆಗೆ ಚಾಲನೆ ಕೊಟ್ಟವರಲ್ಲಿ ಟಾಲ್‌ಕಾಟ್ ಪಾರ್ಸನ್ಸ್‌ರವರು ಮುಖ್ಯವಾದವರು. ವಿಕಾಸ ಸಂಭವಿಸುವ ಸರಣಿಯು ನಿಗಧಿತ ರೀತಿಯಲ್ಲಿ ಉಂಟಾಗಬಹುದು. ಅಥವಾ ಅಸಮವಾಗಿರಬಹುದು. ಅಥವಾ ಕೆಲವು ಭಾರಿ ಅವು ತೀರ ಬಿಗುವಿನಿಂದ ಕೂಡಿದ್ದು ಮುಂದೆ ಸಂಭವಿಸುವ ವಿಕಾಸಕ್ಕೆ ಪ್ರತಿರೋಧವನ್ನುಂಟುಮಾಡಬಹುದು.

ಹೀಗಿದ್ದಾರೆ ಆಧುನೀಕರಣ ಪ್ರಕ್ರಿಯೆಯು ಸರಳ ಪ್ರಕ್ರಿಯೆಯಲ್ಲ ಮತ್ತು ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ ಕಂಡು ಬರುವಂತೆ ಅದರ ಪರಿಣಾಮಗಳು ಏಕ ರೀತಿಯಾಗಿರುವುದಿಲ್ಲ.ಅಲ್ಲದೆ ಆಧುನೀಕರಣದ ಪ್ರಬಾವಶಾಲಿ ಅಂಶಗಳು ಒಂದು ಸಮಾಜದಲ್ಲಿ ಕಾರ್ಯಾಚರಣೆಗೆ ಬಂದಾಗ, ಅವು ಆಂತರಿಕವಾಗಿ ರೂಪುಗೊಳ್ಳದೆ ಪ್ರಯೋಗಾತ್ಮಕವಾಗಿ ಕಾರ್ಯಾಚರಣೆಗೆ ತರಲ್ಪಟ್ಟಾಗ ಸಮಾಜ

ಅವುಗಳಿಗೆ ಹೊಂದಿಕೊಳ್ಳದೇ ಇರಬಹುದು ಅಥವಾ ಆಧುನೀಕರಣದ ದೆಸೆಯಿಂದ ಹೆಚ್ಚು ಸಬಲೀಕರಣ ಕಠಿಣಗೊಳ್ಳುವಂತಹ ಅಂಶಗಳು ಆಯಾ ಸಮಾಜಗಳಲ್ಲಿ ಕಂಡು ಬರುವ ಬದಲಾವಣೆಗಳನ್ನು ನಾವು ಅವಲೋಕಿಸಿದರೆ ಮೇಲಿನವಾದ ಸರಿಎನಿಸುತ್ತದೆ.

## 27.3 ರಾಜಕೀಯ ಆಧುನೀಕರಣದ ಸಮಸ್ಯೆ

ಆಧುನೀಕರಣದ ರಾಜಕೀಯ ಅಂಶಗಳು ಆಧುನೀಕರಣದ ಪ್ರಕ್ರಿಯೆಗೊಳಪಡುವ ಸಮಾಜಗಳ ರಾಜಕೀಯ ವ್ಯವಸ್ಥೆಗಳ ಸಂರಚನೆಯ ಮತ್ತು ಸಾಂಸ್ಕೃತಿಕ ಅಂಶಗಳಲ್ಲಿ ಉಂಟಾಗುವ ಬದಲಾವಣೆಗೆ ಅನ್ವಯವಾಗುತ್ತದೆ. ವಿಶ್ಲೇಷಣಾತ್ಮಕವಾಗಿ ಹೇಳಬೇಕೆಂದರೆ ರಾಜಕೀಯ ವ್ಯವಸ್ಥೆಯು ಒಟ್ಟು ಸಾಮಾಜಿಕ ವ್ಯವಸ್ಥೆಯ ಒಂದು ಉಪ ವ್ಯವಸ್ಥೆಯಾಗಿದೆ. ಇದು ಪರಸ್ಪರ ಒಡನಾಡುವ ಬಹು ವ್ಯಕ್ತಿಗಳಿಂದ ಕೂಡಿದ್ದು ಇವರ ವರ್ತನೆಗಳು ಮತ್ತು ಸಂಸ್ಥೆಗಳು ರಾಜಕೀಯ ಅಧಿಕಾರ ಮತ್ತು ಸಾಮರ್ಥ್ಯಗಳಿಗೆ ಸಂಬಂಧಿಸಿರುತ್ತವೆ. ಹೀಗಾಗಿ ಇವು ಸಾಮಾಜಿಕ ವ್ಯವಸ್ಥೆಯ ಪ್ರಭಾವಕ್ಕೆ ವಾಸ್ತವವಾಗಿಯೇ ಒಳಗಾಗಿರುತ್ತವೆ. ಜೇಮ್ಸ್ ಎಸ್. ಕೋಲ್ಮನ್ ಅವರು" ರಾಜಕೀಯ ವ್ಯವಸ್ಥೆಯು ಅಧಿಕಾರಯುಕ್ತ ನೀತಿ ಧೋರಣೆಗಳನ್ನು ರೂಪಿಸುವುದಕ್ಕೆ, ಸಾಧಿಸುವುದಕ್ಕೆ ಮತ್ತು ಸಾಮೂಹಿಕ ಧ್ಯೇಯೋದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂದಪಟ್ಟ ಪ್ರಕ್ರಿಯೆಗಳು, ಸಂಸ್ಥೆಗಳು ಮತ್ತು ನಂಬಿಕೆಗಳನ್ನು ಒಳಗೊಂಡ ವ್ಯವಸ್ಥೆಯಾಗಿದೆ" ಎಂದು ತಿಳಿಸಿದ್ದಾರೆ. " ರಾಜಕೀಯ ಸಂರಚನೆಯು" ರಾಜಕೀಯ ಪಾತ್ರ ಮತ್ತು ಪ್ರಕ್ರಿಯೆಗಳ ನಡುವಿನ ಸಂಬಂಧಗಳನ್ನು ವ್ಯವಸ್ಥೆಗೊಳಿಸುವ ನಕೆ, ಅನ್ವಯವಾಗುತ್ತದೆ. ' ರಾಜಕೀಯ ಸಂಸ್ಕೃತಿಯು' ರಾಜಕೀಯ ವ್ಯವಸ್ಥೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಮನೋಧರ್ಮ, ನಂಬಿಕೆಗಳುಮತ್ತು ಮೌಲ್ಯಗಳ ಸಂಕೀರ್ಣ ವ್ಯವಸ್ಥೆಯಾಗಿದೆ. ಇ.ಸಿ. ಬ್ಲಾಕ್‌ರವರು ರಾಜಕೀಯ ಆಧುನೀಕರಣವು ತನ್ನ ಸುತ್ತಮುತ್ತಲಿನ ಪರಿಸರವನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದಂತೆ ವಿಸ್ತೃತಗೊಳ್ಳುತ್ತಿರುವ ಜ್ಞಾನದ ದೆಸೆಯಿಂದ ಸಮಾಜದಲ್ಲಿನ ಎಲ್ಲ ಸಂಸ್ಥೆಗಳಲ್ಲಿ ಉಂಟಾಗುವ ಪರಿವರ್ತನೆಗಳಿಗೆ ಅನ್ವಯವಾಗುತ್ತದೆ ಎಂದು ತಿಳಿಸಿದ್ದಾರೆ.

ಆಲ್ಮ[illegible] ಮತ್ತು ಪಾವೆಲ್ ಅವರು " ರಾಜಕೀಯ ಆಧುನೀಕರಣವು ರಾಜಕೀಯ ಸಂಸ್ಕೃತಿ[illegible] ಧರ್ಮ ನಿರಪೇಕ್ಷ[secularization] ಅಥವಾ ಜಾತ್ಯಾತೀತಗೊಳಿಸುವ ಪ್ರಕ್ರಿಯೆಗೆ ಅನ್ವಯವಾಗುತ್ತದೆ. ಇದು ಸಮಾಜದ ರಾಜಕೀಯ ವ್ಯವಸ್ಥೆಯ ಕಾರ್ಯ ಸಮರ್ಥತೆ. ನೈಪುಣ್ಯತೆ ಮತ್ತು ಪರಿಣಾಮವನ್ನು ಅಧಿಕಗೊಳಿಸುತ್ತದೆ ಎಂದು ಅಭಿಪ್ರಾಯಪಡುತ್ತಾರೆ."

ರಾಜಕೀಯ ಆಧುನೀಕರಣವನ್ನು ಐತಿಹಾಸಿಕ, ವರ್ಗೀಕರಣ[Typological] ಮತ್ತು ವಿಕಾಸದ ದೃಷ್ಟಿಯಿಂದಲೂ ಅರಿತುಕೊಳ್ಳಬಹುದಾಗಿದೆ. ಐತಿಹಾಸಿಕವಾಗಿ, ರಾಜಕೀಯ ಆಧುನೀಕರಣವು ವಿಶಿಷ್ಟವಾಗಿ ರಾಜಕೀಯ ಸಂರಚನೆ ಮತ್ತು ಸಂಸ್ಕೃತಿಗಳಲ್ಲಿ ಸಂಭವಿಸುವ ಸಮಗ್ರ ಬದಲಾವಣೆಗಳಿಗೆ ಅನ್ವಯವಾಗುತ್ತದೆ.

- **ಐತಿಹಾಸಿಕ ರಾಜಕೀಯ ಆಧುನೀಕರಣದ ಮುಖ್ಯಾಂಶಗಳು ಈ ಕೆಳಗಿನಂತಿವೆ**

(i) ತ್ವರಿತಗೊಂಡ ಸಾಮಾಜಿಕ ಚಲನೆ Accelarated social mobility

(ii) ಧರ್ಮ ನಿರಪೇಕ್ಷೀಕರಣ Secularization

(iii) ವಾಣಿಜ್ಯೀಕರಣ Commercilization

(iv) ಕೈಗಾರಿಕೀಕರಣ Industrilization

(v) ಪುನರ್‌ಸ್ತರ ವಿನ್ಯಾಸೀಕರಣ restratification

(vi) ಅಧಿಕಗೊಂಡ ರಾಷ್ಟ್ರೀಯ ಜೀವನ ಮಟ್ಟ Increased/ National standar of Living

(vii) ಅಕ್ಷರತೆಯ ಪ್ರಸರಣ Diffusim literary

(viii) ಶಿಕ್ಷಣ Education

(ix) ಸಮೂಹ ಮಾಧ್ಯಮ Mass media

(x) ರಾಷ್ಟ್ರೀಯ ಏಕೀಕರಣ National Unification

ವರ್ಗೀಕರಣೀಕೃತ ರಾಜಕೀಯ ಆಧುನೀಕರಣವು ಆಧುನಿಕ ಪೂರ್ವ ಪರಂಪರಾಗತ ರಾಜಕೀಯವು ಪರಂಪರಾಗನುಗತೊತ್ತರ ಆಧುನಿಕ ರಾಜಕೀಯವಾಗಿ ರೂಪುಗೊಳ್ಳುವ ಪ್ರಕ್ರಿಯೆಗೆ ಅನ್ವಯವಾಗುತ್ತದೆ. ವಿಕಾಸ ವಿಕಸನಾತ್ಮಕ ರಾಜಕೀಯ ಆಧುನೀಕರಣವು ರಾಜಕೀಯ ಮಾನವನ, ಸಮಸ್ಯೆಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಅಥವಾ ಅವುಗಳನ್ನು ಪರಿಹರಿಸುವುದಕ್ಕೆ ನಿರಂತರವಾದ ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ಅಥವಾ ಉಂಟಾಗುವ ಬದಲಾವಣೆಗಳ ಜೊತೆ ನಿರಂತರ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಮತ್ತು ಹೊಸ ಸಾಮಾಜಿಕ ಧ್ಯೇಯೋದ್ದೇಶಗಳನ್ನು ಸಾಧಿಸಲು ಉದ್ದೇಶ ಪೂರ್ವಕವಾಗಿ ಕ್ರಿಯಾಶೀಲವಾಗಿ ಶ್ರಮಿಸುವುದಕ್ಕೆ ಬೇಕಾದ ಸಾಮರ್ಥ್ಯದಲ್ಲಿ ಮುಕ್ತವಾದ ಹೆಚ್ಚಳವಾಗುವುದಕ್ಕೆ ಅನ್ವಯವಾಗುತ್ತದೆ.

ರಾಜಕೀಯ ಆಧುನೀಕರಣವನ್ನು ಸಾಮಾಜಿಕ ಸಂರಚನೆಯ ಇತರ ಅಂಶಗಳಲ್ಲಿ ( ಉದಾ: ಆರ್ಥಿಕಾಭಿವೃದ್ಧಿ ಮತ್ತು ಅದರ ಪರಿಣಾಮಗಳು) ಆಧುನೀಕರಣ ಉಂಟಾಗುವುದರ ದೆಸೆಯಿಂದ ಸಮಾಜದ ಮತ್ತೊಂದು ಉಪವ್ಯವಸ್ಥೆಯಾದ ರಾಜಕೀಯ ಕ್ಷೇತ್ರದಲ್ಲಿ ಉಂಟಾಗುವ ಸಂರಚನಾ (ಕಾರ್ಯಾತ್ಮಕ ಪರಿವರ್ತನೆಗಳಿಗೆ ಅನ್ವಯವಾಗುತ್ತದೆ. ಎಸ್. ಎನ್. ಐಸೆಸ್ಟಾಟ್‌ರವರು ರಾಜಕೀಯ ಆಧುನೀಕರಣವು ಹೆಚ್ಚು ವೈವಿಧ್ಯೀಕೃತ ರಾಜಕೀಯ ಸಂರಚನೆಯಿಂದ ಕೂಡಿರುತ್ತದೆ.) ಎಂಬುದಾಗಿ ತಿಳಿಸುತ್ತಾರೆ. ರಾಜಕೀಯವನ್ನು ಬದುಕಿನ ಎಲ್ಲ ಕ್ಷೇತ್ರಗಳಿಗೂ ವಿಸ್ತರಿಸುವಿಕೆ, ಪಾರಂಪರಿಕ ಗಣ್ಯವರ್ಗದವರ ರಾಜಕೀಯ ನಿಯಂತ್ರಣ ದುರ್ಬಲಗೊಳ್ಳುವಿಕೆ, ರಾಜಕೀಯ ಪಾಲ್ಗೊಳ್ಳುವಿಕೆಯ ಹೆಚ್ಚಳ ಇವೆಲ್ಲ ರಾಜಕೀಯ ಆಧುನೀಕರಣದ ಲಕ್ಷಣಗಳು. ರಾಜಕೀಯ ಆಧುನೀಕರಣಕ್ಕೆ ಸಂಬಂಧಪಟ್ಟ ಪ್ರಸ್ತುತ ಚರ್ಚೆಯನ್ನು ಎರಡು ಆಯಾಮಗಳಿಂದ ಪರಿಶೀಲಿಸಬಹುದು.

ಅ) ರಾಜಕೀಯ ಆಧುನೀಕರಣ ಪರಿಕಲ್ಪನೆಯು, ಸಂರಚನೆಯ ಬದಲಾವಣೆಗಳಿಂದ ಕೂಡಿದ, ರಾಜಕೀಯ ಸಂಸ್ಥೆಗಳ ಹೊಸ ಸ್ಥಿತ್ಯಂತರ ಸೂಚಿಸಲು ಸಮರ್ಥವಾದ ಪರಿಕಲ್ಪನೆಯಾಗಿದೆಯೇ?ಎಂಬ ದೃಷ್ಟಿಯಿಂದ ಪರಿಶೀಲಿಸಬಹುದು.

ಸಮಾಜ ಶಾಸ್ತ್ರೀಯ ದೃಷ್ಟಿಕೋನ ಎಂಬ ಹೆಸರಿನಲ್ಲಿ ಕೇಂದ್ರೀಯವಾದ ಮತ್ತು ಪೂರ್ವಗ್ರಹಗಳನ್ನು ನಿವಾರಿಸಲು ರಾಜಕೀಯ ಆಧುನೀಕರಣದ ಪರಿಕಲ್ಪನೆಗಳನ್ನು ಮತ್ತು ಪ್ರತಿಪಾದನೆಗಳನ್ನು ಪುನರ್ ಪರಿಶೀಲಿಸುವ ಅಗತ್ಯವಿದೆಯೇ?

ಆ) ವಿವಿಧ ಸಮಾಜಗಳಲ್ಲಿ ರಾಜಕೀಯ ಆಧುನೀಕರಣಕ್ಕೆ ಸಂಬಂಧಪಟ್ಟ ಪ್ರಕ್ರಿಯೆ. ಅದರಲ್ಲಿ ಏಕರೂಪ ಅಂಶಗಳು ಮತ್ತು ವಿಭಿನ್ನತೆಗಳು.

ಈ ಎರಡು ಪರಿಕಲ್ಪನಾತ್ಮಕ ಆಯಾಮಗಳನ್ನು ಪ್ರತ್ಯೇಕಿಸಲಾಗಿದೆ. ಆದರೆ ಮುಂದಿನ ಚರ್ಚೆಯಲ್ಲಿ ಈ ಎರಡು ಸ್ಪಷ್ಟವಾಗಿ ಪ್ರತಿನಿಧಿಸಲ್ಪಟ್ಟಿವೆ.

## 27.3.1 ರಾಜಕೀಯ ಆಧುನೀಕರಣದ ಸಮಸ್ಯೆಗಳು - ಸೈದ್ಧಾಂತಿಕ ದೃಷ್ಟಿಕೋನಗಳು

ಕೆಲವು ಸೈದ್ಧಾಂತಿಕ ವಿಧಾನಗಳನ್ನು ಅವು ವಾಸ್ತವಿಕ ಪರಿಸ್ಥಿತಿಗಳಿಗೆ ಎಷ್ಟರ ಮಟ್ಟಿಗೆ ಸಮಂಜಸವಾಗಿ ಅನ್ವಯವಾಗುತ್ತವೆ ಎಂಬ ಅಂಶದ ಆಧಾರದ ಮೇಲೆ ರಾಜಕೀಯ ಆಧುನೀಕರಣದ ಸಮಸ್ಯೆಗಳನ್ನು ಪರಿಶೀಲಿಸುವುದು ಅಗತ್ಯವಾಗಿದೆ. ಅವುಗಳನ್ನು ಮುಖ್ಯವಾಗಿ ವಿಶ್ಲೇಷಿಸುವ ಮೂರು ವಿಧಾನಗಳಿವೆ ಅಥವಾ ದೃಷ್ಟಿಕೋನಗಳು

### 1. ಲಕ್ಷಣಗಳ ಪಟ್ಟಿ ದೃಷ್ಟಿಕೋನ

ಇದು ಅನೇಕ ಅಧ್ಯಯನ ಕಾರರಿಂದ ಪ್ರಸ್ತುತದ ರಾಜಕೀಯ ವ್ಯವಸ್ಥೆಯ ಮುಖ್ಯ ಲಕ್ಷಣಗಳು ಎಂದು ಪರಿಗಣಿಸಲ್ಪಟ್ಟ ಅಂಶಗಳ ಕಡೆ ಗಮನ ಹರಿಸುತ್ತದೆ. ಈ ದೃಷ್ಟಿಕೋನವು ತಾತ್ಕಾಲಿಕವಾಗಿ ಮತ್ತು ಸಾಂಸ್ಕೃತಿಕ ಆಧಾರದ ಮೇಲೆ ರೂಪುಗೊಂಡಿದೆ. ಪ್ರಮುಖವಾಗಿ ವಿವಿಧ ಆಯಾಮಗಳಿಂದ ಕೂಡಿದೆ ಮತ್ತು ಬೇರೆ ರಾಜಕೀಯ ವ್ಯವಸ್ಥೆಗಳಲ್ಲಿ ಕಂಡು ಬರದೇ ಇರುವ ಕೇಲವೇ ಲಕ್ಷಣಗಳಿಗೆ ಪ್ರಾಮುಖ್ಯತೆ ನೀಡುತ್ತದೆ ಎಂಬ ಕಾರಣಗಳ ಆಧಾರದ ಮೇಲೆ ಟೀಕೆಗೊಳಗಾಗಿದೆ.

2. ರಿಡಕ್ಷನಿಸ್ಟ್ ದೃಷ್ಟಿಕೋನ

ಒಂದೇ ಒಂದು ಪೂರ್ವನಿಗದಿತ ಅಂಶ, ವಿವರಣಾತ್ಮಕ ಪ್ರಭಾವಶಾಲಿ ಅಂಶ, ಅಥವಾ ನಿರ್ಣಾಯಕವಾದ ಪೂರಕ ಅಂಶವು ರಾಜಕೀಯ ಆಧುನೀಕರಣದ ಮತ್ತು ಆ ಮೂಲಕ ರಾಜಕೀಯ ವ್ಯವಸ್ಥೆಯ ಆಧುನೀಕರಣದ ಮುಖ್ಯ ಸೂಚಕವಾಗಿದೆ ಎಂದು ಪರಿಗಣಿಸುವುದಕ್ಕೆ ಅನ್ವಯವಾಗುತ್ತದೆ.

ಆಲ್ಮಂಡ್‌ರವರು ಸಾಮರ್ಥ್ಯ ಅನ್ನು ಪ್ರಮುಖವಾಗಿ ಪರಿಗಣಿಸಿದರೆ, ರಿಗ್ಸ್[1963] ರವರು ವೈವಿಧ್ಯೀಕಾರಣವನ್ನು ಪೂರ್ವ ನಿಗದಿತ ಅಂಶವೆಂದು ಪರಿಗಣಿಸಿದ್ದಾರೆ. ಹಂಟಿಂಗ್‌ಟನ್‌ರವರು [1965] ಸಂಸ್ಥೀಕರಣ ಮುಖ್ಯವೆಂದು ಪ್ರತಿಪಾದಿಸಿದ್ದಾರೆ. ಬೈಂಡರ್ ಅವರು [1962] ರಾಷ್ಟ್ರೀಯ ಐಕ್ಯತೆಯನ್ನು ,ಡೇನಿಯಲ್ ಲರ್ನರವರು,'ಮಾನಸಿಕ ಲಕ್ಷಣಗಳನ್ನು'ಡ್ಯೂಷೆ[1961] ಅವರು 'ಸಾಮಾಜಿಕ ಚಲನೀಕರಣವನ್ನು' ಸೈಎಸ್ ಎಮ್, ಲಿಪ್ಸೆಟ್‌ರವರು ಸಾಮಾಜಿಕ ಆರ್ಥಿಕ ಪೂರಕಾಂಶಗಳನ್ನು ನಿರ್ಣಾಯಕವಾದ ಪೂರ್ವನಿಗದಿತ ಅಂಶಗಳೆಂದು ಪ್ರತಿಪಾದಿಸಿದ್ದಾರೆ.

ಆದರ್ಶ ವಿಧ ದೃಷ್ಟಿಕೋನ

ಆದರ್ಶ ವಿಧ ಅಥವಾ ನಮೂನೆ ದೃಷ್ಟಿಕೋನವು ಆಧುನಿಕ ರಾಜಕೀಯ ವ್ಯವಸ್ಥೆ ಅಥವಾ ರಾಜಕೀಯ ಆಧುನೀಕರಣದ ಪರಿಕಲ್ಪನೆಯ ಪರಿಕಲ್ಪನೀಕರಣಗಳಲ್ಲಿ ಗುಪ್ತವಾಗಿ ಅಥವಾ ಪ್ರಕಟವಾಗಿ ಒಳಗೊಂಡಿರುತ್ತದೆ. ಒಂದು ಮೂಲಭೂತವಾದ ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿನ ವಿವರಣಾತ್ಮಕ ಲಕ್ಷಣಗಳು ಅನಿವಾರ್ಯವಾದ ಆದರ್ಶ ಮತ್ತು ವಿಶಿಷ್ಟವಾದ ಲಕ್ಷಣಗಳಿವೆ. ಒಂದು ವಾಸ್ತವಿಕ ಸನ್ನಿವೇಶವನ್ನು ಅದರ ಪರಿಶುದ್ಧ ಮತ್ತು ಅಮೂರ್ತ ರೂಪದಲ್ಲಿ ಪ್ರತಿನಿಧಿಸುವ ಅಂಶವೇ ಆದರ್ಶ ವಿಧ ಅಥವಾ ನಮೂನೆ ಎನ್ನಿಸಿಕೊಳ್ಳುತ್ತದೆ. ಇದು ವರ್ಗೀಕರಣ ಮತ್ತು ವಿಶ್ಲೇಷಣೆಯ ಉದ್ದೇಶಗಳಿಗೆ ಒಂದು ಉಪಯುಕ್ತ ಸಾಧನವಾಗಿದೆ. ಉದಾ: ವೈಚಾರಿಕಕ್ರಿಯೆಯನ್ನು ತೆಗೆದುಕೊಂಡರೆ, ಅವೈಚಾರಿಕ ಕ್ರಿಯೆಯ ವಿರುದ್ಧ ಲಕ್ಷಣಗಳನ್ನು ಪರಿಗಣಿಸಿ ನಾವು ವೈಚಾರಿಕ ಕ್ರಿಯೆಯ ಆದರ್ಶ ನಮೂನೆಯನ್ನು ರೂಪಿಸಬಹುದಾಗಿದೆ. ಆದರ್ಶ ನಮೂನೆಗಳನ್ನು ಅವುಗಳಲ್ಲಿನ ತದ್ವಿರುದ್ಧ ಬಗೆಗಳನ್ನು ಗುರುತಿಸಲು ಮತ್ತು ವಾಸ್ತವಿಕತೆಯನ್ನು ಗುರುತಿಸಲು ರೂಪಿಸಲಾಗುತ್ತದೆ. ಆಧುನಿಕ ರಾಜಕೀಯ ವ್ಯವಸ್ಥೆಯೆಂಬ ಪರಿಕಲ್ಪನೆಯು ಒಂದು ಆದರ್ಶ ವಿಶಿಷ್ಟ ಪಾರಂಪರಿಕ ರಾಜಕೀಯ ವ್ಯವಸ್ಥೆಯು ರಾಜಕೀಯ ಆಧುನೀಕರಣದ ನಿರಂತರ ಪ್ರಕ್ರಿಯೆಯ ಒಂದು ಹಂತದಲ್ಲಿ ಕಾಣಿಸಿಕೊಳ್ಳುವ ವ್ಯವಸ್ಥೆ ಎಂದು ಗುರುತಿಸಲು ಸಹಾಯ ಮಾಡುತ್ತದೆ. ಇದನ್ನು ಸಚಿತ್ರವಾಗಿ ಈ ಕೆಳಕಂಡಂತೆ ಗುರುತಿಸಬಹುದು.

ಪಾರಂಪರಿಕ ಸ್ಥಿತ್ಯಂತರದ ಆಧುನಿಕ

ಮೈನ್ ಮತ್ತು ಟೋನೀಸ್ ಅವರ ಸರಳ ವರ್ಗೀಕರಣದಿಂದ ಪ್ರಭಾವಿತಗೊಂಡು ಟಾಲ್ ಕಾಟ್ ಪಾರ್ಸನ್ಸ್ ಅವರು ಸಂಕೀರ್ಣವಾದ ಆದರ್ಶ ವರ್ಗೀಕರಣ ಮಾಡಲು, ತುಲನಾತ್ಮಕ ರಾಜಕೀಯ ಅಧ್ಯಯನ ಮಾಡಲು ನೆರವಾಗುವಂತೆ ಬಹು ಆಯಾಮಗಳಿಂದ ಕೂಡಿದ ವಿಧಾನಗಳನ್ನು ಸೂಚಿಸುತ್ತಾರೆ. ಈ ದೃಷ್ಟಿಕೋನದ ಪ್ರಕಾರ ಪಾರಂಪರಿಕ ರಾಜಕೀಯ ವ್ಯವಸ್ಥೆ ಮುಖ್ಯವಾಗಿ ಆರೋಪಿತ ಅಂಶಗಳು ಹಾಗೂ ವಿಶಿಷ್ಟತೆಯಿಂದ ಕೂಡಿದ್ದು, ಅನೇಕ ಸಮಾಜಗಳಲ್ಲಿ ಕಂಡು ಬರುವ ವ್ಯವಸ್ಥೆಯಾಗಿದೆ. ಆದರೆ ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ " ಸಾಧನೆ ( ಅಭಿಮುಖಿ)ನಿರ್ದೇಶಿತ, ಸಾರ್ವಜನಿಕ ಮತ್ತು ನಿಗದಿತ ಗಳಿಂದಕೂಡಿದೆ.

ಉದಾಹರಣೆ I. ಪಾರಂಪರಿಕ ರಾಜಕೀಯ ವ್ಯವಸ್ಥೆ

ಪಾರಂಪರಿಕ ರಾಜಕೀಯ ವ್ಯವಸ್ಥೆ.................................ಆರೋಪಿತ ..........................

ವಿಶಿಷ್ಟ

ಉದಾಹರಣೆ II ಆಧುನಿಕ ರಾಜಕೀಯ ವ್ಯವಸ್ಥೆ

ನಿಗಧಿತ .................................. ಆಧುನಿಕ ರಾಜಕೀಯ ವ್ಯವಸ್ಥೆ.............................. ಸಾಧನೆ ನಿರ್ದೇಶಿತ

- ಸಾರ್ವತ್ರಿಕ

ಈ ಮೇಲಿನ ಚಿತ್ರವು ಆಧುನಿಕ ಮತ್ತು ಪಾರಂಪರಿಕ ರಾಜಕೀಯ ವ್ಯವಸ್ಥೆಗಳಿಗೆ ಸಂಬಂಧಿಸಿದ ವೈರುಧ್ಯಗಳನ್ನು ಈ ಎರಡೂ ಬಗೆಗಳಿಗೆ ಸಂಬಂಧಿಸಿದ ಲಕ್ಷಣಗಳ ಆಧಾರದ ಮೇಲೆ ನಿರೂಪಿಸುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೇನೆಂದರೆ ನಿರಂತರವಾಗಿ ಮುಂದುವರಿಯುವ ವಾಸ್ತವಿಕತೆ ಈ ಆದರ್ಶ ನಮೂನೆಗಳು ಅಥವಾ ವರ್ಗೀಕರಣಗಳು ಸೂಚಿಸುವಷ್ಟು ಸರಳವಾಗಿಲ್ಲ ಎಂಬುದಾಗಿದೆ.

### 27.3.2 ರಾಜಕೀಯ ಆಧುನೀಕರಣ ಪ್ರಕ್ರಿಯೆಯಲ್ಲಿನ ಸಮಸ್ಯೆಗಳು

ಎಸ್. ಎನ್. ಐಸೆನ್ಸ್ಟಾಟ್‌ರವರು " ಇಡಿ ಪ್ರಪಂಚದಾದ್ಯಂತ ನಾವು ರಾಜಕೀಯ ಸಂಘಟನೆಗಳು ಮತ್ತು ಪ್ರಕ್ರಿಯೆಗಳ ವೇದಿಕೆಗಲು ನಿರಂತರವಾಗಿ ಹರಡುತ್ತಿರುವುದನ್ನು ಕಾಣಬಹುದಾಗಿದೆ. ಈ ಪ್ರಕ್ರಿಯೆಯು ಇದುವರೆಗೆ ಬಹಳಷ್ಟು ಗಮನ ಸೆಳೆದಿರುವ ಆರ್ಥಿಕ ಬೆಳವಣಿಗೆಗೆ ಮತ್ತು ಅಭಿವೃದ್ಧಿ ಪ್ರಕ್ರಿಯೆಗಿಂತಲೂ ಹೆಚ್ಚು ಸಾರ್ವತ್ರಿಕವೂ ಮತ್ತು ಸಾಮಾನ್ಯ ಅಥವಾ ಜನಜನಿತವೂ ಆದ ಪ್ರಕ್ರಿಯೆಯಾಗಿದೆ. ಮತ್ತು ಇದೂ ಕೂಡ ಆರ್ಥಿಕಾಭಿವೃದ್ಧಿಯ ಒಂದು ಮೂಲಭೂತ ಸನ್ನಿವೇಶ ಅಥವಾ ಪೂರ್ವಾಗತ್ಯವಾಗಿದೆ. ಅಲ್ಲದೆ, ಅನೇಕ ಹೊಸದೆಂದು ಪರಿಗಣಿಸಲ್ಪಟ್ಟಿರುವ ರಾಷ್ಟ್ರಗಳಲ್ಲಿ ಆರ್ಥಿಕಾಭಿವೃದ್ಧಿಯ ಗುರಿಯು ಆರ್ಥಿಕ ಜೀವನದ ಒಂದು ವಾಸ್ತವಾಂಶ ಎನ್ನುವುದಕ್ಕಿಂತ ಮಿಗಿಲಾಗಿ, ಒಂದು ರಾಜಕೀಯ ಪ್ರೇರಿತ ಗುರಿಯಾಗಿದೆ. ಮತ್ತು ಆರ್ಥಿಕಾಭಿವೃದ್ಧಿಯ ಹಣೆಬರಹವು ಈತ್ತೀಚಿನ ವರ್ಷಗಳಲ್ಲಿ ರಾಜಕಾರಣಿಗಳ ನಿಯಂತ್ರಣದಲ್ಲಿದೆ" ಎಂಬುದಾಗಿ ತಿಳಿಸಿದ್ದಾರೆ. ಇದು ಸಮಾಜದಲ್ಲಿ ರಾಜಕೀಯ ವ್ಯವಸ್ಥೆಯ ಪರಿಣಾಮಕಾರಿ ಪಾತ್ರವನ್ನು ತಿಳಿಸಿಕೊಡುತ್ತದೆ. ಇದು ಸಮಾಜಕ್ಕೆ ಗುರಿ, ಕನಸು ಮತ್ತು ನಿರೀಕ್ಷೆಗಳನ್ನುಕಟ್ಟಿಕೊಡುತ್ತದೆ ಮತ್ತು ಎಲ್ಲವನ್ನೂ ತನ್ನ ಅನುಕೂಲಕ್ಕೆ ಬಳಕೆ ಮಾಡಿಕೊಳ್ಳುತ್ತದೆ ಎಂಬುದನ್ನು ಸೂಚಿಸುತ್ತದೆ.ಹೊಸ ರಾಜ್ಯಗಳ ರಾಜಕೀಯ ಆಧುನಿಕತೆಯ ಪ್ರಕ್ರಿಯೆಗಳಲ್ಲಿ ಮತ್ತು ವ್ಯವಸ್ಥೆಗಳ ರಚನೆಯಲ್ಲಿ ವಿಭಿನ್ನತೆಗಳಿದ್ದರೂ ಕೆಲವು ಬಗೆಯ ಸಾರ್ವಜನಿಕತೆಗಳು ಮತ್ತು ಸಮಾನ ಸಂಬಂಧಗಳೂ ಕೂಡ ಕಂಡುಬರುತ್ತವೆ ಎಂಬುದಾಗಿ ಐಸೆನ್ಸ್ಟಾಟ್‌ರವರು ತಿಳಿಸಿದ್ದಾರೆ.

ಸಂಕ್ಷಿಪ್ತವಾಗಿ ತಿಳಿಸುವ ಉದ್ದೇಶದಿಂದ ನಾವು ನಮ್ಮ ವಿಶ್ಲೇಷಣೆಯನ್ನು ಭಾರತಕ್ಕೆ ಸಂಬಂಧಿಸಿದಂತೆ, ಕೆಲವು ಅಂಶಗಳಿಗೆ ಮಾತ್ರ ಸೀಮಿತಗೊಳಿಸುತ್ತೇವೆ.

- ಬದಲಾಗುತ್ತಿರುವ ರಾಜಕೀಯ ಸಂರಚನೆ ಮತ್ತು ಸಂಸ್ಕೃತಿ
- ಪರಿಪೂರ್ಣವಾಗಿ ಹೊಂದಿಕೊಳ್ಳಲೂ ಆಗದ ವಿರೋದಾತ್ಮಕವೂ ಅಲ್ಲದ ಹಿಂದಿನ ಸಂರಚನೆ; ಅನೇಕವೇಳೆ ಇದು ಎರಡು ಅಥವಾ ಹೆಚ್ಚಿನ ಸಂರಚನೆಗಳ ಸಂಯೋಗದಿಂದಾದ ರಾಜಕೀಯ ಆಧುನೀಕರಣವಾಗಿರಬಹುದು.

  ರಾಷ್ಟ್ರ ರಾಜ್ಯದ ಉಗಮ; ಅದರ ಪ್ರತಿಕೂಲ ಕಾರ್ಯಗಳ ಬಗೆಗಳು

  ಮಹಾತ್ಮಗಾಂಧಿ: ರಾಜಕೀಯ ಆಧುನೀಕರಣದ ಆದ್ಯಪ್ರವರ್ತಕ

ಬ್ರಿಟನ್ ಜೊತೆಗಿನ, ಸಂಪರ್ಕದ ಉಪಪರಿಣಾಮವಾಗಿ ರಾಜಕೀಯ ಆಧುನೀಕರಣವುಂಟಾಗಿದೆ ಎಂಬುದನ್ನು ಪರಿವರ್ತನಾಶೀಲ ಭಾರತೀಯ ರಾಜಕೀಯ ಸಂರಚನೆಯನ್ನು ಗಮನಿಸುವುದರಿಂದ ಅರಿತುಕೊಳ್ಳಬಹುದಾಗಿದೆ. ಡೇನಿಯಲ್ ಲರ್ನರ್ ಅವರು ಆಧುನೀಕರಣ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ (Political participations) ಅಥವಾ ಭಾಗವಹಿಸುವಿಕೆಗಳ ನಡುವೆ ಸಂಬಂಧವನ್ನು ಗುರುತಿಸುತ್ತಾರೆ. ಆಧುನೀಕರಣದ ರಾಜಕೀಯ ಚೌಕಟ್ಟು ಮುಖ್ಯವಾಗಿ ನ್ಯಾಯಬದ್ಧ ಅಧಿಕಾರ ವ್ಯವಸ್ಥೆಯ ಬದಲಾಗುವ ಮೂಲಾಧಾರಗಳಿಂದ ಪ್ರಭಾವಿತಗೊಂಡಿರುತ್ತದೆ ಮತ್ತು ಇದರ ಪ್ರಸರಣದ ಪ್ರಕ್ರಿಯೆ ಮತ್ತು ಸಾಮಾಜಿಕ ಸಂರಚನೆಯಲ್ಲಿನ ಅದರ ಕೇಂದ್ರ ಸ್ಥಾನವು ಕೂಡ ಈ ಬದಲಾಗುತ್ತಿರುವ ನ್ಯಾಯಬದ್ಧ ಅಧಿಕಾರದ ಮೂಲಾಂಶಗಳನ್ನೇ ಅವಲಂಬಿಸಿರುತ್ತದೆ. . ಪಾರಂಪರಿಕ ರಾಜಕೀಯ ವ್ಯವಸ್ಥೆಯನ್ನು ಹೊಂದಿರುವ ಸಮಾಜದಲ್ಲಿ ಅಧಿಕಾರದ ಮೂಲಗಳು ಪಾರಂಪರಾಗತವಾಗಿ ರೂಪುಗೊಂಡ ವ್ಯವಸ್ಥೆಯಲ್ಲಿ ಅದರ ಸ್ವಾಂಸ್ಥೀಕೃತ ಅಧಿಕಾರ ಅಂದರೆ ನಾಯಕ ಅಥವಾ ಪುರೋಹಿತ (pried)ಅಥವಾ ಆರೋಪಿತ ಲಕ್ಷಣಗಳ (ascribed) ಗೆಸೆಯಿಂದ ಈ ಅಧಿಕಾರಸ್ಥ ಕಛೇರಿಯ

ಳ್ಳುವ ಆಡಳಿತಗಾರರಲ್ಲಿ ಕೇಂದ್ರೀಕೃತವಾಗಿರುತ್ತದೆ. ಭಾರತದಲ್ಲಿ ಜಾತಿಯ ಶ್ರೇಣಿ ವ್ಯವಸ್ಥೆ ಮತ್ತು ಅಧಿಕಾರ ವ್ಯವಸ್ಥೆಗಳಿಗೆ ನಿಕಟ ಸಂಬಂಧವಿದ್ದು ಅಧಿಕಾರವು ಜಾತಿ ವ್ಯವಸ್ಥೆಯಿಂದ ರೂಪುಗೊಳ್ಳುತ್ತದೆ. [ ಶ್ರೀನಿವಾಸ್ ಎಂ.ಎಸ್. ಆಂದ್ರೆಬೆಥೆ, ಮತ್ತು ಬೈಲೀಯವರು, ಜಾತಿ ಭೂಮಿ ಮತ್ತು ಅಧಿಕಾರ ಇವುಗಳ ಬಗೆಗೆ ತಮ್ಮ ಕೃತಿಗಳಲ್ಲಿ ಮಾಡಿರುವ ಚರ್ಚೆಯನ್ನು ಗಮನಿಸಿ]

ರಾಜಕೀಯ ಅಧಿಕಾರಸ್ಥಾ ಕಛೇರಿಯಲ್ಲಿ ಸ್ಥಾನ ಪಡೆದಿರುವ ಆಡಳಿತಗಾರರು ಅಧಿಕಾರಯುಕ್ತ ಗುಣ ಪಡೆಯುತ್ತಾರೆ ಮತ್ತು ರಾಜಕೀಯ ನಿಯಮಗಳ ಬಗೆಗಿನ ಅವರ ಅನುವರ್ತನೆ ಇಚ್ಛಾನುಸಾರವಾಗಿ(ಜವಾಬ್ದಾರಿ/ಉತ್ತರದಾಯಿತ್ವ)ರುತ್ತದೆ. ಅಂದರೆ, ನಿಜವಾಗಿಯೂ "ರಾಜಕೀಯ"ಎಂದು ಪರಿಗಣಿಸಲ್ಪಡಬಹುದಾದ ಕ್ರಿಯೆಗಳು ಅಥವಾ ನೀತಿ ಧೋರಣೆಗಳನ್ನು ರೂಪಿಸುವ ಅಧಿಕಾರವು [ಇಡೀ ಸಮುದಾಯ ಅಥವಾ ದೇಶಕ್ಕೆ ಅನ್ವಯವಾಗುವಂತೆ] ಕೆಲವರಿಗೆ ಮಾತ್ರ ಸೀಮಿತವಾಗಿರುತ್ತದೆ ಮತ್ತು ರಾಜಕೀಯ ಅಧಿಕಾರ ವ್ಯವಸ್ಥೆಗಳು ಪರಂಪರಾನುಗತವಾಗಿ ಮುಚ್ಚಿದ ವ್ಯವಸ್ಥೆಗಳನ್ನು ಇಂತಹ ವ್ಯವಸ್ಥೆಯಲ್ಲಿ ಆಡಳಿತಾಧಿಕಾರವು(anltherity) ಶ್ರೇಣಿಕೃತವಾಗಿರುತ್ತದೆಯೇ ಹೊರತು ಸರ್ವಸಮ್ಮತಿಯ ಆಧಾರದ ಮೇಲೆ ರೂಪುಗೊಂಡಿರುವುದಿಲ್ಲ.

ಪ್ರಜಾಸತ್ತಾತ್ಮಕ ರಾಜಕೀಯ ಅಧಿಕಾರ ವ್ಯವಸ್ಥೆಯು ಅಧಿಕಾರಕ್ಕೆ ಸಂಬಂಧಿಸಿದ ಈ ಬಗೆಯ ಪಾತ್ರ ರಚನೆಗಳನ್ನು ಆಮೂಲಾಗ್ರವಾಗಿ ಬದಲಾಯಿಸುತ್ತದೆ. ಅಧಿಕಾರವು ಮುಚ್ಚಿದ ಶ್ರೇಣಿಕೃತ ವ್ಯವಸ್ಥೆಯಾಗಿ ಉಳಿಯುವುದಿಲ್ಲ. ರಾಜಕೀಯ ಕ್ರಿಯೆಯ ಅಥವಾ ಕಾರ್ಯಾಚರಣೆಯ ಕ್ಷೇತ್ರವು ಸಾಮಾಜಿಕ ಭಾಗವಹಿಸುವಿಕೆಗೆ ಅನುಕೂಲವಾಗುವಂತೆ ವಿಸ್ತರಿಸಲ್ಪಡುತ್ತದೆ ಮತ್ತು ಅನೇಕ ಆಸಕ್ತ ಸಮೂಹಗಳ ಚರ್ಚೆ, ನಿರ್ಧಾರಗಳಿಂದ ರೂಪುಗೊಳ್ಳುವ ಜನರ ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸತೊಡಗುತ್ತದೆ. ರಾಜಕೀಯ ಸಂರಚನೆ ಅಥವಾ ವ್ಯವಸ್ಥೆಗಳ ಕಾರ್ಯ ನಿರ್ವಹಣೆಯಲ್ಲಿ ಜವಾಬ್ದಾರಿಯ ಹೊಸ ಪರಿಕಲ್ಪನೆ ಮೂಡಿ ಬರುತ್ತದೆ. ತತ್ಪರಿಣಾಮವಾಗಿ , ಸಾಮಾಜಿಕ ರಾಜಕೀಯ ಪ್ರಕ್ರಿಯೆಗಳಲ್ಲಿ ಪಾತ್ರ ವೈವಿಧ್ಯೀಕರಣ, ಸಂಧಾನ ನಡೆಸುವಿಕೆ, ಸೈದ್ಧಾಂತಿಕ ಚಲನೀಕರಣ ಮತ್ತು ಆಸಕ್ತ ಸಮೂಹಗಳ ರೂಪುಗೊಳ್ಳುವಿಕೆಗಳಿಗೆ ಹೆಚ್ಚಿನ ಮಹತ್ವ ನೀಡುವುದು ಕಂಡು ಬರುತ್ತದೆ. ಈ ಎಲ್ಲ ಪ್ರಭಾವಶಾಲಿ ಅಂಶಗಳೂ ರಾಜಕೀಯ ಸಂರಚನೆಯ ಆಧುನೀಕರಣಕ್ಕೆ ಅವಕಾಶ ಮಾಡಿಕೊಡುತ್ತದೆ..

ಭಾರತೀಯ ಸಮಾಜದಲ್ಲಿನ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೌಲ್ಯ ನಿರ್ಣಯಿಕರಣದಲ್ಲಿ ಎರಡು ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಅವೆಂದರೆ ರಾಜಕೀಯ ಪ್ರಕ್ರಿಯೆಗಳಲ್ಲಿ ಹೆಚ್ಚಾಗುತ್ತಿರುವ ಸಾಮೂಹಿಕ ಪಾಲ್ಗೊಳ್ಳುವಿಕೆ ಮತ್ತು ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದು ಮಾಧ್ಯಮಗಳಾದ, ಜಾತಿ , ಸಂಘಗಳು, ಆದಿವಾಸಿ ಸಮೂಹಗಳು, ಭೂಸಾವಾರು ಸಮೂಹಗಳು ಮತ್ತು ಜನಾಂಗೀಯ ಸಮೂಹಗಳ ಪ್ರಭಾವದಿಂದ ರೂಪುಗೊಳ್ಳುವ ಸಾಮೂಹಿಕ ಹಿತಾಸಕ್ತಿಗಳಿಗೆ ಪ್ರಾಮುಖ್ಯತೆ ನೀಡುವಿಕೆಗಳಾಗಿವೆ. ಅನೇಕ ರಾಜಕೀಯ ಆವಿಷ್ಕಾರಗಳ ಮುಂದುವರಿದ ಗಣ್ಯವರ್ಗಪ್ರಭಾವದ ಲಕ್ಷಣಗಳು ಸ್ವ ವೇದ್ಯವಾಗಿದೆ. ವಾಸ್ತವವಾಗಿ ಭಾರತದಲ್ಲಿನ ಒಂದು ನಿಶ್ಚಿತ ಬಗೆಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಆಯ್ಕೆ ಜನರ ಇಚ್ಛೆಯಾನುಸಾರ ರೂಪುಗೊಂಡಿರುವುದರ ಬದಲಾಗಿ ಗಣ್ಯವರ್ಗದವರ ಆಯ್ಕೆಯಾಗಿರುತ್ತದೆ. ಆಧುನೀಕರಣದ ಪ್ರಭಾವ ಬೀರುವ ಅಂಶಗಳು ಮತ್ತು ಭಾರತದ ಸಂಪ್ರದಾಯ ಬದ್ಧತೆ ಅಥವಾ ಪರಂಪರೆಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸುವಾಗ ಕೆಲವರು, ಆರೋಪಿತ ಅಂಶಗಳ ಪ್ರಜಾಸತ್ತಾತ್ಮಕ ಸಾಧಿತ ಅಂಶಗಳಿಗಿಂತ ಪ್ರಧಾನವಾಗಿರುವುದನ್ನು ಗುರುತಿಸಿದ್ದಾರೆ. ಆದರೆ ರುಢಾಲ್ಫ್ ಮತ್ತು ರೂಢಲ್ಫರವರು ಜಾತಿಯಂತಹ ಸಮಾಂತರ ಸಮುದಾಯಗಳು ವೈಚಾರಿಕ ಸಂಘಟಿತ ಸಮೂಹಗಳ ಲಕ್ಷಣಗಳನ್ನು ರೂಢಿಸಿಕೊಂಡು ರಾಜಕೀಯ ವ್ಯವಸ್ಥೆಯ (ನವ) ಆರೋಪಿತ ಲಕ್ಷಣದ ವಿರುದ್ಧ ಹೋರಾಟಮಾಡಿ, ಹೊಸ ವ್ಯವಸ್ಥೆಯಲ್ಲಿ ಸಮಾನತೆಗೆ ಅವಕಾಶ ನೀಡಬೇಕೆಂದು ಪ್ರಯತ್ನಿಸುವುದನ್ನು ಅಂದರೆ ಹೊಸ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕೆಂದು ಪ್ರತಿಪಾದಿಸಿರುವುದನ್ನು ತೋರಿಸಿಕೊಟ್ಟಿದ್ದಾರೆ. ಸಾಮಾಜಿಕ ಚಳುವಳಿಗಳು ಬುಡಕಟ್ಟಿನ, ಭಾಷಿಕ, ಜಾತಿಯು ಏನೇ ಆಗಿರಲಿ ಅವುಗಳಿಗೆ ರಾಜಕೀಯ ಆಧುನೀಕರಣದಲ್ಲಿ ಸಮರ್ಪಕ ಪ್ರಾಮುಖ್ಯತೆ ನೀಡಬೇಕಾಗಿದೆ. ದೀಪಾಂಕರ್ ಗುಪ್ತಾ ಅವರು ಪರಂಪರೆ ಮತ್ತು ಆಧುನೀಕತೆಯ ನಡುವೆ ವಿರೋಧವಿದೆ ಎಂಬುದನ್ನು ದೃಢವಾಗಿ ತಳ್ಳಿಹಾಕುತ್ತಾರೆ.

- ರೂಪುಗೊಳ್ಳುತ್ತಿರುವ ರಾಷ್ಟ್ರ ರಾಜ್ಯ ಅದರ ಅನಾನುಕೂಲಕರ ಪ್ರಭಾವಗಳು

ರಾಜಕೀಯ ಆಧುನೀಕರಣ ಮತ್ತು ರಾಜಕೀಯ ಸಮಾಜಶಾಸ್ತ್ರದ ಸಾಹಿತ್ಯದಲ್ಲಿ ರಾಷ್ಟ್ರವು ಒಂದಕ್ಕಿಂತ ಹೆಚ್ಚಿನ ಜನಾಂಗೀಯ

ಸಮೂಹ ಅಂದರೆ ಜಾತಿ/ ಧರ್ಮ/ ಭಾಷಿಕ ಇತ್ಯಾದಿಗಳ ಪ್ರಭಾವದಿಂದ ರೂಪುಗೊಂಡ ಭಾವನೆಗಳಿಂದ ರೂಪಿತವಾದ ಸಮುದಾಯಕ್ಕೆ ಅನ್ವಯವಾಗುತ್ತದೆ. " ರಾಜ್ಯ"ವು ರಾಷ್ಟ್ರಕ್ಕೆ ಸಂಬಂಧಿಸಿದ ಭೌಗೋಳಿಕ ಎಲ್ಲೆ ಕಟ್ಟನ್ನು ನಿಯಂತ್ರಿಸುವ ಆಡಳಿತ ನಡೆಸುವ ಆಡಳಿತಾತ್ಮಕ ಸಲಕರಣೆ ಮತ್ತು ವ್ಯವಸ್ಥೆಗೆ ಅನ್ವಯವಾಗುತ್ತದೆ. ರಾಜಕೀಯ ಮತ್ತು ಸಾಮಾಜಿಕ ಮನಶಾಸ್ತ್ರಜ್ಞರಾದ ಆಶಿ,, ನಂದೀಯವರು ರಾಜ್ಯದ ಹೆಚ್ಚುತ್ತಿರುವ ಪ್ರಭಾವದ ಕಡೆ ನಮ್ಮ ಗಮನ ಸೆಳೆಯುತ್ತಾರೆ. ಹೆಚ್ಚು ವೈವಿಧ್ಯತೆ ಇರುವುದರಿಂದ ರಾಜಕೀಯ ಕೇಂದ್ರೀಕರಣವು ಅನಿವಾರ್ಯ ಮತ್ತು ಒಂದು ಪೂರ್ವಾಗತ್ಯವೂ ಕೂಡ ಆಗಿದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. ಅಲ್ಲದೆ ಆಶಿಷ್ ನಂದಿ ಯವರು ' ರಾಜ್ಯ' ಹೇಗೆ ಕ್ರಿಯಾತ್ಮಕತೆಯ ವಿರುದ್ಧವಾಗಿದೆ. ಮತ್ತು ಬದುಕಿನ ಎಲ್ಲಾ ಕ್ಷೇತ್ರಗಳನ್ನು ಆವರಿಸಿಕೊಳ್ಳುತ್ತಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅದು ಹೇಗೆ ಬಹು ಭಾವಸೂತ್ಮಕತೆಗೆ ಅಪಾಯಕಾರಿಯಾಗಿದೆ ಎಂಬುದನ್ನು ಮತ್ತು ಅದರ ವಿಕೃತರೂಪ ಹಿಂದೂ ಮೂಲಭೂತವಾದಿತ್ವವು ಯೂರೋಪಿಯನ್ ಜಾತ್ಯಾತೀತತೆಗೆ ಅಪಾಯಕಾರಿಯಾಗಿದೆ ಎಂಬುದನ್ನು ನಿವರಿಸಿದ್ದಾರೆ.

- **ರಾಜಕೀಯ ಆಧುನೀಕರಣ ಮತ್ತು ವೃತ್ತಿ ಧರ್ಮದ ಬೆಳವಣಿಗೆಯ ಹರಿಕಾರನಾಗಿ ಗಾಂಧಿ**

ರಾಷ್ಟ್ರೀಯ ಚಳುವಳಿಗಳಲ್ಲಿ ಗಾಂಧಿಯವರ ಅನುಯಾಯಿಗಳಾಗಿದ್ದು ಬಹುತೇಕ ವ್ಯಕ್ತಿಗಳು ಅವರ ರಾಜಕೀಯ ನಾಯಕತ್ವವನ್ನು ಒಪ್ಪಿಕೊಂಡರೂ ಅವರ ಧಾರ್ಮಿಕ ಬದ್ಧತೆ ಮತ್ತು ಸಾಮಾಜಿಕ ಸುಧಾರಣೆಯ ಸಂದೇಶಗಳನ್ನು ತಿರಸ್ಕರಿಸಿದವರಾಗಿದ್ದರು. ಬಹಳಷ್ಟು ಇಂಡಿಯನ್ನರಿಗೆ ಗಾಂಧಿ ಮತ್ತು ಅವರ ತತ್ವಗಳು ಹಳತಾಗಿ ಕಾಣುತ್ತದೆ. ಕೆಲವು ಬುದ್ಧಿಜೀವಿಗಳಿಗೆ ಅವರು " ಕೈಗಾರಿಕಾ ಸಮಾಜದ ಬಗ್ಗೆ ಮಾಡಿರುವ ಟೀಕೆ" ಸ್ವೀಕೃತವಾದುದಲ್ಲ. ಇಷ್ಟೆಲ್ಲಾ ಆದರೂ ರಾಜಕೀಯ ವ್ಯವಸ್ಥೆಗೆ ಸಂಬಂಧಿಸಿದಂತೆ ಗಾಂಧಿಯವರ ಅಭಿಪ್ರಾಯಗಳೂ ವಿಮರ್ಶಾತ್ಮಕವಾಗಿ ಪರಿಶೀಲಿಸಬೇಕಾಗುತ್ತದೆ.

ಗಾಂಧೀಯವರು ರಾಜಕೀಯ ಆಧುನೀಕರಣಕ್ಕೆ ನೀಡಿದ ಮಹತ್ವದ ಕೊಡುಗೆ , ಅವರು ಭಾರತವು ರಾಷ್ಟ್ರೀಯ ಹೊಂದಾಣಿಕೆಗೆ ಅಥವಾ ಒಮ್ಮತತೆ ಮತ್ತು ಹೆಗ್ಗುರುತನ್ನ ಪಡೆದುದೊಂದು, ಒಂದು ರಾಷ್ಟ್ರವಾಗಿ ರೂಪುಗೊಂಡು ಭಾರತೀಯರ ಧೈರ್ಯ, ಸ್ಥೈರ್ಯ, ಆತ್ಮ ಗೌರವ ಮತ್ತು ರಾಜಕೀಯ ಸಾಮರ್ಥ್ಯವನ್ನು ಅಭಿವೃದ್ಧಿಸಿ ಕೊಳ್ಳಲು ಅವರು ನೆರವು ನೀಡಿದುದಾಗಿದೆ. ಅವರು ರಾಜಕೀಯ ನಡವಳಿಕೆ, ಕಾರ್ಯ ನೀತಿ ಮತ್ತು ಕಾಲ ಮತ್ತು ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಹಿತ- ಮಿತ ನಡವಳಿಕೆ ರೂಪಿಸಿಕೊಳ್ಳುವುದು ಮತ್ತು ಭಾರತದ ರಾಜಕೀಯ ವ್ಯವಸ್ಥೆಯ ನೈತಿಕತೆ, ವೈಚಾರಿಕ, ಪ್ರಜಾಸತ್ತಾತ್ಮಕ ಮತ್ತು ವ್ಯಕ್ತಿ ಧಾರ್ಮಿಕ (Professional) ಅಂಶಗಳನ್ನು ರೂಢಿಸಿಕೊಳ್ಳುವಂತೆ ಶ್ರಮಿಸಿದರು. ಗಾಂಧಿಯವರು ತಮ್ಮ ಸಾರ್ವಜನಿಕ ಕಾರ್ಯಗಳಲ್ಲಿ ಆಧುನಿಕತೆ, ಬ್ಯಾಲೆನ್ಸ್ ಶೀಟ್ ಮತ್ತು ತಾಳ ಮಾಪಕ ಯಂತ್ರದಿಂದ ಎಲ್ಲ ಲೆಕ್ಕಾಚಾರ ಹಾಕುವಂತೆ ಎ ವನ್ನು ಲೆಕ್ಕಾಚಾರ ಮಾಡಿ ನಿರ್ವಹಿಸುತ್ತಿದ್ದರು. ಅವರ ಕಾರ್ಯಗಳು ಮತ್ತು ಜೀವನವು ಮ್ಯಾಕ್ಸ್‌ವೆಬರ್‌ರವರು ಭಾರತದಲ್ಲಿ ಪಾರತಾಕಿಕ ಮನೋಧರ್ಮದ ದೆಸೆಯಿಂದ ಬಂಡವಾಳ ಶಾಹಿ ವ್ಯವಸ್ಥೆ ರೂಪುಗೊಳ್ಳಲಾರದು ಎಂಬ ಅಭಿಪ್ರಾಯವನ್ನು ಪುಷ್ಟಿಕರಿಸುವುದಿಲ್ಲ. ಅವರು ಮಿತ ವ್ಯಯವನ್ನು ಅಳವಡಿಸಿಕೊಂಡರು ಮತ್ತು ಕಾಲ ನಿಯಮಿತತೆಯನ್ನು ಅಳವಡಿಸಿಕೊಂಡರು. ಇದು ಮ್ಯಾಕ್ಸ್‌ವೆಬರ್‌ರನು ಜೆಕ್ಸ್‌ರ್ಯಾಷನಲ್ ಆಕ್ಷನನ್ನು ಅಂದರೆ ವೈಚಾರಿಕ ಕ್ರಿಯೆಯನ್ನು ನೆನಪಿಸುತ್ತದೆ. ಇವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯನ್ನು ಸಂಘಟಿಸಿದರು. ಇದು ಮುಂದೆ ವೃತ್ತಿಪರ ಸಂಸ್ಥೆ( ರಾಜಕೀಯ)ಯಾಗಿ ಬೆಳೆದು ಬಂದಿದ್ದು ಮತ್ತು ಸ್ವಾತಂತ್ರಗಳಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿತ್ತು. ಈ ಸಂಘಟನೆಯಲ್ಲಿ ಅನೇಕ ಹೆಸರಾಂತ ವ್ಯಕ್ತಿಗಳಿದ್ದು, ಸಂಘಟನಾ ಚಾತುರ್ಯವನ್ನು ಪ್ರದರ್ಶಿಸಿದ್ದಾರೆ ಅನೇಕರು ಪ್ರಸ್ತುತ ಭಾರತದಲ್ಲಿ ರಾಜಕೀಯ ವ್ಯವಸ್ಥೆಯನ್ನು ಮತ್ತು ರಾಜಕೀಯ ಸಂಸ್ಕೃತಿಗಳಲ್ಲಿ ಮಹತ್ತರ ಮಾರ್ಪಾಡನ್ನು ತರಬಲ್ಲ ಮಹಾನ್ ವ್ಯಕ್ತಿಯ ಕೊರತೆ ಇದೆ ಎಂಬುದನ್ನು ಅರಿತಿದ್ದಾರೆ. ಅಂತಹ ವ್ಯಕ್ತಿಯ ಅಗತ್ಯತೆಯನ್ನು ಎಲ್ಲರೂ ಪ್ರತಿಪಾದಿಸುತ್ತಾರೆ.

- ನಿಮ್ಮ ಪ್ರಗತಿ ಪರೀಕ್ಷಿಸಿ

1. ಸಾಮಾಜಿಕ ಆಧುನೀಕರಣದ ಸಮಸ್ಯೆಗಳನ್ನು ಪರಿಶೀಲಿಸಿ
2. ರಾಜಕೀಯ ಆಧುನೀಕರಣ ಸಮಸ್ಯೆಗಳನ್ನು ಹೊರತನ್ನಿ

3. ರಾಜಕೀಯ ಆಧುನೀಕರಣ ಅಧ್ಯಯನದ ಸೈದ್ಧಾಂತಿಕ ದೃಷ್ಟಿಕೋನವನ್ನು ಚರ್ಚಿಸಿ

4. ರಾಜಕೀಯ ಆಧುನೀಕರಣ ಪ್ರತಿಕ್ರಿಯೆಯಲ್ಲಿರುವ ಸಮಸ್ಯೆಗಳನ್ನು ವಿಶ್ಲೇಷಿಸಿ

5. ರಾಜಕೀಯ ಆಧುನೀಕರಣದ ಮತ್ತು ವೃತ್ತಿ ಧರ್ಮದ ಬೆಳವಣಿಗೆಯ ಹಕಾರನಾಗಿ ಗಾಂಧಿಜಿಯನ್ನು ಚರ್ಚಿಸಿ.

## 27.4 ಸಾರಾಂಶ

ಆಧುನೀಕರಣ ಪ್ರಕ್ರಿಯೆಯು ಸರಳ ಪ್ರಕ್ರಿಯೆಯಲ್ಲ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕಂಡು ಬರುವಂತೆ ಅದರ ಪರಿಣಾಮಗಳು ಏಕರೀತಿಯಾಗಿರುವುದಿಲ್ಲ. ಅಲ್ಲದೆ ಆಧುನೀಕರಣದ ಪ್ರಭಾವಶಾಲಿ ಅಂಶಗಳು ಒಂದು ಸಮಾಜದಲ್ಲಿ ಕಾರ್ಯಾಚರಣೆಗೆ ಬಂದಾಗ, ಅ ಗಳು ಆಂತರಿಕವಾಗಿ ರೂಪುಗೊಳ್ಳದೆ ಪ್ರಯೋಗಾತ್ಮಕವಾಗಿ ಕಾರ್ಯಾಚರಣೆಗೆ ತರಲ್ಪಟ್ಟಾಗ ಸಮಾಜ ಅವುಗಳಿಗೆ ಹೊಂದಿಕೊಳ್ಳ ಇರಬಹುದು ಅಥವಾ ಆಧುನೀಕರಣದ ದೆಸೆಯಿಂದ ಹೆಚ್ಚು ಸಬಲೀಕರಣಗೊಳ್ಳುವಂತಹ ಅಂಶಗಳು ಆಯಾಯ ಸಮಾಜಗಳಲ್ಲಿ ಕಂಡು ಬರಬಹುದು. ಭಾರತದ ಅನೇಕ ಸಂಸ್ಥೆಗಳ ರಚನೆ ಮತ್ತು ಕಾರ್ಯಗಳಲ್ಲಿ ಕಂಡು ಬರುವ ಬದಲಾವಣೆಗಳನ್ನು ನಾವು ಅವಲೋಕಿಸಿದರೆ ಮೇಲಿನವುವಾದ ಸರಿಎನಿಸದಿರದು.

ಆಧುನೀಕರಣದ ರಾಜಕೀಯ ಅಂಶಗಳು ಆಧುನೀಕರಣದ ಪ್ರಕ್ರಿಯೆಗೆ ಒಳಪಡುವ ಸಮಾಜಗಳ ರಾಜಕೀಯ ವ್ಯವಸ್ಥೆಗಳ ಸಂರಚನೀಯ ಮತ್ತು ಸಾಂಸ್ಕೃತಿಕ ಅಂಶಗಳಲ್ಲಿ ಉಂಟಾಗುವ ಬದಲಾವಣೆಗೆ ಅನ್ವಯವಾಗುತ್ತವೆ. ವಿಶ್ಲೇಷಣಾತ್ಮಕವಾಗಿ ಹೇಳಬೇಕೆಂದರೆ ರಾಜಕೀಯ ವ್ಯವಸ್ಥೆಯು ಒಟ್ಟು ಸಾಮಾಜಿಕ ಸಮಸ್ಯೆಗಳ ಒಂದು ಉಪವ್ಯವಸ್ಥೆಯಾಗಿದೆ. ಇದು ಪರಸ್ಪರ ಒಡನಾಟ ಮಾಡುವ ಬಹು ವ್ಯಕ್ತಿಗಳಿಂದ ಕೂಡಿದ್ದು ಇವರ ವರ್ತನೆಗಳು ಮತ್ತು ಸಂಸ್ಥೆಗಳು ರಾಜಕೀಯ ಅಧಿಕಾರ ಮತ್ತು ಸಾಮರ್ಥ್ಯಗಳಿಗೆ ಸಂಬಂಧಿಸಿರುತ್ತದೆ. ಹೀಗಾಗಿ ಇವು ಸಾಮಾಜಿಕ ವ್ಯವಸ್ಥೆಯ ಪ್ರಭಾವಕ್ಕೆ ವಾಸ್ತವವಾಗಿಯೇ ಒಳಗಾಗಿರುತ್ತವೆ.

## 27.5 ಪ್ರಮುಖ ಪದಗಳು

1. ರಾಜಕೀಯ ಸಂಸ್ಕೃತಿ : ರಾಜಕೀಯ ವ್ಯವಸ್ಥೆಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ, ಮನೋಧರ್ಮ, ನಂಬಿಕೆಗಳು ಮತ್ತು ಮೌಲ್ಯಗಳ ಸಂಕೀರ್ಣ ವ್ಯವಸ್ಥೆಯಾಗಿದೆ.

2. ರಾಜಕೀಯ ಆಧುನೀಕರಣ: ರಾಜಕೀಯ ಆಧುನೀಕರಣವು ತನ್ನ ಸುತ್ತಮುತ್ತಲಿನ ಪರಿಸರವನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದಂತೆ ವಿಸ್ತೃತಗೊಳ್ಳುತ್ತಿರುವ ಜ್ಞಾನದ ದೆಸೆಯಿಂದ ಸಮಾಜದಲ್ಲಿನ ಎಲ್ಲಾ ಸಂಸ್ಥೆಗಳಲ್ಲಿ ಉಂಟಾಗುವ ಪರಿವರ್ತನೆಗಳಿಗೆ ಅನ್ವಯವಾಗುತ್ತದೆ.

## 27.6 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

1) 27.2 2) 27.3 3) 27.3.1 4) 27.3.2 5) 27.3.3

## 27.7 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1. ಸಾಮಾಜಿಕ ಆಧುನೀರಕಣದ ಸಮಸ್ಯೆಗಳನ್ನು ಗುರುತಿಸಿ.

2. ರಾಜಕೀಯ ಆಧುನೀಕರಣದ ಸಮಸ್ಯೆಗಳನ್ನು ವಿಶ್ಲೇಷಿಸಿ

3. ರಾಜಕೀಯ ಆಧುನೀಕರಣದ ಅಧ್ಯಯನದ ದೃಷ್ಟಿಕೋನಗಳನ್ನು ತಿಳಿಸಿ.

4. ರಾಜಕೀಯ ಆಧುನೀಕರಣದ ಪ್ರಕ್ರಿಯೆಯಲ್ಲಿರುವ ಸಮಸ್ಯೆಗಳನ್ನು ಪರಿಶೀಲಿಸಿ

5. ರಾಜಕೀಯ ಆಧುನೀಕರಣದ ಮತ್ತು ವೃತ್ತಿ ಧರ್ಮದ ಬೆಳವಣಿಗೆಯ ಹರಿಕಾರನಾಗಿ ಗಾಂಧೀಜಿಯವರನ್ನು ಸಮರ್ಥಿಸಿ

## 27.8 ಸಲಹಾ ಗ್ರಂಥಗಳು


- Learner D. The passing of Traditional socity, Glencoefree, 1958
- Rudolph and Rudolph, Modernity and Tradition, Chicago University press, chicago, 1958
- Yogendra singh, Modernisation of Indian Tradition, Delhi, Thamoson Press, 1973.
- Desai A.R. (ed), Modernisation in Under developed Socities, Bombay, Thacker, 1971
- Singh milton, When a Greater Tradition modernires, Delhi, Vikas, 1972
- Srinivas M.N., Social change in Modern India, Bombay, Allied Publishers, 1968.



• ಡಾ. ಬಿ.ಎಸ್. ಪರೇಶ್‌ಕುಮಾರ್, ಸಮಾಜಶಾಸ್ತ್ರ ಪ್ರವಾಚಕರು (ನಿವೃತ್ತ) ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - 570 006.

## ಘಟಕ 28 : ಆಧುನೀಕರಣದ ಅಡಚಣೆಗಳು

ರಚನೆ


28.0 ಉದ್ದೇಶಗಳು

28.1 ಪರಿಚಯ

28.2 ಆಧುನೀಕರಣ ಅಡಚಣೆಗಳು

28.3 ಪರಿವರ್ತನೆಯ ಮಾದರಿ

28.4 ಆಧುನೀಕರಣದಲ್ಲಿ ಗಣ್ಯರ ಪಾತ್ರ

28.5 ಸಾರಾಂಶ

28.6 ಪ್ರಮುಖ ಪದಗಳು

28.7 ನಿಮ್ಮ ಪ್ರಗತಿ ಪರೀಕ್ಷಿಸಿ ಉತ್ತರಗಳು

[illegible] ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

[illegible] [illegible] ಗ್ರಂಥಗಳು

## 28.0 ಉದ್ದೇಶಗಳು

ಈ ಘಟಕಗಳನ್ನು ಅಧ್ಯಯನ ಮಾಡುವುದರಿಂದ ನಿಮಗೆ ಕೆಳಕಂಡ ವಿಷಯಗಳು ಅರ್ಥವಾಗುತ್ತವೆ.

- ಆಧುನೀಕರಣದ ಅರ್ಥ
- ಆಧುನೀಕರಣದ ಅಡಚಣೆಗಳ ಅರ್ಥ
- ಪರಿವರ್ತನೆಯ ಮಾದರಿ ಎಂದರೇನು

ಆಧುನೀಕರಣದಲ್ಲಿ ಗಣ್ಯರ ಪಾತ್ರವನ್ನು ತಿಳಿದುಕೊಳ್ಳಬಹುದು.

## 28.1 ಪರಿಚಯ

ಹಿಂದಿನ ಘಟಕದಲ್ಲಿ ನೀವು ಆಧುನೀಕರಣದ ಸಾಮಾಜಿಕ ಸಮಸ್ಯೆಗಳು ಮತ್ತು ರಾಜಕೀಯ ಸಾಮಾಜೀಕರಣದ ಸಮಸ್ಯೆಗಳನ್ನು ಅಧ್ಯಯನ ಮಾಡಿದ ನಂತರ ಈ ಘಟಕದಲ್ಲಿ ಆಧುನೀಕರಣದ ಅಡಚಣೆಗಳು, ಪರಿವರ್ತನೆಯ ಮಾದರಿ ಮತ್ತು ಆಧುನೀಕರಣದಲ್ಲಿ ಗಣ್ಯರ ಪಾತ್ರವನ್ನು ಅಧ್ಯಯನ ಮಾಡಬಹುದು.

## 28.2 ಆಧುನೀಕರಣ ಅಡಚಣೆಗಳು

ಆಧುನೀಕರಣದ ಅಡಚಣೆಗಳು ಅಥವಾ ಆಧುನೀಕರಣಕ್ಕೆ ಅಡ್ಡಿಯುಂಟು ಮಾಡುವ ಅಂಶಗಳು ಮತ್ತು ಸಾಂಪ್ರದಾಯಿಕತೆ ಮತ್ತು 'ಆಧುನಿಕತೆಗಳು ಸಮಾನವೆಂಬಂತೆ ಕಂಡು ಬರುತ್ತದೆ. ಸಾಮಾಜಿಕ ಪರಿವರ್ತನೆಯನ್ನು ತಿಳಿಸುವ, ವಿವರಿಸುವ, ಡೇನಿಯಲ್ ಲರ್ನರನು, ಅನುಭೂತಿ, ನಗರೀಕರಣ, ಅಕ್ಷರತೆ, ಕೈಗಾರಿಕೀರಣ ಮತ್ತು ಮಾಧ್ಯಮಗಳಲ್ಲಿ ಪಾಲ್ಗೊಳ್ಳುವಿಕೆ (ಪ್ರಜಾಸಕ್ತೆ)ಈ ಅಂಶಗಳನ್ನು ಸಾಹಿತ್ಯದಲ್ಲಿ ಅಗಾಧವಾಗಿ ಬೆಳೆದು ಬಂದಿದೆ.

ಆಧುನೀಕರಣದ ಅಡಚಣೆಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಆಧುನೀಕತೆಯ ಹಾದಿಯಲ್ಲಿ ಕಂಡು ಬರುತ್ತವೆ. ಇಲ್ಲಿ ಅಭಿವೃದ್ಧಿ ಮುಖ್ಯಾಂಶವಾಗಿದೆ. ಇಲ್ಲಿ ಬಂದ ಸಮಸ್ಯೆ ಎಂದರೆ. "ಪಾಶ್ಚಾತ್ಯ ಸಮಾಜ ಮೂರು

ಶತಮಾನಗಳ ಕಾಲ ಏನೆಲ್ಲವನ್ನು ಸಾಧಿಸಿತೋ ಅದನ್ನು ಸಾಧಿಸುವುದು ಪೌರಾತ್ಯ ಸಮಾಜಗಳಿಗೆ ಸುಲಭ ಸಾಧ್ಯವಲ್ಲ"ಎಂಬುದು. ನಗರೀಕರಣವು, ಆಧುನೀಕರಣಕ್ಕೆ ಬಂದು ಪೂರ್ವವಶ್ಯಕತೆ ಎಂಬಂತೆ ಭಾವಿಸಲಾಯಿತು. ಏಕೆಂದರೆ ಅದು ಸಮಾಜದ ಹಿಂದಿನ ರಚನೆಯನ್ನು ಬದಲಾಯಿಸ ಬಲ್ಲದು ಮತ್ತು ಇದಕ್ಕೆ 'ಕೈಗಾರಿಕೀರಣ'ಪೂರಕ ಬೆಂಬಲ ನೀಡುತ್ತದೆ. ಮನುಷ್ಯ-ಭೂಮಿ ಪ್ರಮಾಣವು (ಮ/ಭೂ) (M/L)ಮುಖ್ಯ ಪಾತ್ರ ವಹಿಸುತ್ತದೆ. ಉದಾ:ಪಶ್ಚಿಮದ ದೇಶಗಳಲ್ಲಿ ಭೌತಿಕ ಅಥವಾ ಭೌಗೋಳಿಕ ಚಲನೆಯು ಆರಂಭವಾದಾಗ ಮನುಷ್ಯ-ಭೂಮಿ ಪ್ರಮಾಣದಂತೆ ಭೂಮಿ 'ವಿರಳ-ಜನಸಂಖ್ಯೆ' ( under-populated)ಯಿಂದ ಕೂಡಿದ್ದಿತು. ಅಂದಿನಿಂದ ಭೂಮಿಯ ಜನಸಂಖ್ಯೆ ದ್ವಿಗುಣಗೊಂಡಿದೆ. ಆದರೆ ಮನುಷ್ಯ ಮತ್ತು ಭೂಮಿಯ ನಡುವಿನ ಪ್ರಮಾಣ ಬದಲಾವಣೆ ಹಾಗೇ ಉಳಿದಿದೆ.

ಭೌಗೋಳಿಕ ಚಲನೆ(ವಲಸೆ) ಇನ್ನು ನಗರೀಕರಣದ ರೂಪದಲ್ಲೇ ಆಗುತ್ತಿದೆ. ಆದರೆ ಎಲ್ಲಾ ಸಮಸ್ಯೆಗಳಿಗೂ ನಗರೀಕರಣವೇ ಸುಲಭ ಸಂಜೀವಿನಿಯಲ್ಲಿ ಅದರ ಐತಿಹಾಸಿಕ ಕಾರ್ಯವು ಆರಂಭಿಸುವುದನ್ನು ಉತ್ತೇಜಿಸುವುದು (Take off) ಆನಂತರ ಅದು ಇತರ ಅಂಶಗಳಿಗೆ ಪ್ರಮುಖ್ಯತೆಯನ್ನು ಬಿಟ್ಟು ಕೊಡುತ್ತದೆ. ಅಂದರೆ ಸ್ವಯಂ ಪರಿಪೂರ್ಣತೆಯನ್ನು ಅಥವಾ ಸ್ವಾವಲಂಬನೆಗೆ ದಾರಿ ಮಾಡಿಕೊಡಬಲ್ಲಿ ಅಂಶಗಳಿಗೆ ಆದ್ಯತೆ ನೀಡುತ್ತದೆ. ಆದರೆ ಮನುಷ್ಯ -ಭೂಮಿ ಪ್ರಮಾಣ ಹಾಗೇ ಸ್ಥಿರವಾಗಿ ಉಳಿದಿದೆ. ಇಂತಹ ಸನ್ನಿವೇಶಗಳಲ್ಲಿ ಜನಸಂಖ್ಯೆ ಸಂಪನ್ಮೂಲಗಳನ್ನು ಮೀರಿ ಬೆಳೆಯುತ್ತದೆ. ಮತ್ತು ಅನೇಕ ಸಮಸ್ಯೆಗಳಿಗೆ ಎಡೆ ಮಾಡಿಕೊಡುತ್ತದೆ. ಬರ್ಟ್ ಎಫ್.ಹಾಸಿಲಿಟ್ಜ್‌ರವರು ಈ ಸನ್ನಿವೇಶವನ್ನು ಪರಿಗಣನೆಗೆ ತೆಗೆದುಕೊಂಡಿದ್ದಾರೆ.

ಲರ್ನರನು ನಗರೀಕರಣ, ಅಕ್ಷರತೆ, ಕೈಗಾರಿಕೀಕರಣ ಮತ್ತು ಮಾಧ್ಯಮ ಪಾಲುಗೊಳ್ಳುವಿಕೆಗಳ ನಡುವೆ ಪರಸ್ಪರ ಸಂಬಂಧ ಕಲ್ಪಿಸುತ್ತಾನೆ. ಪ್ರಗತಿ ಸಾಧಿಸಿದ ದೇಶಗಳಲ್ಲಿ ಇವುಗಳ ನಡುವೆ ಹೆಚ್ಚಿನ ಸಂಬಂಧ ಇರುವುದು ಕಂಡು ಬಂದರೆ, ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಇವುಗಳ ನಡುವೆ ನೇತ್ಯಾತ್ಮಕ ಸಂಬಂಧವಿರುವುದು ಕಂಡುಬಂದಿದೆ.

ಲರ್ನರನು 'ನಗರೀಕರಣ' ಮತ್ತು 'ಮಾಧ್ಯಮ ಪಾಲ್ಗೊಳ್ಳುವಿಕೆ'ಗಳ ನಡುವೆ ಸಂಬಂಧವನ್ನು ಕಲ್ಪಿಸುತ್ತಾನೆ, ಇತ್ಯಾತ್ಮಕ ಅಥವಾ ಘನಾತ್ಮಕ ಗುಣಾಂಶ (co-efficient)ವು +59.ಸುಮಾರು 54 ದೇಶಗಳಲ್ಲಿದ್ದರೆ. ಕಡಿಮೆ ಅಭಿವೃದ್ಧಿ ಸಾಧಿಸಿದ ರಾಷ್ಟ್ರಗಳನ್ನು ಸೇರಿಸಿದಾಗ, ಒಟ್ಟು 73 ದೇಶಗಳಾದಾಗ. ಈ ಗುಣಾಂಕ ಇಳಿಮುಖವಾಗಿ + 47 ಆಗುತ್ತದೆ. ಅಭಿವೃದ್ಧಿ ಸಾಧಿಸಿದ ರಾಷ್ಟ್ರಗಳಲ್ಲಿ ಈ ಪ್ರಭಾವಶಾಲಿ (aviables) ಅಂಶಗಳ ನಡುವೆ ಹೆಚ್ಚಿನ ಬಾಂದವ್ಯ ಇದ್ದರೆ, ಅಭಿವೃದ್ಧಿಶೀನ (ಸಾಧಿಸುತ್ತಿರುವ)ರಾಷ್ಟ್ರಗಳಲ್ಲಿ ಇವುಗಳ ನಡುವಿನ ಸಂಬಂಗ ವಿಮುಖವಾಗಿರುವುದು ಕಂಡು ಬರುತ್ತದೆ. ಇವುಗಳಲ್ಲಿ ಕೆಲವು ಅಕ್ಷರಸ್ಥವಾಗಿರುವುದಕ್ಕಿಂತ ಮಿಗಿಲಾಗಿ ನಗರೀಕೃತವಾಗಿದ್ದರೆ. ಇನ್ನೂ ಕೆಲವು ಅಕ್ಷರಸ್ಥವಾಗಿರುವುದಕ್ಕಿಂದ ಮಿಗಿಲಾಗಿ ನಗರೀಕೃತವಾಗಿದ್ದರೆ. ಇನ್ನೂ ಕೆಲವು ಹೆಚ್ಚು ಸಮೂಹ ಮಾಧ್ಯಮಗಳ ಪಾಲ್ಗೊಳುವಿಕೆಯನ್ನು ನಗರೀಕೃತವಾಗುವುದಕ್ಕಿಂತ ಹೆಚ್ಚಾಗಿ ತೋರ್ಪಡಿಸುತ್ತವೆ. ಲರ್ನರನೂ ಕೂಡ. ನಗರೀಕರಣ. ಕೈಗಾರಿಕೀರಣ ಮತ್ತು ಇತರ ಪ್ರಭಾವ ಶಾಲೀ ಅಂಶಗಳ ನಡುವೆ ಅಸಂಬದ್ಧ ಸಂಬಂಧಗಳಿರುವುದನ್ನು ಗಮನಿಸಿದ್ದಾನೆ. 'ಪೌರಾತ್ಯ ಸಮಾಜಗಳಲ್ಲಿನ ಹೊಸದಾಗಿ ಪುನಶ್ಚೇತನ ಪಡೆಯುತ್ತಿರುವ ನಾಗರೀಕತೆಗಳು. ತಮ್ಮ ರಾಜಧಾನಿ ಅಥವಾ ಪ್ರಮುಖ ನಗರಗಳಲ್ಲಿ ಫಲದಾಯಕವಾಗಿ ಬಳಸಿಕೊಳ್ಳಬಹುದಾದ ಸಂಖ್ಯೆಗಿಂತ ಅಧಿಕ ಜನಸಂಖ್ಯೆಯಿಂದ ಕೂಡಿರುತ್ತವೆ. ಹೀಗಾಗಿ ಇವುಗಳಲ್ಲಿ ಭಿಕ್ಷಾಟನೆಯಂತಹ ಸಂಸ್ಥೆ ಬೆಳೆದು ಬಂದಿದೆ. ಇದನ್ನು ಪವಿತ್ರ ಗ್ರಂಥಗಳು ಪಾವನಗೊಳಿಸುತ್ತವೆ. ಪೌರತ್ಯ ಜಗತ್ತು ಈ ಭಯ ಭಕ್ತಿ ಪೂರಿತ ಸಂಸ್ಥೆಯ ಬೆಳವಣಿಗೆಯಿಂದ ನಾಚಿಗೇಡಿಗೀಡಾಗಿದೆ. ಮತ್ತು ಇದನ್ನು ನಿರ್ಮೂಲಗೊಳಿಸಲು ಪ್ರಯತ್ನಿಸುತ್ತಿವೆ. ಆದರೆ ಇದಕ್ಕೆ ಅಗತ್ಯವಾದ ಇತರೆ ಪರಿಣಾಮಕಾರಿಯಾದ ಪರ್ಯಾಯ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸುತ್ತಿಲ್ಲ.

ಮತ್ತೊಂದು ಪ್ರಭಾವಶಾಲೀ ಅಂಶವು ಪ್ರಜಾಸಕ್ತೆಯಾಗಿದೆ. ಇದು ಆಧುನೀಕರಣದ ಪೂರ್ವವಶಕತೆಯಾಗಿದೆ. ಆದರೆ ಇದು ಜಗತ್ತಿನಾದ್ಯಂತ ಒಂದು ಖಿಯಾಲಿ ಅಥವಾ ಗೀಳಾಗಿದೆ. ಸಾಂಕೇತಿಕವಾಗಿ ದೇಶಗಳಲ್ಲಿ ಹರಡುತ್ತಿತೆಯೋ ಹೊರತು ಒಂದು ಸಾದನವಾಗಿ ಅಲ್ಲ. ಹೆಚ್ಚು ಪಾಲ್ಗೊಳ್ಳುವಿಕೆಯ ಸಮಾಜಕ್ಕೆ ಆಂತರಿಕ ಅಗತ್ಯವಾಗಿದ್ದು ಒಂದು ಸಾಂಸ್ಥಿಕ ಮತ್ತು ವ್ಯವಸ್ಥಿತ ರೀತಿಯಲ್ಲಿ ರೂಪುಗೊಳ್ಳುತ್ತಿಲ್ಲ ಹೀಗೆ 1956ರಲ್ಲಿ ಈಜಿಪ್ಟಿನ ಗ್ರಾಮೀಣ ಜನತೆ, ಆಗಿನ ಈಜಿಪ್ಟಿನ ಅಧ್ಯಕ್ಷರಾಗಿದ್ದ ಅಬ್ದುಲ್ ನಾಸೆರ್‌ರವರಿಗೆ ಶೇಕಡ 9/ರಷ್ಟು ಜನಾಭಿಪ್ರಾಯದಲ್ಲಿ ಸಹಮತ ನೀಡಿದಾಗ - ಇಂತಹುಗಳಲ್ಲಿ ಇದು ಸರ್ವೇಸಾಮಾನ್ಯ- ಅದು ಸಂಪೂರ್ಣವಾಗಿ ಆಧುನೀಕರಣಕ್ಕೆ ವಿಮುಖವಾಗಿದೆ ಎಂದು ಪರಿಗಣಿಸಲ್ಪಟ್ಟಿತು. ಏಕೆಂದರೆ ಗ್ರಾಮೀಣ ಪರಮಾಧಿಕ್ಯತೆ ಆಧುನೀಕರಣ ವಿಶಿಷ್ಟಗುಣ ಎಂದು ಪರಿಗಣಿತವಾಗಿರಲಿಲ್ಲ.

ಮಾಧ್ಯಮಗಳಲ್ಲಿ ಪಾಲ್ಗೊಳುವಿಕೆಯ (media patricipation) ಬಗೆಗೆ ಲರ್ನರ್‌ವರು ಪೌರಾತ್ಯದೇಶಗಳಲ್ಲಿ ಒಂದು ಬಗೆಯ ವಿಮುಖತೆ (deviance) ಕಂಡು ಬರುತ್ತದೆ ಎಂದು ತಿಳಿಸುತ್ತಾರೆ. ಎರಡನೇ ಜಾಗತಿಕ ಮಹಾಯುದ್ಧದ ನಂತರ ರೇಡಿಯೋಗಳನ್ನು ಅರಬ್ ರಾಷ್ಟ್ರಗಳಲ್ಲಿ ಉಚಿತವಾಗಿ ಅಥವಾ ಕಡಿಮೆ ಬೆಲೆಗೆ ನೀಡಲಾಯಿತು. ಪಾಶ್ಚಾತ್ಯ ದೇಶಗಳಲ್ಲಿ ಔದ್ಯಮಿಕರಣ ಮತ್ತು ನಗರೀಕರಣ ಸೃಷ್ಟಿಸಿದ ಸಾಂಸ್ಥಿಕ ಅಗತ್ಯದ ಫಲವಾದ ಬೆಳೆದುಬಂದಿತು. ಇದು ಅನುಭೂತಿ (empathy)ಯ ಮೇಲೆ ಪ್ರಭಾವ ಬೀರಿತು. ಆದರೆ ಅರಬ್ ರಾಷ್ಟ್ರಗಳಲ್ಲಿ ಇದರ ವಿರುದ್ಧದ ಪರಿಣಾಮ ಉಂಟಾಯಿತು. ರೇಡಿಯೋಗಳನ್ನು ಪಾಲ್ಗೊಳ್ಳುವಿಕೆ ಉಪಯೋಗಿಸುವ ಬದಲು, ಸಾಮಾಜಿಕ ನಿಯಂತ್ರಣವನ್ನು ಸುಲಭಗೊಳಿಸಲು ಬಳಸಲಾಯಿತು. ಇಲ್ಲಿ ರೇಡಿಯೋ ಆಲಿಸುವವರು ಬಹುತೇಕ ನಗರವಾಸಿಗಳಾಗಿರಲಿಲ್ಲ ಬದಲಾಗಿ ಗ್ರಾಮೀಣ ನಿವಾಸಿಗಳಾಗಿದ್ದರೂ .

ಎಸ್.ಸಿ.ದುಬೆ ಮತ್ತು ಲೀಲಾ ದುಬೆಯವರು ಆಧುನೀಕರಣದ ಈ ಕೆಳಗಿನ ಅಡಚಣೆಗಳ ಪಟ್ಟಿಮಾಡಿದ್ದಾರೆ.

- ಸೈದ್ಧಾಂತಿಕ ಅಡಚಣೆಗಳು (Ideolgical) (ಹಳೆಯ ಮತ್ತು ಹೊಸ ಭಾವನೆಗಳು, ತತ್ವಗಳ ನಡುವೆ ಹೊಂದಾಣಿಕೆಯಾಗದಿರುವಿಕೆ)

- ಪ್ರೇರಣೆ ಅಥವಾ ಪ್ರಚೋದನೆಯಸ (motivational) ಅಡಚಣೆಯಗಳು. (ಅಲ್ಪ(low)ಕಲ್ಪನಾಶಕ್ತಿ, ಸಂಪ್ರದಾಯ ವ್ಯವಸ್ಥೆಯ ಪ್ರಭಾವದಿಂದಾದ ಆಶೋತ್ತರಗಳು)
- ಸಾಂಸ್ಥಿಕ ಅಡಚಣೆಗಳು (institutional)(ರಾಷ್ಟ್ರೀಯ ಧ್ಯೇಯೋದ್ದೇಶಗಳು ಮತ್ತು ಅಸ್ಥಿತ್ವದಲ್ಲಿದ್ದ ಸಂಸ್ಥೆಗಳ ಗುರಿಗಳ ನಡುವಿನ ಭಿನ್ನತೆ)
- ಸಂಘಟನ್ಮಾತಕ ಅಡಚಣೆಗಳು (organizational) (ವ್ಯಷ್ಟಿ(micro) ಮತ್ತು ಸಮಷ್ಠಿ(macro)ರಾಜಕೀಯ ಮತ್ತು ಆಸಂಘಟನೆಗಳ ನಡುವೆ ಹೊಂದಾಣಿಕೆ ಇಲ್ಲತಿರುವಿಕೆ)
- ಸಂಘಟನಾತ್ಮಕ ಅಡಚಣೆಗಳು (organizational) [ವ್ಯಷ್ಠಿ(micro) ಮತ್ತು ಸಮಷ್ಠ(macro)ರಾಜಕೀಯ ಮತ್ತು ಆ ಸಂಘಟನೆಗಳ ನಡುವೆ ಹೊಂದಾಣಿಕೆ ಇಲ್ಲದಿರುವಿಕೆ]

ಇವರ ಅಡಚಣೆಗಳ ವರ್ಗೀಕರಣವು ಅರ್ಥಪೂರ್ಣವಾಗಿದೆ. ಅವರು ಆಧುನೀಕರಣ ಮತ್ತು ಪರಂಪರೆಯನ್ನು ವಿಭಜಕ ಅಥವಾ ವಿಂಗಡಣೆಗಳಾಗಿ (dichotomies) ನೋಡುತ್ತಾರೆ. ಅಲ್ಲದೆ ಉನ್ನತ ಮಟ್ಟದಲ್ಲಿ ಅನುಷ್ಠಾರವಾಗಿರುತ್ತದೆ(inmovation)ಹೀಗಾಗಿ ಬದಲಾವಣೆಯ ಪರಿ(course) ಪಾಶ್ಚಿಮಾತ್ಯ ಸಮಾಜಗಳು ಉಂಟಾದ ರೀತಿಯಲ್ಲೇ ಇರಬೇಕಂದು ಹೇಳಲಾಗದು.

ಆಧುನೀಕರಣವು ತನ್ನ ಉಗಮವನ್ನು ಆರ್ಥಿಕ ಅಂಶಗಳಲ್ಲಿಷ್ಟೇ ಅಲ್ಲದೆ ಅರ್ಥಿಕೇತರ ಅಂಶಗಳಲ್ಲೂ ಕಂಡುಕೊಂಡಿತು. ಒಂದು ಸಮಾಜದ ಸಂಸ್ಕೃತಿಯ, ಜನರು ಹೇಗೆ ನೈತಿಕ (ನಿಯಾಮಾತ್ಮಕNormative),ಸಾಮಾಜಿಕ (ಸಂರಚನೆ:structural)ಮತ್ತು ವೈಯಕ್ತಿಕ (ವರ್ತನಾತ್ಮಕ : benavious) ಅಂಶಗಳಿಗೆ ಸಂಬಂಧಿಸಿದಂತೆ ಹೇಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ಎಂಬ ಬಗ್ಗೆ ವಿಚಾರಣೆ ನಡೆಸುವ ಮತ್ತು ಪ್ರಶ್ನೆ ಮಾಡುವ ಮನೋವೃತ್ತಿಯನ್ನು ರೂಢಿಸಿಕೊಂಡಾಗ ಆಧುನೀಕರಣದ ಉಗಮವಾಗುತ್ತದೆ ಎಂದು ಹೇಳಬಹುದು. ರಾಷ್ಟ್ರೀಯ ಕ್ರಿಯಾಚಟುವಟಿಕೆಗಳಿಗೆ ಸಂಬಂಧಿಸಿದ ಮುಖ್ಯಾಂಶ ಆಯಾ / ಅಥವಾ ಪರ್ಯಾಯಗಳಿಗೆ ಅನ್ವಯವಾಗುತ್ತದೆ . ಆಧುನಿಕ ಎಂದರೆ, ಸ್ವಲ್ಪಮಟ್ಟಿಗೆ, ಇರುವ ಅಥವಾ ಸ್ಥಾಪಿತ ಅಂಶಗಳಿಗೆ ವಿರುದ್ಧವಾದ ಹೊಸ ಪರ್ಯಾಯಗಳು ಎಂದರ್ಥ 'ಸ್ವಯಂ ಪ್ರಜ್ಞಾಪೂರ್ವಕ ಆಯ್ಕೆ ವೈಚಾರಿಕತೆಯನ್ನು ಒಳಗೊಳ್ಳುತ್ತದೆ. 'ಹೊಸ ಜನರು ಒಂದಕ್ಕಿಂತ ಹೆಚ್ಚಿನ ಪರ್ಯಾಯಗಳು ಸಾಧ್ಯ ಎಂಬುದನ್ನು ಅರಿತುಕೊಳ್ಳುತ್ತಾರೆ. ಈ 'ಪರ್ಯಾಯವನ್ನೇ ಮುಂಚೂಣಿ ಅಥವಾ ಅಗ್ರಸ್ಥಾನಕ್ಕೇರಿಸಿದ್ದು ವಿಜ್ಞಾನ ಮತ್ತು ತಂತ್ರಜ್ಞಾನಗಳಾಗಿವೆ. ಇದು, ಅಸ್ತಿತ್ವದಲ್ಲಿರುವ ಮಾನವನ ಪರಿಸರವನ್ನು ಮಾನವನ ವೈಚಾರಿಕ ಆಲೋಚನೆಗಳಿಂದ ವಿವರಿಸಲು ಮತ್ತು ಸ್ವ ಅನುಕೂಲಕ್ಕೆ ಬಳಕೆಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಎಂಬ ನಂಬಿಕೆ ಮತ್ತು ರಾಷ್ಟ್ರೀಯತೆಗಳು ಪ್ರೇರಣೆಯಿಂದ ಸಾಧ್ಯವಾಯಿತು.

ವಿಜ್ಞಾನ, ತಂತ್ರಜ್ಞಾನ ಮತ್ತು ಅವುಗಳ ದೃಷ್ಟಿಕೋನದಿಂದ ರೂಪಿಸಲ್ಪಟ್ಟ ಪರ್ಯಾಯಗಳ ಬಗೆಗಿನ ಪ್ರಜ್ಞೆಯನ್ನು ಆಯ್ಕೆಯಾವಾಗಲೂ ಉತ್ತೇಜಿಸುತ್ತದೆ.

ಸಂಪ್ರದಾಯ ಬದ್ಧ ಸಮಾಜಗಳ ಆಧುನೀಕರಣದಲ್ಲಿ ಗಣ್ಯ ಅಥವಾ ವರಿಷ್ಠ ವರ್ಗದವರ ಪಾತ್ರವನ್ನು ಈ ಅಂಶಕ್ಕೆ ಸಂಬಂಧಿಸಿದಂತೆ ಅರ್ಥಮಾಡಿಕೊಳ್ಳಬಹುದು.

ಗಣ್ಯ ಅಥವಾ ವರಿಷ್ಠ ವರ್ಗದವರು ಹೇಗೆ ಆಧುನೀಕರಣವನ್ನು ಉಂಟುಮಾಡುತ್ತಾರೆ?How Elite Bring Moderhization

ವಿವಿಧ ಸಮಾಜಶಾಸ್ತ್ರಜ್ಞರು "ಗಣ್ಯವರ್ಗ" (Elite) ಎಂಬ ಪದವನ್ನು ವಿವಿಧರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ವಿಲ್‌ಫ್ರೆಡ್ ಪಾರೆಟೋರವರು ಇದನ್ನೂ ಶ್ರೇಷ್ಠತೆ (supericity) ಎಂಬ ಅರ್ಥದಲ್ಲಿ ಬಳಸಿದ್ದಾರೆ. 'ಪಾರೆಟೊ' ಮತ್ತು 'ಗೀಟೋ ಮೋಸಿಯಾ'ಇಬ್ಬರೂ ಗಣ್ಯರು ಎಂಬುದನ್ನು ಒಂದು ಸಾಮಾಜಿಕ ವರ್ಗದ ಲಕ್ಷಣವನ್ನು ಹೊಂದಿರುವ ಸಮೂಹವಾಗಿದೆ ಎಂದು ಪರಿಕಲ್ಪನೆ ಮಾಡಿದ್ದಾರೆ. ಕಾರ್ಲ್‌ಮ್ಯಾನ್‌ಹೀಮ್ (ಜರ್ಮನ್ ಸಮಾಜಶಾಸ್ತ್ರಜ್ಞ) 'ಗಣ್ಯರು' ಅಂದರೆ 'ಇಲೈಟ್' (Elite)ಪರಿಕಲ್ಪನೆಯನ್ನು ಅದು ಸಿದ್ಧಾಂತ,

ಯೋಜನೆ ಮತ್ತು ಸಾಮಾಜಿಕ ವ್ಯವಸ್ಥೆಗಳೊಡನೆ ಹೊಂದಿರುವ ಸಂಬಂಧವನ್ನು ಆಧಾರವಾಗಿಟ್ಟುಕೊಂಡು ಅರ್ಥೈಸಿದ್ದಾರೆ. ಈತನು (ಇಲೈಟ್) ಗಣ್ಯವರ್ಗವನ್ನು ಸಂಘಟನಾತ್ಮಕ, ರಾಜಕೀಯ ಮತ್ತು ಬುದ್ಧಿಶೀಲ (intelletweal) ಎಂಬುದಾಗಿ ವರ್ಗೀಕರಿಸಿದ್ದಾನೆ. ಎಸ್.ಎಫ್.ನಾಡೆಲ್ ಎಂಬ ಮಾನವಶಾಸ್ತ್ರಜ್ಞ ಆಫ್ರಿಕಾದ ಅಭಿವೃದ್ಧಿಶೀಲ ಪ್ರದೇಶಗಳಲ್ಲಿನ 'ಸಾಮಾಜಿಕ ಗಣ್ಯರು'ಪರಿಕಲ್ಪನೆಯ ಬಗ್ಗೆ ಚರ್ಚಿಸುವಾಗ ನೀಡಿದ ವ್ಯಾಖ್ಯೆ ಹೀಗಿದೆ. "ಒಂದು ಗಣ್ಯವರ್ಗವು ಯಾವುದೇ ಕಾರಣಕ್ಕೆ ಶ್ರೇಷ್ಠತೆಯ ಸ್ಥಾನಮಾನವನ್ನು ಗಳಿಸಿಕೊಂಡಿರುವ ಮತ್ತು ಇದರ ಸಲುವಾಗಿ ಸಮುದಾಯದ (ಹಣೆಯ ಬ ರಹ ಅಥವಾ)ಭವಿಷ್ಯದ ಮೇಲೆ ಸಾಕಷ್ಟು ಪ್ರಭಾವ ಬೀರಬಲ್ಲ, ಸಮಾಜದ ಜನಸಂಖ್ಯೆಯ ಒಂದು ಸ್ತರವಾಗಿದೆ"

ಈ ವ್ಯಾಖ್ಯೆಗೆ ಆಧುನೀಕರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಸಮಾಜದಲ್ಲಿದ್ದಂತೆ ಸ್ತರವಿನ್ಯಾಸ ವ್ಯವಸ್ಥೆಯಲ್ಲಿ ತಮಗಿರುವ ಉನ್ನತ ಸ್ಥಾನದ ದೆಸೆಯಿಂದ ಆಧುನೀಚಕರಣದ ಪ್ರಭಾವಿ ಬೀರುವ ಅಂಶಗಳ ಸಂಪರ್ಕದ ಫಲವಾಗಿ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅದರಲ್ಲೂ ಭಾರತದಲ್ಲಿ ಪರಿವರ್ತನೆಯ ಅನುಭವವನ್ನು ಪಡೆದವರಲ್ಲಿ ಮೊದಗಲಿರಾಗಿದ್ದಾರೆ. ಇಲ್ಲಿ ಮುಖ್ಯ ಪ್ರಶ್ನೆ ಎಂದರೆ ಹೇಗೆ ಈ ಗಣ್ಯರು ಆಧುನೀಕರಣದ ಕೈದೀಪ ಹಿಡಿದು ಮಾರ್ಗದರ್ಶಿಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಎಂಬುದಾಗಿದೆ. ಇಲ್ಲಿ ಗಣ್ಯರು ಇಡೀ ಸಮಾಜ ಅನುಸರಿಸಲ್ಪಡ ಬಹುದಾದ ಪ್ರಮಾಣಕಗಳನ್ನು ರೂಢಿಸುತ್ತಾರೆ. ಅವರ ಅಧಿಕಾರದ ಪ್ರಭಾವದಿಂದ, ಅವರು, ಸಮಾಜ ಸ್ವೀಕರಿಸಲ್ಪಡುವ ಮತ್ತು ಅನುಸರಣ ಯೋಗ್ಯವಾದ ಮಾದರಿಗಳಿಗೆ ಬೆಳೆದು ಬರುತ್ತಾರೆ. ಒಂದು ಸಮಾಜದ 'ಗಣ್ಯವರ್ಗದ ಸಂರಚನೆ' (Elite structure)ಯು ಅದರ ಮೂಲ ಮೌಲ್ಯಗಳನ್ನು ಪ್ರತಿನಿಧಿಸುತ್ತದೆಯಷ್ಟೇ ಅಲ್ಲದೆ, ಸಮಾಜದ ಅಧಿಕಾರ ವ್ಯವಸ್ಥೆಯಲ್ಲಿ ಮತ್ತು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ, ಯಾವ ಮಟ್ಟದಲ್ಲಿ ಈ ಮೂಲ ಮೌಲ್ಯಗಳು ಅಭಿವ್ಯಕ್ತವಾಗುತ್ತವೆ ಎಂಬುದನ್ನು ನಿರ್ಧರಿಸುತ್ತದೆ. ಅವರು ಅನುಕರಣೆಯ ಮಾದರಿ ಅಥವಾ ರೂಪದರ್ಶಿಗಳಾಗಿ ಬೆಳೆದು ಬರುತ್ತಾರೆ ಮತ್ತು ಶ್ರೀ ಸಾಮಾನ್ಯ ವರ್ಗದವರ ಬಗೆಗಿನ ನಿರ್ಣಯ ಕೈಗೊಳ್ಳುವಿಕೆಯಲ್ಲೂ ಪ್ರಭಾವ ಬೀರುತ್ತಾರೆ.

ಈ ಗಣ್ಯರು ತಮ್ಮ ಪಾತ್ರಗಳ ಮೂಲಕ ಜೀವನದ ವಿವಿಧ ಕಾರ್ಯಕ್ಷೇತ್ರಗಳಲ್ಲಿನ ಮೌಲ್ಯ ಶ್ರೇಷ್ಠೆಯ ಪ್ರಮಾಣಗಳನ್ನು ಪ್ರತಿನಿಧಿಸುತ್ತಾರೆ. ಈ ಪಾತ್ರಗಳು ಸಂಪ್ರದಾಯ ಬದ್ಧ ಸಮಾಜಗಳಲ್ಲಿರುವಂತೆ ಅವರಿಗೆ ಆರೋಪಿಸಲ್ಪಟ್ಟಿರಬಹುದು(ascribed)ಅಥವಾ ಸಾಪೇಕ್ಷವಾಗೆ ಆಧುನಿಕವಾಗಿರುವ ಸಮಾಜಗಳಲ್ಲಿರುವಂತೆ. ಈ ಪಾತ್ರಗಳನ್ನು ಅವರು ತಮ್ಮ ಶ್ಲಾಘನೀಯ ಕಾರ್ಯನಿರ್ವಹಣೆ ಮತ್ತು ಅರ್ಹತೆಗಳ ಆಧಾರದ ಮೇಲೆ ಗಳಿಸಿಕೊಂಡಿರಬಹುದು. ಹೆರಾಲ್ಡ್.ಡಿ.ಲಾಸ್‌ವೆಲ್ ರವರು. ಈ ಗಣ್ಯವರ್ಗವನ್ನು ಈ ಮುಂದೆ ತಿಳಿಸುವ ವಿಧಗಳಾಗಿ ವರ್ಗೀಕರಿಸಿ ಹೆಸರಿಸಿದ್ದಾರೆ.

- ಅಧಿಕಾರಸ್ಥ ಗಣ್ಯರು (Power Elite)
- ಸುಜ್ಞಾನಿ ಗಣ್ಯರು (Enlightenment Elites)
- ಸಿರಿವಂತ ಗಣ್ಯರು (Wealth Elite)
- ನಿಪುಣ (Skill)
- ಮಮಕಾರಭರಿತ (Affection)
- ಗೌರವಾನ್ವಿತ (Respect)
- (Rectitute)

ವಾಸ್ತವವಾಗಿ ಗಣ್ಯರ ರಚನೆ (ಗಣ್ಯರ ಪ್ರಭಾವ ಮತ್ತು ಆಧುನೀಕರಣದ ಸಂಬಂಧವಾಗಿ, ಗಣ್ಯರ ರಚನೆಯಲ್ಲಿ ಉಂಟಾದ ಬದಲಾವಣೆಗಳನ್ನು ತಿಳಿಯಲು "ಮಾಡರ್ನೈಸೇಷನ್ ಆಫ್ ಇಂಡಿಯನ್ ಟ್ರೆಡಿಶನ್"-ಎಂಬ ಯೋಗೇಂದ್ರ, ಸಿಂಗ್‌ರವರ ಗ್ರಂಥವನ್ನು

ದಿ)ಯೇ ಸಮಾಜದ ವ್ಯವಸ್ಥೆ ವಿಭಿನ್ನೀಕರಣಕ್ಕೆ ಒಳಗಾದಂತೆ ಆರೋಪಿತ ಅಂಶಗಳನ್ನು ಅನುಸರಿಸುವುದನ್ನು ಬಿಟ್ಟು ಸಾಧಿಕ (achieved viteria)ಅಂಶಗಳನ್ನು ಅನುಸರಿಸ ತೊಡಗುತ್ತದೆ. ಹೊಸ ಪಾತ್ರಗಳು ರೂಪಗೊಳ್ಳುವುದರಿಂದ ಇವನ್ನೂ ಮೊದಲಿಗೆ ಗಳಿಸಿಕೊಳ್ಳುವ ಗಣ್ಯವರ್ಗದವರು. ಹೆಚ್ಚಿನ ಪ್ರಭಾವ ಬೀರತೊಡಗುತ್ತಾರೆ. ಈ ಹೊಸ ಪಾತ್ರಗಳಿಗೆ ಆಧುನೀಕರಣದ ದೆಸೆಯಿಂದ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ. ಇದರ ಪರಿಣಾಮವಾಗಿ ಗಣ್ಯರು ವ್ಯಷ್ಠಿ ಸಾಮಾಜಿಕ ಸಂರಚನೆಯಲ್ಲಿ ಬದಲಾವಣೆಗಳನ್ನು- ವ್ಯಾಪಾರ ವ್ಯವಹಾರ, ಶಿಕ್ಷಣ, ಮತ್ತು ಅಧಿಕಾರ ಶಾಹಿ ಮತ್ತು ರಾಜಕೀಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಉಂಟುಮಾಡಲು ಅನುಕೂಲವಾಗುತ್ತದೆ. ಸಮಾಜವನ್ನು ಬದಲಾಯಿಸುಲು ಇವರು ಸಾಮಾಜಿಕ ಚಳುವಳಿಗಳು / ಸುಧಾರಣೆಗಲ ಮೂಲಕ ಜನಸಮೂಹವನ್ನು ಸನ್ನದ್ಧಗೊಳಿಸುತ್ತಾರೆ.

ಆದ್ದರಿಂದ, ಭಾರತದ ಸಂದರ್ಭದಲ್ಲಿ ಒಂದು ಸುಧಾರಣ ಚಳುವಳಿ ಎಂಬುದಕ್ಕಿಂದ ಮುಖ್ಯವಾಗಿ, ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಗಣ್ಯವರ್ಗದವರ ಪಾತ್ರವನ್ನು ಅರಿತುಕೊಳ್ಳುವ ಅಗತ್ಯವಿದೆ. ಆದ್ದರಿಂಮದ:

- "ರಾಷ್ಟ್ರೀಯ ಚಳುವಳಿಗಳ" ಮೂಲಕ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡುವಲ್ಲಿ. ಗಣ್ಯರ ಪಾತ್ರವೇನು ಎಂಬುದನ್ನೂ ಅರಿತುಕೊಳ್ಳುವುದಕ್ಕೆ ಗಮನ ಹರಿಸಬೇಕು (ಅದರಲ್ಲೂ ಮುಖ್ಯವಾದ ಮೋಹನ್‌ದಾಸ್ ಕರಮಚಂದ್ರ ಗಾಂಧಿ ಮತ್ತು ಅವರ ವರ್ಚಸ್ವೀ ನಾಯಕತ್ವದ ಬಗೆಗೆ)
- ಭಾರತದ ಜನರಲ್ಲಿ ಒಗ್ಗಟ್ಟನ್ನು ಮೂಡಿಸುವ ಅವರ ಪ್ರಯತ್ನದ ಫಲವಾಗಿ ಅವರು ಲಂಬಿತ(vertical) ಮತ್ತು ಸಮಾಂತರ (horizontal)ವೈವಿದ್ಯತೆ ಅಥವಾ ವಿಭಿನ್ನೀಕರಣವನ್ನು ಉಂಡುಮಾಡಿದರು. ಈ ಬಗೆಗೆ.
- ರಾಜಾರಾಮ್ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ್, ದಯಾನಂದ ಸರಸ್ವತಿ....ಇತ್ಯಾದಿಯವರು. ಮಾಡಿದ ಸಾಮಾಜಿಕ ಸುಧಾರಣೆಗಳ ಬಗೆಗೆ;
- ವ್ಯವಹಾರಸ್ಥ ಗಮ್ಯರಿಂದ ಶೀಘ್ರಗತಿಯ ಕೈಗಾರಿಕಾಭಿವೃದ್ಧಿ.
- ಗಣ್ಯರು ರೂಪಿಸಿದ ರಾಷ್ಟ್ರೀಯತೆ ಪರಿಕಲ್ಪನೆಯ ಬಗೆಗೆ, ಅಧ್ಯಯನ ಮಾಡುವ ಅಗತ್ಯವಿದೆ. ಮುಂದೆ, ಪಾಶ್ಚಾತ್ಯ ಸಂಸ್ಕೃತಿಯ ಉದಾರ ನೀತಿ, ಭಾವನೆಗಳೊಡನೆಯ ನಿರಂತರ ಒಡನಾಟದ ಫಲವಾಗಿ , ವೈದಿಕಧರ್ಮವನ್ನು, ಪಾಶ್ಚಾತ್ಯ ಉದಾರ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಪುನಶ್ಚೇತನ ಗೊಳಿಸುವ ಉದ್ದೇಶದಿಂದ, "ಪುನಃ ಶ್ಚೇತನೀಕರಣ" ಚಳವಳಿ ಆರಂಭವಾದವು. ಕೊನೆಯಲ್ಲಿ ಹೀಗೆ ಹೇಳಬಹುದು. ಸಮಾಜ ಬದಲಾದಂತೆ, ಗಣ್ಯ ಸಂರಚನೆಗಳೂ ಬದಲಾಗುತ್ತವೆ. ಭಾರತದಲ್ಲಿ ಗಣ್ಯರು ಅನೇಕ ವಿಭಿನ್ನ ಸಮೂದಾಯಗಳಲ್ಲಿ ಹಂಚಿಹೋಗಿದ್ದರು. ಈ ಗಣ್ಯರ ಮನೋವೃತ್ತಿಗಳು ಹಿಂದಿನವರ ಮನೋವೃತ್ತಿ ಮತ್ತು ಆಶೋತ್ತರಗಳಿಗಿಂದ ಭಿನ್ನವಾಗಿವಿ. ಅಲ್ಲದೆ ಪ್ರತಿಗಣ್ಯರ ಸಮೂಹ ಒಂದೊಂದು ನಿರ್ಧಿಷ್ಟ ಸಮೂದಾಯಕ್ಕೆ ಸೀಮಿತವಾಗಿರಬಹುದು. ಮತ್ತು ಅವರ ಧ್ಯೇಯೋದ್ದೇಶಗಳು ನಿರ್ಧಿಷ್ಟವಾಗಿ ಸೀಮಿತವಾಗಿರಬಹುದು.

## 28.3 ಪರಿವರ್ತನೆಯ ಮಾದರಿ (ನಮೂನೆ)

ಆಧುನೀಕರಣ ಸಮಾಜ ಕೈಗಾರಿಕ ಪೂರ್ವ ಕೃಷಿ ಪ್ರಧಾನ ಸ್ಥಿತಿಯಿಂದ ಕೈಗಾರಿಕ ಪ್ರಧಾನ ಸ್ಥಿತಿಗೆ ಬದಲಾಗುವುದನ್ನು ಮತ್ತು ಅದರ ದೆಸೆಯಿಂದ ಪಾತ್ರಸ್ಥಾನಮಾನಗಳಲ್ಲಿ, ನಿಯಮಾವಳಿಗಳಲ್ಲಿ ಮೌಲ್ಯಗಳು, ದೂರದೃಷ್ಟಿ ಮತ್ತು ಸಂರಚನೆಯಲ್ಲಿನ ಬದಲಾವಣೆಗಳನ್ನು ಸೂಚಿಸುವ ಒಂದು ವಿಶಿಷ್ಟ ಮಾದರಿ ವ್ಯವಸ್ಥೆ(paradigm)ಯಾಗಿದೆ. ಅನೇಕ ಸಮಾಜಶಾಸ್ತ್ರಜ್ಞರ ಸಮೂಹಗಳು ಈ ನಮೂನೆ ಅಥವಾ ಮಾದರಿಗೆ ಸಂಬಂಧಿದಂತೆ ಪ್ರಶ್ನಾವಳಿಗಳನ್ನು ರೂಪಿಸಿ, ದೇಶಗಳ ಗಡಿಗಳನ್ನು ಮೀರಿ, ವಿವಿಧ ಸಂಸ್ಕೃತಿಗಳಲ್ಲಿ ಸಂಶೋಧನೆ ನಡೆಸಿದ್ದಾರೆ. ಈ ವಿಧಾನ ಒಬ್ಬರಾಗಿದ್ದಾರೆ. ಈ ಪರಿವರ್ತನೆಯನ್ನು ಪ್ರತಿನಿಧಿಸಲು ಅವರು, ನಗರೀಕರಣ, ಅಕ್ಷರತೆ, ಸಮೂಹ ಮಾಧ್ಯಮ ಮತ್ತು ರಾಜಕೀಯ ಪಾಲ್ಗೊಳ್ಳುವಿಕ ಸಂಬಂಧಸಿದಂತೆ ಅನೇಕ ಸಂಬಂಧಿಕ ಸೂಚಕ (indices)ಗಳನ್ನು ರೂಪಿಸಿದ್ದಾರೆ. ಇವು ಸಾಮಾಜಿಕ ಪರಿವರ್ತನೆಯನ್ನು ಬಿಂಬಿಸುತ್ತವೆ. ಡೇನಿಯಲ್ ಲರ್ನರ್‌ವರು ಇದು ಒಂದು ಸ್ಥಿರ ಅಥವಾ ಸ್ಥಾವರ (static)

ಪರಿಕಲ್ಪನೆ ಎಂದು ವಾದಿಸಿ, ಅನುಭೂತಿ (empathy )ಎಂಬ ಮನಶಾಸ್ತ್ರೀಯ ಪದವನ್ನು ಬಳಕೆ ಮಾಡಿದ್ದಾರೆ. ಬದಲಾಗುವ ಜೀವನಶೈಲಿಗೆ ಬೇಕಾದ ಕಲ್ಪನಾ ಶಕ್ತಿನ್ನು ಪರೀಕ್ಷಿಸಲು ಈ ಪದ ಸಹಾಯಮಾಡುತ್ತದೆ. ಇದು ಸಮಾಜ ಯಾವ ದಿಕ್ಕಿನಲ್ಲಿ ಮುನ್ನಡೆಯುತ್ತಿದೆ ಎಂಬುದನ್ನು ಕೋರಿಸುತ್ತದೆ.

ಲರ್ನರವರು ಅನುಭೂತಿಯು ಒಬ್ಬ ವ್ಯಕ್ತಿ ತನ್ನನ್ನೂ ತಾನು ತನ್ನಗಲ್ಲಿದ ಬೇರೆ ಸನ್ನಿವೇಶದಲ್ಲಿ ಅಥವಾ ಪಾತ್ರದಲ್ಲಿ ಕಲ್ಪಿಸಿಕೊಳ್ಳಲು ಸಮರ್ಥನನ್ನಾಗಿ ಮಾಡಲು ಮತ್ತು ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳಲು ಸಮರ್ಥನನ್ನಾಗಿ ಮಾಡುತ್ತದೆ ಎಂದು ತಿಳಿಸುತ್ತಾರೆ. ಇವರು ಬಳಸಿಕೊಂಡ ಪ್ರಶ್ನಾವಳಿ ಈ ಮುಖ್ಯ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿತು.

- ನಿನ್ನನ್ನು ಒಂದು ವೃತ್ತ ಪತ್ರಿಕೆಯ ಸಂಪಾದಕನನ್ನಾಗಿ ಮಾಡಿದರೆ, ನೀನು ಯಾವ ಬಗೆಯ ವೃತ್ತ ಪತ್ರಿಕೆಯನ್ನು ಪ್ರಚಾರ ಪಡಿಸುತ್ತಿ ದ್ದು?
- ಒಂದು ವೃತ್ತಪತ್ರಿಕೆ ಏನನ್ನು ಹೇಳಬೇಕಾಗಿದೆ ಎಂದು ತಿಳಿಯದೇ ಹೋದಾಗ ನಿನಗೆ ಯಾವ ಅಂಶ ಗೊತ್ತಾಗುವುದಿಲ್ಲ ಎಂದು ನಿನಗೆ ಅನ್ನಿಸುತ್ತದೆ?
- ನಿನ್ನನ್ನು ಒಂದು ರೇಡಿಯೋ ಕೇಂದ್ರದ ಜವಾಬ್ದಾರಿ ವಹಿಸಿಕೊಟ್ಟರೆ ಯಾವ ರೀತಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಿಚ್ಛಿಸುತ್ತೀಯಾ?

ಅನೇಕರು ತಮ್ಮನ್ನು ತಾವು ಈ ಉನ್ನತ ಹುದ್ದೆ (ಸಂಪಾದಕರು/ ಸನ್ನಿವೇಶಗಳಲ್ಲಿ ಕಲ್ಪಿಸುವ ಬದಲು ಆತ್ಮಹತ್ಯೆ ಮಾಡಿಕೊಳ್ಳುವುದು ವಾಸಿ ಎಂದು ಯೋಚಿಸಿದ್ದರು:ಸಂಶೋಧಕರ ಮುಖ್ಯ ಕೆಲಸ ಅನುಭೂತಿ ಮತ್ತು ಜೀವನದ ಆಧುನೀಕೃತ ಶೈಲಿಗಳಿಗಿರುವ ಸಂಬಂಧಗಳ ಮಟ್ಟವನ್ನು ಅಳೆಯುವುದಾಗಿದ್ದಿತು. ಇದರ ಉದ್ದೇಶ ನಗರದ, ಅಕ್ಷರಸ್ಥ ಪಾಲ್ಗೊಳ್ಳುವಿಕೆ ಸ್ವಭಾವದ ಅನುಭೂತಿ ಲಕ್ಷಣವುಳ್ಳ ಜನರು. ಈ ಯಾವುದೇ ಲಕ್ಷಣಗಳೂ ಇರದ ವ್ಯಕ್ತಿಗಳಿಗಿಂದ ಭಿನ್ನವಾಗಿದ್ದರೆ ಎಂದು ತೋರಿಸುವುದಾಗಿದ್ದಿತು. ಸಾಂಪ್ರದಾಯಿಕವಾಗಿ, ಮನುಷ್ಯ ಸಾರ್ವಜನಿಕ ವಿಷಯಗಳು ತನಗೆ ಸಂಬಂಧಿಸಿದ್ದಲ್ಲೆ ಎಂದು ಸ್ವಭಾವತಹ ಭಾವಿಸಿದ್ದನು. ಆದರೆ ಅನುಭೂತಿಯು ಆತ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವಂತೆ ಮಾಡುತ್ತದೆ. ಇದು ಆಧುನಿಕತೆಯ ಶ್ರೇಷ್ಠ ಲಕ್ಷಣವಾಗಿದೆ. ಲರ್ನರವರು ಇದನ್ನು ಪ್ರತಿನಿಧಿಸಲು ಆಧುನೀಕರನ್ನಾದ ವರ್ಗೀಕರಣವನ್ನು ವೃದ್ಧಿಪಡಿಸಿದ್ದಾರೆ.

ಇಲ್ಲಿ ಪ್ರಥಮ ದರ್ಜೆಯವರು ವಿಶಿಷ್ಟವಾಗಿ ಅಕ್ಷರಸ್ಥ ನಗರವಾಸಿಯಾದ , ಮಾಧ್ಯಮಗಳಲ್ಲಿ ಪಾಲ್ಗೊಳ್ಳುವವರಾಗಿದ್ದಾರೆ ಮತ್ತು ಅನುಭೂತಿದಾರರಾಗಿದ್ದಾರೆ. ಅಕ್ಷರಸ್ಥರಲ್ಲಿ ನಗರಗಳಲ್ಲಿ ವಾಸಿಸುವವರು ಹೆಚ್ಚಾಗಿ ಅಭಿಪ್ರಾಯಗಳನ್ನು ಬೆಳೆಸಿಕೊಳ್ಳುವವರಾಗಿದ್ದಾರೆ ಗ್ರಾಮೀಣ ಅನಕ್ಷರಸ್ಥರಲ್ಲಿ, ಮಾಧ್ಯಮಗಳ ಪ್ರಭಾವಕ್ಕೆ ಒಳಗಾದವರು ಹೀಗೆ ಒಳಗಾಗದವರಿಗಿಂದ ಹೆಚ್ಚಾಗಿ ಹೆಚ್ಚಿನ ಅಂಕಗಳನ್ನು ಪಡೆದವರಾಗಿದ್ದರು. ಅಂದರೆ ಉತ್ತಮ ದರ್ಜೆಗೆ ಸೇರಿದವರಾಗಿದ್ದರು. 5ನೇ ದರ್ಜೆಯವರನ್ನು 4ನೇ ದರ್ಜೆಯವರಿಂದ ಬೇರ್ಪಡಿಸುವ ಅಂಶಗಳು, ಅವೈಯಕ್ತಿಕ ವಿಷಯಗಳಲ್ಲಿ ತೀವ್ರ ಆಸಕ್ತಿ ತೋರುವಿಕೆ, ಮತ್ತು ಅಭಿಪ್ರಾಯ ರೂಢಿಸುವಿಕೆಯಲ್ಲಿ ಪಾಲ್ಗೊಳ್ಳುವಂತಹ ಆಳವಾದ ಆಸೆಯಾಗಿದೆ. ಇಲ್ಲಿ ಅನುಭೂತಿಯು ಮನೋಧರ್ಮ ಮತ್ತು ಇಷ್ಟಾರ್ಥಗಳನ್ನು ಪ್ರತಿನಿಧಿಸುತ್ತದೆ. 'ಇಲ್ಲಿ ಇದು ಪರಿವರ್ತನೆಯನ್ನು ಸೂಚಿಸುವ ಅಂಶವಾಗಿದೆ. ಮಧ್ಯಪ್ರಾಚ್ಯದ ಜನರು ಬೇರೆಯವರಿಗಿಂತ ಮಿಗಿಲಾಗಿ ಯಾವುದೇ ಅಭಿಪ್ರಾಯಗಳನ್ನು ಮೂಡಿಸುವ ಬಗ್ಗೆ ಎಂದೂ ಆಲೋಚನೆ ಮಾಡಿರಲಿಲ್ಲ. ಇದು ಎಲ್ಲ ಸೂಚ್ಯಂಕಗಳಿಗೆ ಸಂಬಂಧಿಸಿದಂತೆ ಪೌರಾತ್ಯ ಮತ್ತು ಪಾಶ್ಚಾತ್ಯ ಸಮಾಜಗಳಿಗಿರುವ ವೈರುದ್ಯತೆಗಳನ್ನು ತೋರ್ಪಡಿಸುತ್ತದೆ.

## 28.4 ಆಧುನೀಕರಣದಲ್ಲಿ ಗಣ್ಯರ ಪಾತ್ರ

**ಪೀಠಿಕೆ :** ಇಂದಿನ ಸಮಕಾಲಿನ ಸಮಾಜಗಳ ಗುಣಲಕ್ಷಣವನ್ನು ಸಂಕೇತಿಸುವ ಮಾಡರ್ನ ಆಧುನಿಕ(modern) ಎಂಬ ಪದವು ಆರನೇ ಶತಮಾನದ ಲ್ಯಾಟಿನ್ ಭಾಷೆಯಲ್ಲಿ ಬಳಕೆಯಲ್ಲಿದ್ದ ಪದವಾಗಿದೆ. ಈ ಪದವು ಮೊದಲಿಗೆ ಲ್ಯಾಟಿನ್ ಭಾಷೆಯಲ್ಲಿ ನಂತರ

ಇಂಗ್ಲೀಷಿನಲ್ಲಿ ಮತ್ತು ಇತರ ಭಾಷೆಗಳಲ್ಲಿ ಸಮಕಾಲಿನ ಮತ್ತು ಪ್ರಾಚೀನ ಬರಹಗಾರರು ಮತ್ತು ಅವರ ಬರಹದ ವಸ್ತು ವಿಷಯವನ್ನು ಪ್ರತ್ಯೇಕಿಸಿ ನೋಡುವ ಉದ್ದೇಶದಿಂದ ಬಳಸಲ್ಪಡುತ್ತಿದ್ದಿತು. ಮತ್ತು 17ನೇ ಶತಮಾನದ ವೇಳೆಗೆ , ಆಧುನಿಕತೆ, ಆಧುನೀಕರಣ ಮಾಡು.......... ಮತ್ತು ಆಧುನೀಕರಣ ಪದಗಳು(moderning, Modernizer, Modernizations)ಗಳು ಬಗೆ ಬಗೆಯ ಸಂಗತಿಗಳನ್ನು ಸೂಚಿಸಲು ಬಳಸಲ್ಪಡಲಾರಂಭಿಸಿದವು ಆಧುನಿಕತೆಯು ವಿವಿಧ ಶತಮಾನಗಳ ನಡುವೆ ಸಂಭವಿಸಿದ, ರಾಜಕೀಯ. ಆರ್ಥಿಕ, ಮತ್ತು ಸಾಮಾಜಿಕಾಭಿವೃದ್ಧಿಯ ಲಕ್ಷಣಗಳನ್ನು ಸೂಚಿಸಲು ಬಳಸಲ್ಪಟ್ಟರೆ, ಆಧುನೀಕರಣವು ಈ ವ್ಯವಸ್ಥೆಗಳು ಈ ಲಕ್ಷಣಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆಗೆ ಅನ್ವಯವಾಗುತ್ತದೆ.

ಅಲ್ಲದೆ ಪರಂಪರೆ ಮತ್ತು ಆಧುನಿಕತೆಗಳು , ಪಾತ್ರ, ಮೌಲ್ಯಗಳು ಮತ್ತು ನಿಯಮಾವಳಿಗಳನ್ನು ರೂಪಿಸುವ ಎರಡು ವಿಭಿನ್ನ ಹೆಗ್ಗುರುಗಳಿಗೆ ಅನ್ವಯವಾಗುತ್ತವೆ. ಇವು ಸಂಪನ್ಮೂಲಗಳನ್ನು ಮತ್ತು ನಿರ್ದೇಶನೀಯತೆ (orientation)ಸೂಚಿಸುತ್ತವೆ. ಆಧುನಿಕ ಮತ್ತು ಪರಂಪರೆ, ಉನ್ನತ ಆಮೂರ್ತೀಕರಣದ ಹಂತಗಳಲ್ಲಿ ತಮ್ಮ ಪ್ರಸಕ್ತತೆಯನ್ನು ಕಳೆದುಕೊಂಡರೂ , ವಿಶ್ಲೇಷಣಾತ್ಮಕವಾಗಿ ಅವುಗಳನ್ನು ಸಮರ್ಪಕವಾಗಿ ಅರಿತು ಕೊಳ್ಳಲು ನೆರವಾಗುವಂತೆ ಪ್ರತ್ಯೇಕಿಸಬಹುದಾಗಿದೆ.

ಇಲ್ಲಿ ನಮ್ಮ ಉದ್ದೇಶ ಆಧುನೀಕರಣದ ವಾಹಕಗಳಾಗಿ ಗಣ್ಯವರ್ಗದವರು ಯಾವ ಪಾತ್ರವನ್ನು ನಿರ್ವಹಿಸುತ್ತಾರೆ ಎಂಬುದನ್ನು ಅರಿತುಕೊಳ್ಳವುದಾಗಿದೆ.

## ಆಧುನಿಕ ,ವೈಚಾರಿಕತೆ ಮತ್ತು ಗಣ್ಯವರ್ಗ

## Modernity, Rationalism and Elite

ಸಮಾಜ ವಿಜ್ಞಾನಗಳಲ್ಲಿ 'ಪರಂಪರೆ' ಮತ್ತು 'ಆಧುನಿಕ ' ಗಳನ್ನು ವಿಭಜಿಕಗಳಾಗಿ ನೋಡುವ ಮನೋವೃತ್ತಿ ಕಂಡು ಬರುತ್ತದೆ. ಪರಂಪರೆ, ಸಾಮಾಜಿಕ ಪರಿವರ್ತನೆ ಅಡ್ಡಿಯನ್ನುಂಟು ಮಾಡುವ ಅಂಶ ಎಂದು ಪರಿಗಣಿಸಲ್ಪಡುತ್ತದೆ. ಸತ್ಯೇಂದ್ರ ತ್ರಿಪಾಠಿಯವರು ಇದಕ್ಕೆ ತಮ್ಮ ಅಸಮ್ಮತಿ ವ್ಯಕ್ತಿಪಡಿಸುತ್ತಾರೆ. ಅವರು 66......ಯಾವುದೇ ಸಮಾಜದಲ್ಲಿ ಬದಲಾವಣೆಗಳನ್ನು ಸೃಷ್ಟಿಸುವ ಮತ್ತು ಅವುಗಳನ್ನು ಸ್ವಲ್ಪಮಟ್ಟಿಗ. ಸ್ವೀಕರಿಸುವ ಮನೋಧರ್ಮವು ಅದರ ಪರಂಪಾರಾನುಗತ "ಸಂರಚನೆಯಲ್ಲಿ ಮತ್ತು ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವಾಭಾವಿಕವಾಗಿ ಅಡಕವಾಗಿರುತ್ತದೆ.

### ಮೂಲ ವಿಭಜನೀಕರಣ **Basic Typolgy**

| ವಿಧ | ಅಕ್ಷರತೆ | ನಗರೀಕತೆ | ಮಾಧ್ಯಮ | ಅನುಭೂತಿ | ಅಭಿಪ್ರಾಯ |
|---|---|---|---|---|---|
| ಆಧುನಿಕ | + | + | + | + | 1 |
| ಪರಿವರ್ತನಾಶೀಲ ಅ | - | + | + | + | 2 |
| ಆ | - | - | + | + | 3 |
| ಇ | - | - | - | | 4 |
| ಪಾರಂಪರಿಕ ಅಥವಾ ಸಾಂಪ್ರದಾಯಿಕ | - | - | | | 5 |

ಅನೇಕತಜ್ಞರು, ಆಧುನೀಕರಣದ ಯಾವುದೇ ವ್ಯಾಖ್ಯೆಯ ಆರಂಭಿಕ ಅಂಶವು ಸಮಾಜದ ಲಕ್ಷಣವಲ್ಲ ಬದಲಾಗಿಸ ವ್ಯಕ್ತಿಯ ಲಕ್ಷಣವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. (ಸಿರಿಲ್ ಬ್ಲಾಕ್, ಆರ್ನಾಲ್ಡ್ ಆಯಂಡರ್‌ಸನ್, ಎಡ್ವರ್ಡ್ ಶಿಲ್ಸ್, ಡೇವಿಡ್. ಮ್ಯಾಕ್ಲೆ ಲ್ಯಾಂಡ್ ಮತ್ತು ಇತರರು)

ಅವರು (ಗಣ್ಯರು:Elite)ಸಿದ್ಧಾಂತ , ಸ್ವರೂಪ ಮತ್ತು ಸಮಾಜದ ಸಂಪನ್ಮೂಲಗಳನ್ನು ಅನುಸರಿಸಿ, ಬೇರೆ ಬೇರೆಯಾಗಿರಬಹುದು. ಆಧುನೀಕರಣ ಪ್ರಕ್ರಿಯೆ ಉಂಡಾಗುವ ಸಂದರ್ಭದಲ್ಲಿ ಗಣ್ಯರು ವಿಶೇಷ ಪಾತ್ರವನ್ನು ನಿರ್ವಹಿಸುತ್ತಾರೆ. ಏಕೆಂದರೆ ಅವರು ಮುಕ್ತತೆ ಅಥವಾ ಸ್ವಾತಂತ್ರ್ಯದ ಸಂಸ್ಕೃತಿಯನ್ನು ವಿಶೇಷ ಒಲವುಳ್ಳವರಾಗಿರುತ್ತಾರೆ. ಅದೇ ಸಂದರ್ಭದಲ್ಲಿ ಅವರು ಅವರು ಸಮಾನತಾವಾದದ ಮನಸ್ಸುಳ್ಳ, ಸಾರ್ವಜನಿಕದ ಪ್ರಭಾವಕ್ಕೆ ಬಹಳ ಸುಲಭವಾಗಿ ಒಳಗಾಗುತ್ತಾರೆ.

ಗಣ್ಯರು ಅಂದರೆ ಇಂಗ್ಲೀಷಿನ ಇಲೈಟ್ಸ್ (Elites) ಎಂಬ ಪದವು ಅನೇಕ ಸಮಾಜಶಾಸ್ತ್ರಜ್ಞರಿಂದ ಸಾಮಾಜಿಕ ಸಂಗತಿಗಳನ್ನು ಕುರಿತು ಅರಿತು ಕೊಳ್ಳವಲ್ಲಿ ಬಳಕೆ ಮಾಡಲ್ಪಟ್ಟಿದೆ. ಪ್ಯಾರೆಟೋರವರು ಔನ್ನತ್ಯ ಅಥವಾ ಶ್ರೇಷ್ಠತೆಗೆ ಅಥವಾ ವರಿಷ್ಠತೆಯನ್ನು (inperiority) ಸೂಚಿಸಲು ಬಳಸಿದ್ದಾರೆ. "ಸಮಾಜದಲ್ಲಿನ ವರಿಷ್ಠ ಅಥವಾ ಗಣ್ಯರೆಂದರೆ ನಾನು ಅತ್ಯಂತ ಗಣನೀಯ ಪ್ರಮಾಣದಲ್ಲಿ, ಬುದ್ಧಶಕ್ತಿ, ಗುಣ, ಕುಶಲತೆ, ಮತ್ತು ಯಾವುದೇ ತರಹದ ಸಾಮರ್ಥ್ಯಗಳನ್ನು ಪಡೆದುಕೊಂಡಿರುವ ಜನ"ಎಂದು ಅವರು ತಿಳಿಯಪಡಿಸಿದ್ದಾರೆ. ಗೀಟನೋ ಮೋಸಿಯಾ ಅವರು ತಮ್ಮ 'ಆಡಳಿತ ವರ್ಗದ ಸಿದ್ಧಾಂತ'ದಲ್ಲಿ ಗಣ್ಯರು ಪರಿಕಲ್ಪನೆಯನ್ನು 'ಆಳುವ ಗಣ್ಯರು'ಎಂಬ ಅರ್ಥವನ್ನು ನೀಡುತ್ತಾರೆ. ಅವರ ಪ್ರಕಾರ ಎಲ್ಲ ಸಮಾಜಗಳಲ್ಲೂ -ಅಸಮಾಜಗಳು, ಪ್ರಾಚೀನ ಅಥವಾ ಮುಂದುವರಿದ ಸಮಾಜಗಳಿರಬಹುಗ್ , ಎರಡು ವರ್ಗಗಳ ಜನರು ಅಥವಾ ಆಡಳಿತಕ್ಕೊಳಪಡುವ ವರ್ಗ.

[ಗೀಟನೋ ದೋಸಿಯಾ:ಓ ೨ಲಿಂಗ್ ಕ್ಲಾಸ್1939]

ಕಾರ್ಲ್‌ಮಾನ್ ಹೀಮ್‌ರವರು ಗಣ್ಯರು ಪರಿಕಲ್ಪನೆಯನ್ನು ಸಿದ್ಧಾಂತ, ಯೋಜನೆ ಮತ್ತು ಸಾಮಾಜಿಕ ವ್ಯವಸ್ಥೆಗಳೊಡನೆ ಅದು ಹೊಂದಿರುವ ಸಂಬಂಧದ ಆಧಾರದ ಮೇಲೆ ಅರ್ಥೈಸಿದ್ದಾರೆ. ಅವರು ಈ ಮುಂದೆ ಸೂಚಿಸುವ ಗಣ್ಯರ ಮುಖ್ಯವಿಧಗಳನ್ನು ವರ್ಗೀಕರಿಸಿದ್ದಾರೆ. ಬುದ್ಧಿಶಾಲಿಗಳು ಅಥವಾ ಮೇಧಾವಿಗಳು, ರಾಜಕೀಯ, ನೈತಿಕ ಮತ್ತು ರಾಜಕೀಯ ಗಣ್ಯರು ಎಂದು ವಿಂಗಡಿಸಿದ್ದಾರೆ. ಇವರ ಆಸಕ್ತಿ ಗಣ್ಯರ ಸಮೂಹದ ವಾಸ್ತವತೆ ಮತ್ತು ಘನತೆಯನ್ನು ಹಾಳುಗೆಡುವುಂತ ಅಂಶಗಳನ್ನು ಅಥವಾ ಶಕ್ತಿಗಳನ್ನು ಗುರುತಿಸುವುದಾಗಿದ್ದಿತು.

ಎಸ್.ಎಫ್.ನಾಡೆಲ್‌ರವರ ಪ್ರಕಾರ "ಗಣ್ಯರೆಂದರೆ, ಯಾವುದೇ ಕಾರಣಕ್ಕಾಗಲೀ ಸಮಾಜದಲ್ಲಿ ಉನ್ನತಸಾಧನದ ಹಕ್ಕನ್ನು ಸ್ಥಾಪಿಸುವವರಾಗಿದ್ದು ಮತ್ತು ಸಮುದಾಯದ ಸ್ಥಿತಿಗತಿಯ ಮೇಲೆ ಸಾಕಷ್ಟು ಪ್ರಮಾಣದ ಪ್ರಭಾವವನ್ನು ಬೀರಬಲ್ಲಂತಹ, ಜನಸಂಖ್ಯೆಯ ಒಂದು ಸ್ತರ ಅಥವಾ ವರ್ಗವಾಗಿದೆ" ಎಂದು ವ್ಯಾಖ್ಯೆ ಮಾಡಿದ್ದಾರೆ. (ಇವರು ಆಫ್ರಿಕಾದ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಲ್ಲಿನ ಸಾಮಾಜಿಕ ಗಣ್ಯರು ಎಂಬ ಪರಿಕಲ್ಪನೆಯನ್ನು ಕುರಿತು ಚರ್ಚಿಸುವಾಗ ಈ ಅರ್ಥ ವಿವರಣೆ ಮಾಡಿದ್ದಾರೆ)ಪ್ಯಾರೆಟೊ ಮತ್ತು ಇತರ ರಾಜಕೀಯ ಶಾಸ್ತ್ರಜ್ಞರು ನೀಡುವ ವಿವರಣೆಗಿಂತ ನಾಡೆಲ್‌ರವರು ನೀಡಿರುವ ವ್ಯಾಖ್ಯೆಯನ್ನು ಬಳಕೆ ಮಾಡಿದರೆ, ನಾವು ಆಗ ಗಣ್ಯರು ಪರಿಕಲ್ಪನೆಯ ಸಮಾಜದಲ್ಲಿನ ಪ್ರಾಮುಖ್ಯತೆಯನ್ನು ಅರಿಯಬಹುದಾಗಿದೆ. ಇವರು ಆಧುನಿಕ ಬದಲಾವಣೆಗೆಗೆ ಒಳಗಾಗುತ್ತಾರೆ. ಅಥವಾ ಆಧುನೀಕರಣ ಮತ್ತು ಅಭಿವೃದ್ಧಿಗಳ ಪ್ರಭಾವವನ್ನು ಅನುಭವಿಸುತ್ತಾರೆ. ಅಭಿವೃದ್ಧಿಯ ಸನ್ನಿವೇಶದಲ್ಲಿ ಹೊಸ ತಂತ್ರಗಳಿಗೆ ಮತ್ತು ಕುಶಲತೆಗಳಿಗೆ ಹೆಚ್ಚಿನ ಮಹತ್ವ ನೀಡಬೇಕಾಗುತ್ತದೆ. ನಾಡಲ್‌ರವರು........ ಇದು ಇಡೀ ಸಾಮಾಜಿಕ ಔನ್ನತ್ಯದ ಅಥವಾ ಶ್ರೇಷ್ಠತೆಯ ಭಾವನೆಯಲ್ಲಿನ ಬದಲಾವಣೆ ಎಂಬ ಅರ್ಥ ಸೂಚಿಸುತ್ತದೆ. ಮತ್ತು ತತ್ಪರಿಣಾಮವಾಗಿ ಹೊಸಗಣ್ಯರ ಉಗಮವಾಗುತ್ತದೆ.

ಗಣ್ಯರು "ಇಡೀ ಸಮಾಜಕ್ಕೆ ಪ್ರಮಾಣಕಗಳನ್ನು ಒದಗಿಸುತ್ತಾರೆ;ಇವರ ಪ್ರಭಾವ ಅಥವಾ ಅಧಿಕಾರ ಅನುಸರಿಸಲು ಯೋಗ್ಯವಾದದ್ದು ಎಂದು ಪರಿಗಣಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ರೂಪದರ್ಶಿಯದಂತಿರುತ್ತದೆ. ಈ ಅರ್ಥದಲ್ಲಿ ಯಾವುದೇ ಸ್ಥಾಪಿತ ಗಣ್ಯ ಸಮೂಹವು ಹೊಸ ಅಭಿವೃದ್ಧಿಯನ್ನು ಸುಗಮಗೊಳಿಸುವ ಅಥವಾ ಅದಕ್ಕೆ ಅಡ್ಡಿಯನ್ನುಂಟು ಮಾಡುವ ಸಾಮರ್ಥ್ಯ ಉಳಿದ್ದಾಗಿರುತ್ತದೆ ಮತ್ತು ಸಾಮಾನ್ಯವಾಗಿ ಹೊಸಭಾವನೆ-ಸಂಗತಿಗಳು ಸಮೂಹ ಮಟ್ಟದಲ್ಲಿ ಸ್ವೀಕೃತವಾಗುವಂತೆ ಮಾಡುವ ಪ್ರಭಾವವನ್ನು ಬೀರುತ್ತದೆ.

ಉದಾರವಾದಿ ಸಿದ್ಧಾಂತ ಚೌಕಟ್ಟಿನಲ್ಲಿ ಆಧುನಿಕಗೊಳಗಾಗುತ್ತಿರುವ ಸರ್ವಾಧಿಕಾರತ್ವದಲ್ಲಿ ಗಣ್ಯರ ಪಾತ್ರವೇನೆಂಬುದನ್ನು ಅರಿತುಕೊಳ್ಳಬಹುದಾಗಿದೆ. ಅವರ ಪಾತ್ರ ಸಮಾಜದ ಸ್ವರೂಪದ ಆಧಾರದ ಮೇಲೆ ಬೇರೆ ಬೇರೆಯಾಗಿರುತ್ತದೆ-ಜಾತ್ಯತೀತ-ವಿಮೋಚನಾ ಮಾದರಿ(seculer-liberation model) ಅಥವಾ ಪವಿತ್ರ ಸಮಷ್ಠಿ ಮಾದರಿಯಾಗಿರಬಹುದು(severall collectisvisdty model) ವರ್ತನೆಯಲ್ಲಿ ಜಾತ್ಯಾತೀತ-ವಿಮೋಚನಾ ಮಾದರಿಯು ಎರಡು ಬಗೆಯ ಸಾಮರ್ಥ್ಯಗಳನ್ನುಳ್ಳ ಘಟಕಗಳಿಂದ ಕೂಡಿರುತ್ತದೆ.

- ತರ್ಕ ಮಾಡುವ ಅಥವಾ ವಿಚಾರ ಮಾಡುವ ಇಲ್ಲವೇ ಕಾರಣ ಹುಡುಕುವ ಸಾಮರ್ಥ್ಯ.
- ಸ್ವಂತ ಹಿತಾಸಕ್ತಿಗಳನ್ನು ಅರಿಯುವ ಸಾಮರ್ಥ್ಯ.

ಸಂರಚನೀಯವಾಗಿ ಸಾಮಾಜಿಕ ವ್ಯವಸ್ಥೆ ಅಥವಾ ಇನ್ನಾವುದೇ ವ್ಯವಸ್ಥೆಯು ವೈಚಾರಿಕತೆಯ ಬಳಕೆಗೆ ಮತ್ತು ಸ್ವಂತ ಹಿತಾಸಕ್ತಿಗಳ ಪೂರೈಕೆ ಗರಿಷ್ಠ ಅವಕಾಶ ನೀಡಬೇಕಾಗುತ್ತದೆ.

ಮತ್ತೊಂದು ರೀತಿಯಲ್ಲಿ ಪವಿತ್ರ ಸಮಷ್ಠಿ ಮಾದರಿ ಮೂರು ಅಂಶಗಳನ್ನು ಒಳಗೊಂಡಿರುತ್ತದೆ. ವರ್ತನಾತ್ಮಕವಾಗಿ ಇದು ಅಥವಾ ಗುಪ್ತಚೇತನ 'ಸಮರ್ಥತೆ'ಯನ್ನು ಏಕೈಕ ಮುಖ್ಯ ಲಕ್ಷಣವಾಗಿ ಹೊಂದಿರುವ ಘಟಕಗಳಿಂದ ಕೂಡಿರುತ್ತದೆ. ಉದಾ:ವ್ಯಕ್ತಿಗಳನ್ನು ಸಾಮರ್ಥ್ಯತುಂಬಿದವರು ಅಥವಾ ಸುಪ್ತ ಚೇತನ ಪೂರಿತ ವ್ಯಕ್ತಿಗಳಲ್ಲದೆ ಬೇರೆ ಏನಾಗಿದ್ದರೆಂದು ಕಾಣುವುದಿಲ್ಲ. ಸಂರಚನೀಯವಾಗಿ ರಾಜಕೀಯ ಸಮುದಾಯವು ಈ ಸುಪ್ತಚೇತನವನ್ನೂ ಒಂದು ಬಗೆಯ ಸಾಮಾಜಿಕ ಬದುಕಿಗೆ ಮುಖ್ಯ ಆಧಾರವಾಗಿದೆ. ನಿಯಮಾತ್ಮಕವಾಗಿ ಪವಿತ್ರ-ಸಮಷ್ಠಿಯು ಒಂದು ನೀತಿಯುತವಾದ (moral or ethical) ಘಟಕವಾಗಿದೆ. ಹೀಗೆ ಒಂದು ಸಾಮಾಜಿಕ ವ್ಯವಸ್ಥೆಯ ನೈತಿಕತೆಯು ಬಂಧುತ್ವ, ರಾಜಕೀಯ ತತ್ವ ಅಥವಾ ಉನ್ನತ ಧ್ಯೇಯೋದ್ದೇಶಗಳಿಗೆ ಅನ್ವಯವಾಗುತ್ತದೆ. ಈ ಮಾದರಿಯು ಜನರಲ್ಲಿನ ಐಕ್ಯತೆಗೆ ಮಹತ್ವ ನೀಡುತ್ತದೆಯೋ ಹೊರತು ಅವರ ವೈವಿದ್ಯತೆ ವಿಭಿನ್ನತೆಗಳನ್ನಲ್ಲಿ ಇದು ಬಾವನೆ ಅಥವಾ ತತ್ವಗಳು ಮುಕ್ತವಾಗಿ ಹರಡುವುದರ ಆಧಾರವನ್ನು ಅವಲಂಬಿಸಿರುವುದಿಲ್ಲ. ಬದಲಾಗಿ, ಕೆಲವು ರಾಜಕೀಯ ಮತ್ತು ಆರ್ಥಿಕ ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸುವಲ್ಲಿ ಶಿಸ್ತಿನ ಕ್ರಮ ಅನುಸರಿಸುವುದರ ಮೂಲಕ ಉಂಟಾಗುತ್ತದೆ. ಇದು 'ಉನ್ನತ'(higher) ರೂಪದ ನೈತಿಕತೆಯನ್ನು ಎತ್ತಿ ಹಿಡಿಯುತ್ತಾದೆ. ಏಕೆಂದರೆ ಸಾಮಾಜಿಕ ಜೀವನವು ಸಮಷ್ಠಿಯ ಅನುಕೂಲತೆಯ ಕಡೆ ನಿರ್ದೇಶಿತವಾಗಿರುತ್ತದೆಯೋ ಹೊರತು. ಸ್ವಯಂ ವ್ಯಕ್ತಿಯ ಯೋಗ ಕ್ಷೇಮದ ಕಡೆಗಷ್ಟೇ ಅಲ್ಲ.

ಈ ಎರಡು ಧ್ರುವಗಳ ನಡುವೆ, ಅನೇಕ ಸಮಾಜಗಳಿರಬಹುದು. ಇವುಗಳು ಈ ಎರಡೂ ಮಾದರಿಗಳ ಲಕ್ಷಣಗಳನ್ನು ಹೊಂದಿರಬಹುದು. ಜಾತ್ಯಾತೀತ ಅಥವಾ ಧರ್ಮ ನಿರಪೇಕ್ಷ ಮಾದರಿಯಲ್ಲಿ. ಇದನ್ನೂ ಸಂಧಾನ ಅಥವಾ ಮನವೊಲಿಸುವ, ಮನಸ್ತಾಪ ನಿವಾರಣಾ ವ್ಯವಸ್ಥೆ (reconciliation systemsd) ಎಂದೂ ಹೇಳಲಾಗುತ್ತದೆ. ಸರಿಯಾದ ಮೌಲ್ಯಗಳು ಮತ್ತು ಧ್ಯೇಯೋದ್ದೇಶಗಳನ್ನು ಅಳವಡಿಸಿಕೊಂಡರೆ, ನ್ಯಾಯ ಬದ್ಧ ಮನ್ನಣೆಯನ್ನು ರೂಪಿಸಿಕೊಳ್ಳಬಲ್ಲುದು. (legitimate authority) ವ್ಯಕ್ತಿಗಳು ಮತ್ತು ಸಮೂಹಗಳ ನಡುವಿನ ಘರ್ಷಣೆ ರಾಜಕೀಯ ವ್ಯವಸ್ಥೆ ಅಥವಾ ಸರ್ಕಾರದ ವ್ಯವಸ್ಥೆಯ ಬೆಳವಣಿಗೆಗೆ ಕಾರಣವಾದ , ಅಂಗೀಕೃತ ಮೌಲ್ಯಗಳ ಸಮರ್ಥನೆಗೆ ಅವಕಾಶ ಮಾಡಿಕೊಡುತ್ತದೆ. ರಾಜಕೀಯ ವ್ಯವಸ್ಥೆ ಹೀಗೆ ಮೌಲ್ಯಗಳ ಸಮರ್ಥನೆಗೆ ಅವಕಾಶ ಮಾಡಿಕೊಡುತ್ತದೆ: ಈ ಪವಿತ್ರ ಮಾದರಿಯಲ್ಲಿ ಹೀಗೆ ಮೌಲ್ಯಗಳ ಸಬಲೀಕರಣ ಮಾಡುತ್ತದೆ. ಈ ಪವಿತ್ರ ಮಾದರಿಯಲ್ಲಿ ಇದನ್ನೂ ಚಲನೀಕೃತ ವ್ಯವಸ್ಥೆ ಎಂದೂ ಕರೆಯಲಾಗುತ್ತದೆ-ಹೊಸ ಮೌಲ್ಯಗಳ ಸೃಷ್ಟಿಯಾಗುತ್ತಿರುತ್ತದೆ. ಅಂದರೆ ರಾಜಕೀಯ ಗಣ್ಯರು ಅಧಿಕಾರದ ನೈತಿಕ ವ್ಯವಸ್ಥೆಯನ್ನು ಅಥವಾ ಆಧಾರವನ್ನು ರೂಪಿಸಲು ಯತ್ನಿಸುತ್ತಾರೆ ಎಂದರ್ಥ ಈ ಎರಡು ಮಾದರಿಗಳು ನಡುವೆ ಕೆಲವು ಕುತೂಹಲಕಾರೀ ಸಂಯೋಜಿತ ವ್ಯವಸ್ಥೆಗಳು ಕಂಡು ಬರುತ್ತವೆ. ಆಧುನೀಕೃತ (ಸರ್ವಾಧಿಕಾರತ್ವ)ನಿರಂಕುಶಾಧಿಕಾರಿ ವ್ಯವಸ್ಥೆ, ಮಿಲಿಟರಿ ಅಥವಾ ಸೈನ್ಯಾಧಿಕಾರಿ ಮಿತ ತಂತ್ರಜನಾಡಳಿತ ವ್ಯವಸ್ಥೆ (military orig) ಮತ್ತು ನವ-ವಾಣಿಜ್ಯೋದ್ಯಮ ಅಥವಾ ಶ್ರೀಮಂತ ಸಮಾಜ(neo-merchantilist)ಇವುಗಳು ಇಂತಹ ಸಂಯೋಜಿತ ವ್ಯವಸ್ಥೆಗಳಾಗಿವೆ.

ಆಧುನೀಕೃತ ಸರ್ವಾಧಿಕಾರತ್ವ ಅಥವಾ ನಿರಂಕುಶಾಧಿಕಾರತ್ವ (modernizing autocracy)ವು ರಾಷ್ಟ್ರವನ್ನೂ ಪ್ರತಿನಿಧಿಸುವ

ಸರ್ವಾಧಿಕಾರಿ ಅಥವಾ ಯಾವುದೇ ಒಂದು ಅಂಶಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಸಿದ್ಧಾಂತವನ್ನು ಮೂಲಕ ಹಂಚಿ ಹೋಗಿದ್ದರೂ ಕೂಡ, ಉನ್ನತ ಮಟ್ಟದಲ್ಲಿ ಅಂದರೆ ಸರ್ವಾಧಿಕಾರಿಯಲ್ಲಿ ಕೇಂದ್ರೀಕೃತವಾಗಿರುತ್ತದೆ.

ಮಿಲಿಟರಿ ಮಿತ ಜನಾಡಳಿತ ವ್ಯವಸ್ಥೆಯಲ್ಲಿ ಶ್ರೇಣೀಕೃತ ಅಧಿಕಾರ ಮೌಲ್ಯಗಳಿದ್ದರೂ ಕೂಡ. ಒಬ್ಬ ಮಿಲಿಟರಿ ಅಥವಾ ಸೈನ್ಯಾಧಿಕಾರಿ (ರಾಜನ ಅಥವಾ) ದೊರೆಯ ಸ್ಥಾನದಲ್ಲಿರುತ್ತಾನೆ. ಇವರ ಕುತೂಹಲಕಾರೀ ಅಂಶವೆಂದರೆ ರಾಜಕೀಯವನ್ನು ಮಾಡಲು ಇದು ಅಸಮರ್ಥವಾಗಿರುವುದಾಗಿದೆ.

ನವ-ಶ್ರೀಮಂತಾಡಳಿತ ವ್ಯವಸ್ಥೆಯು ಒಬ್ಬ "ಅಧ್ಯಕ್ಷ ಸಾಮ್ರಾಟ" (presidential monarch)ನನ್ನು ಹೊಂದಿರುತ್ತದೆ. ತನ್ನ ಅಧಿಕಾರವನ್ನೂ ಸಮರ್ಥಿಸಿಕೊಳ್ಳಲು ಇದು ತೀವ್ರ ವೈಚಾರಿಕ ಕೃತ ಆರ್ಥಿಕ ಚಟುವಟಿಕೆಗಳೇ ರಾಜಕೀಯವಾಗುಳ್ಳ ಸಾರ್ವಜನಿಕ ಮತ್ತು ಖಾಸಗೀ ಉದ್ಯಮಗಳನ್ನು ಬಳಕೆ ಮಾಡಿಕೊಳ್ಳುತ್ತದೆ.

ಸಂಪ್ರದಾಯ ಬದ್ಧ ಸಮಾಜಗಳಲ್ಲಿ ಆಧುನೀಕರಣದ ನೇರ ಪ್ರಭಾವವು ಆಧುನೀಕರಣ ಪ್ರಕ್ರಿಯೆಯ ಜೊತೆಗೂಡಿದ ಹೊಸ ಪಾತ್ರಗಳ ರೂಪುಗೊಳ್ಳುವಿಕೆಯಲ್ಲಿ ಕಂಡು ಬರುತ್ತದೆ. ಕೆಲವು ಹೊಸ ಪಾತ್ರಗಳು ಭಾಗಷಃ ಹೊಸದಾಗಿದ್ದು. ಸಾಂಪ್ರದಾಯಿಕ ಪಾತ್ರಗಳನ್ನು ಬಿನ್ನವಾಗಿರುತ್ತದೆ ಆಧುನೀಕರಣ ಹೆಚ್ಚದಂತೆ ಸಾಂಪ್ರದಾಯಿಕ ಪಾತ್ರಗಳನ್ನು ಮೀರಿ ನಿಲ್ಲುವುದಕ್ಕೆ ಮತ್ತು ಹೊಸ ಪಾತ್ರಗಳನ್ನೂ ಅಳವಡಿಸಿಕೊಳ್ಳವುದಕ್ಕೆ ಅನುಕಾಲವಾಗುವ ರೀತಿಯಲ್ಲಿ ಅಧಿಕಾರ ಮತ್ತು ಘನತೆಯ ಶ್ರೇಣೀಕೃತ ವ್ಯವಸ್ಥೆ ವಿಶಾಲವಾಗಿರ ಬೇಕಾಗುತ್ತದೆ. ಇಲ್ಲದೇ ಹೋದಗೆ ಹೊಸ ಶ್ರೇಣೀಕೃತ ವ್ಯವಸ್ಥೆ ಅದನ್ನೂ ನಿವಾರಿಸಿ ಅಸ್ಥಾನವನ್ನು ತಾನು ಆಕ್ರಮಿಸಿಕೊಳ್ಳುತ್ತದೆ. ಆಧುನೀಕರಣ ಪ್ರಕ್ರಿಯೆಯಿಂದ ರೂಪುಗೊಳ್ಳುವ ಸ್ತರ ವಿನ್ಯಾಸ ವ್ಯವಸ್ಥೆಯ ಮತ್ತೊಂದು ಬಹು ಮುಖ್ಯ ಲಕ್ಷಣವೆಂದರೆ, ಗಣ್ಯ ವರ್ಗ ಮತ್ತು ಅಂತಸ್ತಿನ ಸಮೂಹಗಳ (ಸ್ತರಗಳು, ವರ್ಗಗಳು) ನಡುವೆ ಮತ್ತು ವಿವಿಧ ಬಗೆಯ ಗಣ್ಯರ ನಡುವೆ ಸಂಬಂಧಗಳು ಹೆಚ್ಚು ವಿರಳಗೊಳ್ಳುವುದಾಗಿದೆ. ಅಥವಾ ಈ ಸಂಬಂಧಗಳು ಹೆಚ್ಚಿನ ಮಟ್ಟದಲ್ಲಿ ಕಡಿದು ಹೋಗುತ್ತವೆ.

ಈ ಎಲ್ಲ ಕ್ಷೇತ್ರಗಳಲ್ಲೂ ಅನೇಕ ಸಂಸ್ಥೆಗಳ ಕ್ಷೇತ್ರಗಳಲ್ಲಿ ಮುಖ್ಯಸ್ಥರಾಗಿರುವಂತಹ ಸದಸ್ಯರನ್ನುಳ್ಳ ಸಮೂಹಗಳು ಅಥವಾ ವರ್ಗಗಳು ಬೆಳೆದು ಬರುತ್ತವೆ. ಆದರೆ, ಇವರು ಒಂದು ನಿರ್ದಿಷ್ಟ ಸ್ತರ ಅಥವಾ ವರ್ಗಗಳ ಸದಸ್ಯರಾಗಿಯಷ್ಟೇ ಉಳಿದುಕೊಳ್ಳುವುದಿಲ್ಲ. ಇದು ಅಧಿಕಾರಶಾಹಿ (bureau crats) ವರ್ಗದವರಿಗೆ, ಆರ್ಥಿಕ ಉದ್ಯಮಶೀಲವರ್ಗದವರಿಗೆ, ಸೇನಾವ್ಯವಸ್ಥೆಯಲ್ಲಿನವರಿಗೆ , ಬುದ್ಧಿ ಜೀವಿಗಳಿಗೆ ಮತ್ತುತ ರಾಜಕೀಯ ಗಣ್ಯರಿಗೆಲ್ಲಾ ಏಕರೀತಿಯಲ್ಲಿ ಅನ್ವಯವಾಗುತ್ತದೆ.

ಈ ರೀತಿಯ ವಿಶಿಷ್ಟ ಗಣ್ಯ ಸಮೂಹಗಳ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರೀಯ ಹಂತಗಳಲ್ಲಷ್ಟೇ ಬೆಳೆದು ಬರುವುದಿಲ್ಲ ಬದಲಾಗಿ, ಸ್ವಲ್ಪ ವಿಭಿನ್ನರೀತಿಯಲ್ಲಿ ಸ್ಥಳೀಯ ಅಥವಾ ಕೆಳ ಹಂತಗಳಲ್ಲಿ ಬೆಳೆದು ಬರುತ್ತವೆ. ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ (ಸಾಮೂದಾಯಿಕ) ನಾಯಕತ್ವವು ಮಧ್ಯಮ ಮತ್ತು ಕೆಳ ನಗರ ಸ್ತರಗಳಲ್ಲಿ ಮತ್ತು ಗ್ರಾಮೀಣ ಸ್ತರಗಳಲ್ಲಿ ಎಂದಿಗೂ ಕೂಡ ಸಾಂಪ್ರದಾಯಿಕ ವಂಶಪಾರಂಪರ್ಯವಾಗಿ ಬರುವ ಸ್ಥಾನಗಳಷ್ಟೇ ಆಗಿ ಉಳಿಯುವುದಿಲ್ಲ.

ಆದರೆ ಒಂದು ರೀತಿಯಲ್ಲಿ ವಿವಿಧ ಗಣ್ಯ ಸಮೂಹಗಳು ವ್ಯಾಪಕ ಅಂತಸ್ತಿನ ಸಮೂಹಗಳಿಂದ ನಿರಂತರವಾಗಿ ಬೇರ್ಪಟ್ಟು, ಹೆಚ್ಚು ಹೆಚ್ಚು ಸ್ವಾಯತ್ತವಾಗ ತೊಡಗಿದಂತೆ, ಈ ಗಣ್ಯ ಸಮೂಹಗಳ ಒಳಗೆ ನಿರಂತರ ವಿಭಿನ್ನೀಕರಣ ಉಂಟಾಗ ತೊಡಗುತ್ತದೆ. ಈ ರೀತಿಯ ಒಂದು ವಿಭಿನ್ನೀಕರಣವು ಹೆಚ್ಚು ಸಾಮಾನ್ಯವಾದ ಸಮಷ್ಟಿ ಅಥವಾ ಸಾಂಸ್ಕೃತಿಕ, ನಿರ್ದಿಷ್ಟ ವಲ್ಲದ ಗುರಿಗಳನ್ನು ಹೊಂದಿರುವವರು ಮತ್ತು ತಮ್ಮ ಪದೋನ್ನತಿ (kpromotion) ಉಂಟುಮಾಡುವಂತಹ ಚಟುವಟಿಕೆಗಳಲ್ಲಿ ತೊಡಗಿರುವವರ ನಡುವೆ ಸಂಭವಿಸುತ್ತದೆ. ಅನೇಕ ಚಿನ್ಹೆಗಳು ಮತ್ತು ಐಕ್ಯತೆಗಳು ಅಂದರೆ ರಾಜಕೀಯ , ಬೌದ್ಧಿಕ (ವಿಶೇಷವಾಗಿ, ಅಕ್ಷರತೆ, ಪತ್ರಿಕೊದ್ಯಮದ) ಅಂಶಗಳು ಒಂದು ಕಡೆ ಮತ್ತು ಹೆಚ್ಚು ವಿಶಿಷ್ಟವಾದ ಅನೇಕ ಉದ್ಯೋಗಸ್ಥ, ತಾಂತ್ರಿಕ ಅಥವಾ ವ್ಯವಸ್ಥಾಪ ವರ್ಗದ ಅಂಶಗಳು ಇನ್ನೊಂದು ಕಡೆ. ಈ ವ್ಯಾಪಕ ವರ್ಗಗಳ ನಡುವೆ ಅಧಿಕ ರೀತಿಯ ವಿಭಿನ್ನೀಕರಣವನುಂಟಾಗುತ್ತದೆ. ತುಲನಾತ್ಮಕವಾಗಿ ನೋಡಿದರೆ, ಹೀಗೆ ಆಧುನೀಕರಣಕ್ಕೊಳ ಪಡುವ ಗಣ್ಯರ ಪ್ರಾಮುಖ್ಯತೆ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ. ಮತ್ತು ಒಂದೇ ಸಮಾಜದಲ್ಲಿ ಅದರ ಅಭಿವೃದ್ಧಿಯ ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಈ ರೀತಿಯ ಸಾಪೇಕ್ಷ ಪ್ರಕ್ರಿಯೆಯ ಗತಿಯ ಮೇಲೆ ಮಹತ್ವರ ಪ್ರಭವವನ್ನು ಬೀರುತ್ತದೆ.

ಹೊಸ ರಾಜ್ಯಗಳ ಗಣ್ಯರಲ್ಲಿ ಆಧುನಿಕ ಎಂದರೆ, ಚಲನಾಶೀಲ, ಜನರ ಬಗೆಗೆ ಕಾಳಜಿ ಇರುವ, ಪ್ರಜಾಸತ್ತಾತ್ಮಕ ಮತ್ತು ಸಮಾನತೆಯ ಭಾವನೆಯ , ಆರ್ಥಿಕವಾಗಿ ಮುಂದುವರಿದಿದ್ದು. ಸರ್ವತಂತ್ರ ಸ್ವತಂತ್ರರಾಗಿದು ಪ್ರಭಾವ ಬೀರುವ ಅಂಶವಾಗಿದೆ.

ಆಧುನಿಕ ಸಮಾಜಗಳು ಎಲ್ಲ ವಿಷಯಗಳಿಗಿಂತ ಮಿಗಿಲಾಗಿ, ಚಲನಾಶೀಲವಾಗಿರಬೇಕಾಗುತ್ತದೆ. ಆಧುನಿಕವಾಗಿರಬೇಕಾದರೆ, ಗಣ್ಯವರ್ಗವಾಗಿ, ಬದಲಾವಣೆಗೆ ಅಂಜಬಾರದು. ಬದಲಾಗಿ ಪರಿವರ್ತನೆಯನ್ನುಂಟುಮಾಡಲು ಶ್ರಮಿಸಬೇಕಾಗುತ್ತದೆ. ಅದು ತಾನು ಹೇಗಿರುತ್ತದೆಯೋ ಹಾಗೆಯೇ ಮುಂದುವರಿಯಲು ಇಚ್ಛಿಸುವುದಿಲ್ಲ. ಅದು ಹಿಂದಿನ ಸರ್ಕಾರ ಅಥವಾ ಇಚ್ಛೆಯ ವಿರುದ್ಧವಾಗಿರುತ್ತದೆ. ಅಲ್ಲದೆ ದೇಶದ ಹಿಂದಿನ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ಸಂದರ್ಭದಲ್ಲೂ ಕೂಡ. ಅದು ವರ್ತಮಾನಕ್ಕೆ ದೇಶ ತನ್ನನ್ನು ತಾನು ಹೊಂದಿಸಿಕೊಳ್ಳಬೇಕಾದ ಆಗತ್ಯವನ್ನು ಒತ್ತಿ ಹೇಳುತ್ತದೆ. ಹೊಸರಾಜ್ಯಗಳ ಗಣ್ಯವರ್ಗಕ್ಕೆ ಸಂಬಂಧಿಸಿದ ಒಂದು ಗುಣವಿಶೇಷಣವು "ಚಲನಾಶೀಲತೆ" (dynamic)ಯಾಗಿದೆ. ಗಣ್ಯರು ತಮ್ಮ ಚಲನಶೀಲಗುಣದ ಬಗ್ಗೆ ಹೆಮ್ಮೆಪಡುತ್ತಾರೆ. ಮತ್ತು ಜನಸಂಖ್ಯೆಯ ಹೆಚ್ಚಿನಪಾಲು ಜನರು ಅದನ್ನು ತಮ್ಮಿಂದ ಬಯಸುತ್ತಾರೆ. ಎಂದು ತಿಳಿಯುತ್ತಾರೆ. ಏನೇ ವಿಷಯವಿರಲಿ, ಬದಲಾವಣೆಯ ಮಹತ್ವ ಅವರು ಹೆಚ್ಚಿನ ಬೆಲೆನೀಡುತ್ತಾರೆ. (ಎಡ್ವರ್ಡ್ ಶಿಲ್ಸ್, ಪೊಲಿಟಿಕಲ್ ಡೆವಲಪ್‌ಮೆಂಟ್ ಇನ್ ದಿ ನ್ಯೂಸ್ಟೇಟ್)

ಈ ಸಾಮ್ರಾಜ್ಯಗಳ ವಿವಿಧ ಗಣ್ಯವರ್ಗಗಳು ಸಾಮಾಜಿಕ ಅಥವಾ ಸಾಂಸ್ಕೃತಿಕ , ರಾಜಕೀಯ ಬದಲಾವಣೆಗಳನ್ನು ಎಷ್ಟೇ ಪ್ರಧಾನವಾಗಿ ಅನುಷ್ಠಾನಗೊಳಿಸಲು ಪ್ರಯತ್ನಿಸಿದರೂ ಈ ಬದಲಾವಣೆಗಳ ಆಯಾ ಸಮಾಜಗಳ ವ್ಯವಸ್ಥೆಯಲ್ಲಿ ಸ್ತಂಭವಿಸಲೇ ಬೇಕಾಗಿದ್ದು ಬದಲಾವಣೆಗಳಾಗಿದ್ದು ಇವುಗಳನ್ನು ಈ ಗಣ್ಯವರ್ಗದವರು ಅಥವಾ ಆಡಳಿತ ವರ್ಗದವರು ಬೇರೆಯವರಿಗಿಂದ ಉತ್ತಮ ರೀತಿಯಲ್ಲಿ ಪ್ರತಿನಿಧಿಸಿದ್ದಾರೆ ಅಥವಾ ಅವುಗಳನ್ನು ಸಮರ್ಪಕರೀತಿಯಲ್ಲಿ ಅರ್ಥೈಸಿದ್ದಾರೆ ಎಂದು ಹೇಳಬಹುದು. ಈ ಬದಲಾವಣೆಗಳ ಅಗತ್ಯ ಆಯಾ ಸಮಾಜಗಳಾಗಿದ್ದರೂ ಕೂಡ ಹಿಂದಿನ ಆಡಳಿತ ವ್ಯವಸ್ಥೆ ಬದಲಾವಣೆ ನಿರ್ದೇಶಿತವಾಗಿಲ್ಲದ ಕಾರಣ ಮತ್ತು ತನ್ನ ನಿರ್ಧಿಷ್ಟ ಸಾಮಾಜಿಕ ವ್ಯವಸ್ಥೆಗಿಂದ, ಅಸ್ತಿತ್ವದಲ್ಲಿದ್ದು ವಿಶ್ವ ಸಾಮಾಜಿಕ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಗಮನ ನೀಡುವಂತಹುದಾದ್ದರಿಂದ ಈ ಬದಲಾವಣೆಗಳು ಸಂಭವಿಸುವುದು ಸಾಧ್ಯವಾಗಿರಲಿಲ್ಲ ಎಂದು ಹೇಳಬಹುದು . ಅಲ್ಲದೆ ಈ ರೀತಿಯ ಪರಂಪರೆಯನ್ನು ಅರ್ಥೈಸಿ ಮುಂದುವರಿಸಿಕೊಂಡು ಹೋಗುವುದು ಪಾರಂಪರಿಕ ಗಣ್ಯವರ್ಗದವರ ಕೈಯಲ್ಲಿ ಸಂಪೂರ್ಣವಾಗಿದ್ದು. ಅವರೇ ಸಮಾಜದ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರಗಳ ಏಕಸ್ವಾಮ್ಯವನ್ನು ಹೊಂದಿದ್ದ ಕಾರಣ, ಸಮಾಜ ಬಯಸುವ ಬದಲಾವಣೆಗಳು ಸಂಭವಿಸುವ ಅವಕಾಶಗಳುಂಟಾಗಿರಲೇ ಇಲ್ಲ.

ಕೇಂದ್ರದಲ್ಲಿ ಈ ಬಗೆಯ ಬದಲಾವಣೆಗಳು ಮತ್ತು ಅಭಿವೃದ್ಧಿಗಳು ಉಂಟಾಗುತ್ತಿದ್ದುದರ ಜೊತೆ ಜೊತೆಯಲ್ಲೇ ಈ ಸಮಾಜಗಳ ವ್ಯಾಪಕವರ್ಗದ ಜನರಲ್ಲಿ ಅನೇಕ ಆಧುನೀಕರಮದ ಪುನಃ (ಅಥವಾ ಮನೋಧರ್ಮಗಳ) ಮತ್ತು ಪ್ರಕ್ರಿಯೆಗಳ ಬೆಳವಣಿಗೆಯೂ ಆಗುತ್ತಿದ್ದಿತು. ಆಧುನೀಕರಣದ ಪ್ರವೃತ್ತಿಯನ್ನು ರೂಢಿಸಿಕೊಂಡ ಈ ವ್ಯಾಪಕ ಸಮೂಹಗಳಲ್ಲಿ ಅನೇಕ "ಮಧ್ಯವರ್ತಿ ಸಮೂಹ"ಗಳೆಂದು ಕರೆಸಿಕೊಳ್ಳುವ ಸಮೂಹಗಳು ಸೇರಿವೆ. ಅದರಲ್ಲೂ ನಗರ ಸಮೂಹಗಳು ವಿಶೇಷವಾಗಿವೆ. ಮತ್ತು ಕೆಲವು ಶ್ರೀಮಂತ ಹಾಗೂ ಮೇಲ್ವರ್ಗದ ಕೃಷಿಕ ಸಮೂಹಗಳೂ ಸೇರಿವೆ. ಈ ವ್ಯಾಪಕ ಸಮೂಹಗಳಲ್ಲಿ ಆರಂಭದಲ್ಲಿ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹೆಚ್ಚು ಕ್ರಿಯಾ ಶೀಲರಾಗಿದ್ದು ಅನೇಕ ಮಾಧ್ಯಮಿಕ ಗಣ್ಯ ವರ್ಗಗಳಲ್ಲಿ ಆಧುನೀಕರಣದ ಅಂತಃಪ್ರೇರಣೆಗಳನ್ನು ಗುರುತಿಸಲ್ಪಟ್ಟಿದವು. ಇಂತಹ ಗಣ್ಯ ವರ್ಗದವರಲ್ಲಿ ಹೆಚ್ಚು ಮುಖ್ಯರಾದವರೆಂದರೆ ಪುನರುಜ್ಜೀವನತ (renaissance) ಸಮಯದಲ್ಲಿ ಯೂರೋಪಿನಾದ್ಯಂತ ಬೆಳೆದು ಬಂದ ಕ್ರಿಯಾಶೀಲ ಬುದ್ಧಿಜೀವಿಗಳ ಸಮೂಹಗಳು, ಪ್ರಾಟೆಸ್ಟೆಂಟ್ ಸಮೂಹಗಳು ಮತ್ತು ವ್ಯಾಪಾರ, ಬ್ಯಾಂಕಿಂಗ್ ಮತ್ತು ಮೊದಲ ಕೈಗಾರಿಕೆಗಳನ್ನು ಆರಂಭಿಸಿದ ಬಹಳ ಕ್ರಿಯಾಶೀಲರಾದ, ಉದ್ಯಮಶೀಲರಾದ ಆರ್ಥಿಕ ಸಮೂಹಗಳಾಗಿವೆ.

ಇವರು ಆರಂಭದಲ್ಲಿ ಬೆಳೆದು ಬಂದ ಉನ್ನತ ಮಟ್ಟದ ವಿಭಿನ್ನೀಕರಣ ಮತ್ತು ತಂತ್ರಜ್ಞಾನದ ಫಲವಾಗಿ ಬೆಳೆದು ಬಂದ ಆರ್ಥಿಕಭಿವೃದ್ಧಿಯ ಅವಕಾಶಗಳನ್ನು ಸರಿಯಾಗಿ ವಿಸ್ತರಿಸಿದರು ಅಥವಾ ಬಳಕೆ ಮಾಡಿಕೊಂಡ ಅಭಿವೃದ್ಧಿ ಸಾಧಿಸತೊಡಗಿದರು. ಆರ್ಥಿಕ ಕ್ಷೇತ್ರದಲ್ಲಿ ಸಂಭವಿಸಿದ ಪ್ರಮುಖ ಬದಲಾವಣೆಯೆಂದರೆ. ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಕ್ಷೇತ್ರದ ತ್ವರಿತ ಬೆಳವಣಿಗೆ ಮತ್ತು ಬೆಳವಣಿಗೆ ಹೊಂದುತ್ತಿದ್ದ ಮಾರುಕಟ್ಟೆಯ ಆರ್ಥಿಕತೆಯೊಂದಿಗೆ ಅದರ ಸಂಪರ್ಕವವನ್ನೇರ್ಪಡಿಸಿದುದಾಗಿದೆ.

ಹೆಚ್ಚು ಕ್ರಿಯಾಶೀಲರಾದ ಈ ಆಧುನೀಕರಣಕ್ಕೊಳಪಡುತ್ತಿರುವ ಗಣ್ಯವರ್ಗದವರ ವಿಶಿಷ್ಟ ಪ್ರವೃತ್ತಿಗಳ ಜೊತೆಗೆ ಜೊತೆಗೆ ಸಮಾಜದ ವ್ಯಾಪಕ ಸ್ತರಗಳಲ್ಲಿ ಅದರಲ್ಲೂ ವಿಶೇಷವಾಗಿ ನಗರದ ಮಧ್ಯಮ ಮತ್ತು ಕಾರ್ಮಿಕ ವರ್ಗದವರಲ್ಲಿ ಹೆಚ್ಚು ಸ್ವತಂತ್ರವಾದ ಆಧುನೀಕರಣದ ಪ್ರವೃತ್ತಿಗಳು ಬೆಳೆದು ಬರತೊಡಗಿದವು. ಈ ಪ್ರವೃತ್ತಿ ಅಥವಾ ಒಲವುಗಳು ಆರಂಭದಲ್ಲಿ ಧಾರ್ಮಿಕ ಬದಲಾವಣೆಗಳ ಆಧಾರದ ಮೇಲೆ ರೂಪುಗೊಂಡಿದ್ದವು (ಉದಾ:ಮೆಥಾಸಿಸ್ಟ್ ಮತ್ತು ಇತರ ಚರ್ಚಿನ ತತ್ವಗಳಿಗೆ ಬದ್ಧರಾಗಿರದ ಸಮೂಹಗಳು) ಇವರು ವಿಸ್ತಾರಗೊಳ್ಳುತ್ತಿದ್ದು ಕೈಗಾರಿಕಾ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳತೊಡಗಿದರು. ಮತ್ತು ಅನೇಕ ಸಂಘಟನಾ ಮತ್ತು ಸ್ಥಳೀಯ ಸಂಸ್ಥೆಗಳ ಸಾಮೂಹಿಕ ಚಟುವಟಿಕಗಳಲ್ಲಿ ಭಾಗವಹಿಸಿ ತೊಡಗಿದರು. ಈ ಅಂಶಗಳ ದೆಸೆಯಿಂದ, ಈ ವ್ಯಾಪಕ ಸಮೂಹಗಳು ಮತ್ತು ಸ್ತರಗಳ ಜನರು ಆರ್ಥಿಕ ಮತ್ತು ಸೈದ್ಧಾಂತಿಕ ಕ್ಷೇತ್ರಗಳಲ್ಲಿ ಸಂಭವಿಸುತ್ತಿದ್ದ ಆಧುನೀಕರಣದ ಪ್ರಭಾವ ಮತ್ತು ಒಲವುಗಳಿಗೆ ಒಳಗಾಗ ತೊಡಗಿದರು. ಮತ್ತು ಕ್ರಮೇಣ ನಿಧಾನವಾಗಿ, ಹೊಸದಾಗಿ ರೂಪುಗೊಳ್ಳುತ್ತಿದ್ದ ಆರ್ಥಿಕ ಸಾಂಸ್ಕೃತಿಕ ವಲಯದ ಪ್ರಭಾವಕ್ಕೆ ಹಾಗೂ ಹೊಸ ಕೇಂದ್ರಿಯ ರಾಜಕೀಯ ಸಂಸ್ಥೆಗಳ ಪ್ರಭಾವಕ್ಕೆ ಒಳಗಾಗ ತೊಡಗಿದರು.

ಕ್ರಿಯಾಶೀಲ ಪ್ರಾಟೆಸ್ಟೆಂಟ್ ಸಮೂಹಗಳು ಮುಕ್ತತೆ (openness) ಮತ್ತು ಐಹಿಕತೆ (this worldly) ಗಳ ಸಂಯೋಜನೆಯಿಂದ ರೂಪುಗೊಂಡ ಲಕ್ಷಣಗಳನ್ನು ರೂಢಿಸಿಕೊಂಡಿದ್ದವು. ಆದ್ಯಾಗ್ಯೂ ಇಲ್ಲಿ ಅಂತಸ್ತಿನ ಅಂಶಗಳೇ ಸಂರಕ್ಷಣೆ ಮತ್ತು ಸಂಸ್ಥೀಕರಣವು ಅಸ್ತಿತ್ವದಲ್ಲಿದ್ದ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರಗಳ ಮುಕ್ತತೆಯ ಸರಳ ಸ್ವಭಾವವನ್ನು ಅವಲಂಬಿಸಿರುತ್ತವೆ ಎಂದು ಹೇಳಬಹುದು.

## ಗಣ್ಯವರ್ಗ ರೂಪುಗೊಳ್ಳವಿಕೆ ಮತ್ತು ಸಂರಚನೀಯ ದ್ವಂದ್ವತೆ

## F ite formation and structural duality

ಸಮಾಜದ ವ್ಯಾಪಕ ಸ್ತರಗಳ ಸಂರಚನೀಯ ದ್ವಂದ್ವತೆಯ ಈ ವಿವಿಧ ಅಭಿವ್ಯಕ್ತಿಗಳು ಮತ್ತು ವರ್ಗರಹಿತತೆಯು, ಅನೇಕ ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳಲ್ಲಿ ಘನೀಕೃತಗೊಳ್ಳಲಾರಂಭಿಸಿದ ಗಣ್ಯವರ್ಗದವರಲ್ಲಿ ಕಾಣಿಸಿಕೊಂಡ ಕೆಲವು ಪ್ರವೃತ್ತಿಗಳಿಗಿಂತ ಯಾವುದೇ ಮಟ್ಟದಲ್ಲಿ ಕಡಿಮೆ ಮಟ್ಟದವುಗಳಾಗಿರಲಿಲ್ಲ.

ಈ ರೀತಿಯ ಗಣ್ಯರ ಮತ್ತು ಅವರ ಪ್ರವೃತ್ತಿಯ ಎರಡು ಸ್ಥೂಲ ವಿಧಗಳ ಬಗೆಗೆ ಚರ್ಚೆ ಮಾಡಬಹುದಾಗಿದೆ. ಕೆಲವು ಸೇನೆ ಅಥವಾ ಸೈನಿಕ ಮತ್ತು ದೊಡ್ಡ ವ್ಯವಹಾರಸ್ಥ ಸಮೂಹಗಳ ಸೇರ್ಪಡೆಯೊಂದಿಗೆ ಹಳೆಯ ಮಿತಜನಾಡಳಿತ (origenely) ಗಣ್ಯ ಸಮೂಹಗಳ ಮುಂದುವರಿಕೆ ಮೊದಲನೆಯದಾಗಿದೆ. ಎರಡನೆಯದು ಇದರ ಜೊತೆ ಜೊತೆಗೆ ನಿರಂತರವಾದ ಸಾಮಾಜಿಕ ಚಲನೀಯಣದ ಫಲವಾಗಿ ಹೊಸದಾದ ಹೆಚ್ಚು ಜನಪ್ರಿಯರಾದ ಅಥವಾ ಜನಸಾಮಾನ್ಯರ ಪ್ರತಿನಿಧಿಯಾದ ಗಣ್ಯರ ವರ್ಗದ ಬೆಳವಣಿಗೆಯಾಗಿದೆ. ಇವರು ಹಳೆಯ ಪರಂಪರಾನುಗತ ಸಂಪ್ರದಾಯಸ್ಥ ಸಮೂಹಗಳು ಮತ್ತು ಹೆಚ್ಚು ಆಧುನಿಕ ಸಮೂಹಗಳಿಗೂ ಸೇರಿದವರಾಗಿದ್ದರು. ಈ ಎರಡೂ ಬಗೆಯ ಗಣ್ಯವರ್ಗಗಳು ಆಧುನೀಕರಣಕ್ಕೆ ಸಂಬಂಧಿಸಿದಂತೆ ದ್ವಂದ್ವ ಮನೋಧರ್ಮಗಳನ್ನು ಬೆಳೆಸಿಕೊಂಡಿದ್ದರು. ಆದರ ಇವರ ಈ ದ್ವಂದ್ವಮನೋಧರ್ಮ ಬಹುಮಟ್ಟಿಗೆ ಬೇರೆ ಬೇರೆಯಾಗಿದ್ದಿತು. ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳಲ್ಲಿದ್ದ ಹೆಚ್ಚು ಸಾಂಪ್ರದಾಯಸ್ಥ ಮಿತಜನಾದೇಶ ಗಣ್ಯವರ್ಗಗಳು (traditional origarchic elites) ಸಂಪ್ರದಾಯಸ್ಥ ಮಿಲಿಟರಿ ಕೂಟಗಳು ಮತ್ತು ಸಮೂಹಗಳೊಂದಿಗೆ ಸಂಬಂಧ ಬೆಳೆಸಿಕೊಂಡವು ಮತ್ತು ಹಿಂದಿನ ಕಾಲದಲ್ಲಿ ಹೆಚ್ಚು ಸರ್ವಾಧಿಕಾರಿ ಸಾಮ್ರಾಜ್ಯಗಳು ಬದಲಾವಣೆಯ ಬಗೆಗೆ ತೋರುತ್ತಿದ್ದ ಮತ್ತು ಸಂಕೀರ್ಣ ಮಾಧ್ಯಮುಗಳು ಮತ್ತು ಸಮೂಹ ಸಂವಹನ ಸಾಧನೆಗಳ ಸೌಲಭ್ಯವಿದ್ದರೂ ಹೆಚ್ಚಾಗುತ್ತಿರುವ ಸಾಮಾಜಿಕ ಚಲನೆಯ ಸನ್ನಿವೇಶದಲ್ಲಿ ಬೆಳೆದುಬಂದ ಅಂತಿಮ ಸಂಗತಿ ಎಂದರೆ ಸಾಮಾಜಿಕ ಸಾಂಕೇತಿಕತೆ (social symbolism) ಹೆಚ್ಚು ಜನ ಹಿಕಕಾರೀ ಗಣ್ಯವರ್ಗದವರು ಉತ್ತಮ ಜನಾಧರಣೆಯನ್ನು ಗಳಿಸಲು ಆಧುನೀಕೃತ ನೀತಿ ಧೋರಣೆಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಿದರು. ಆದರೆ ಅವರ ವಿಟಾನ ಆಧುನಿಕತೆಯನ್ನು ಎಷ್ಟು ಸಾಧ್ಯವೋ ಅಷ್ಟು ಸುಲಭ ರೀತಿಯಲ್ಲಿ ...ಂಟು ಮಾಡಲು ಪರ್ಯಾಯ ಮಾರ್ಗಗಳನ್ನು ಕಂಡು ಕೊಳ್ಳುವುದಾಗಿದ್ದಿತು. ಉದಾ:ಕೃಷಿ ಸುಧಾರಣೆಯ ಸಮಸ್ಯೆ ಇದು ಹೆಚ್ಚು ಅಭಿವೃದ್ಧಿಶೀಲ ಸುಧಾರಣ ಚಳುವಳಿಗಳಿಗೆ ರಹದಾರಿಯಾಗಿ ಪರಿಣಮಿಸಿತು. ಈ ಗಣ್ಯವರ್ಗದವರು ಅನೇಕ ಚಲನಶೀಲ ಅಥವಾ ಕ್ರಾಂದಿಕಾರಿ ನೀತಿ ಧೋರಣೆಗಳನ್ನು ಹೊಂದಿದ್ದರು. ಪರ್ಯಾಸವೆಂದರೆ ಈ ನೀತಿ, ಧೋರಣೆಗಳೇ ಈ ಪ್ರವರ್ತನಶೀಲ (ಪರಿವರ್ತನಶೀಲ) ಸಮಾಜಗಳ ಸಂರಚನೆಯ ದ್ವಂದ್ವತೆಗಳನ್ನು ಸಬಲಗೊಳಿಸುವ ಅಂಶಗಳಾಗಿದ್ದವು.

- ನಿಮ್ಮ ಪ್ರಗತಿ ಪರೀಕ್ಷಿಸಿ

1. ಭಾರತದಲ್ಲಿ ಆಧುನೀಕರಣ ಪ್ರಕ್ರಿಯೆಯಲ್ಲಿರುವ ಅಡಚಣೆಗಳನ್ನು ಪರೀಕ್ಷಿಸಿ.

2. ಭಾರತಕ್ಕೆ ವಿಶೇಷವಾಗಿ ಸಂಬಂಧಿಸಿದಂತೆ ಪರಿವರ್ತನೆಯ ಮಾದರಿಯನ್ನು ವಿಶ್ಲೇಷಿಸಿ.

3. ಆಧುನೀಕರಣಗಲ್ಲಿ ಗಣ್ಯರ ಪಾತ್ರವನ್ನು ಚರ್ಚಿಸಿ.

## 28.5 ಸಾರಾಂಶ

ಆಧುನೀಕರಣ ಹಾದಿಯಲ್ಲಿರುವ ಎಲ್ಲಾ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಬೆಳವಣಿಗೆ ಎಂಬುದು ಪ್ರಧಾನವಾದ ಅಂಶವಾಗಿದ್ದು ಆಧುನೀಕರಣಕ್ಕೆ ಅನೇಕ ಅಡಚಣೆಗಳು ಉಂಟಾಗುತ್ತವೆ. ಪಾಶ್ಚಮಾತ್ಯ ರಾಷ್ಟ್ರಗಳು ಸರಿಸುಮಾರು ಮೂರು ದಶಕಗಳಿಂದ ಕ್ರಮೇಣವಾಗಿ ಆಧುನೀಕರಣಗೊಂಡ ರೀತಿಯಲ್ಲಿಯೋ ಪೂರ್ವಾತ್ಯ ರಾಷ್ಟ್ರಗಳು ಆಧುನೀಕರಣವನ್ನು ಸಾಧಿಸುವುದು ಅಷ್ಟು ಸುಲಭದ ಮಾತಲ್ಲ. ಆಧುನೀಕರಣ ಉಂಟಾಗಬೇಕಾದರೆ ನಗರೀಕರಣವು ಬಹುಮುಖ್ಯವಾದ ಅಂಶವಾಗಿದೆ. ಕೈಗಾರಿಕೀರಣದ ಪ್ರಭಾವದಿಂದಾಗ ಇಡೀ ಸಮಾಜದ ಮೂಲಭೂತ ರಚನೆಯನ್ನು ಬದಲಾವಣೆಯನ್ನುಂಟು ಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ ಮಾನವ ಮತ್ತು ಭೂದರಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಉದಾಹರಣೆಗೆ, ಯಾವಾಗ ನೈಸರ್ಗಿಕ ಚಲನೆಯನ್ನು ಪಾಶ್ಚಿಮಾತ್ಯ ರಾಷ್ಟ್ರಗಳು ಪ್ರಾರಂಭಿಸಿದಾಗ ಭೂಮಿಯು ಮಾನವ ಮತ್ತು ಭೂದರದ ಪ್ರಮಾಣದಲ್ಲಿ ನೋಡಿದರೆ ಜನಸಂಖ್ಯಾ ಬಾಹುಳ್ಯವಾಗಿತ್ತು. ಅಂದಿನಿಂದ ಭೂಮಿಯಲ್ಲಿ ಜನಸಂಖ್ಯೆಯು ದ್ವಿಗುಣಗೊಂಡಿತು. ಆದರೆ ಮಾನವ ಮತ್ತು ಭೂ ಪ್ರಮಾಣವು ಮಾತ್ರ ಹಾಗೆಯೇ ಉಳಿಯಿತು.

## 28.6 ಪ್ರಮುಖ ಪದಗಳು

- **ಗಣ್ಯರು :** ಒಂದು ಗಣ್ಯ ವರ್ಗವು ಯಾವುದೇ ಕಾರಣಕ್ಕೆ ಶ್ರೇಷ್ಠತೆಯ ಸ್ಥಾನಮಾನವನ್ನುಗಳಿಸಿಕೊಂಡಿರುವ ಮತ್ತು ಇದರ ಸಲುವಾಗಿ ಸಮುದಾಯದ (ಹಣೆಬರಹ) ಅಥವಾ ಭವಿಷ್ಯದ ಮೇಲೆ ಸಾಕಷ್ಟು ಪ್ರಭಾವ ಬೀರಬಲ್ಲ ಸಮಾಜದ ಜನಸಂಖ್ಯೆಯ ಒಂದು ಸ್ತರವಾಗಿದೆ.

- **ಪರಂಪರೆ ಮತ್ತು ಆಧುನಿಕತೆ :** ಯಾವುದೇ ಸಮಾಜದಲ್ಲಿ ಬದಲಾವಣೆಗಳನ್ನು ಸೃಷ್ಟಿಸುವ ಮತ್ತು ಅವುಗಳನ್ನು ಸ್ವಲ್ಪಮಟ್ಟಿಗೆ, ಸ್ವೀಕರಿಸುವ ಮನೋಧರ್ಮವು ಅದರ ಪರಂಪರಾನುಗತ ಸಂರಚನೆಯಲ್ಲಿ ಮತ್ತು ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವಾಭಾವಿಕವಾಗಿ ಅಡಕವಾಗಿರುತ್ತದೆ.

## 28.7 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

1) 28.3 2) 28.4 3) 28.5

## 28.8 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1) ಆಧುನೀಕರಣದ ವಿವಿಧ ಅಡಚಣೆಗಳನ್ನು ವಿಶ್ಲೇಷಿಸಿ.

2) ಪರಿವರ್ತನಾ ನಮೂನೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

3) ಆಧುನೀಕರಣದಲ್ಲಿ ಗಣ್ಯರ ಪಾತ್ರವನ್ನು ಪರಿಶೀಲಿಸಿ.

- ಉತ್ತರಗಳು

1) 28.3 2) 28.4 3) 28.5

## 28.9 ಸಲಹಾ ಗ್ರಂಥಗಳು.


- **Eisendodt, S.N** : Modernisation, Protest and Change, New Delhi,k prentice Hall 1969.
- **Learner 'D'** : The Passing of Traditional Society, Glencoe, Free 1958.
- **Rudolph and Rduolph:** Modernity and Tradition, Chicago University Press, Chicago 1958.
- **Yogendra Singh** : Modernisatrion of Indian Tradition, Thomson Press, Delhi 1973.
- **Desai A.R.(ed)** : Modernisation in under develooped societies, Thacker, Bombay, 1971.
- **Singer Milton** : when great tradition modernises. Vikas, Delhi 1972.
- **Srinivas .M.N** : Social Chane in Modern India, Allied Publishes, Bombay 1968.
- **Eisensdatt, S.N** : Tradition, Change and Modernity, Wiley, New York 1973.




• ಡಾ. ಬಿ.ಎಸ್. ಪರೇಶ್‌ಕುಮಾರ್, ಸಮಾಜಶಾಸ್ತ್ರ ಪ್ರವಾಚಕರು (ನಿವೃತ್ತ) ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - 570 006.

# ಟಿಪ್ಪಣಿ

# Karnataka State Open University

Manasagangotri Mysore - 570 006




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary

- **HEAD QUARTERS**
- ★ **Total Study Centres : 111**
- ♣ **Regional Centres : 10**
- ❄ **B.Ed Study Centres : 10**
- ✢ **M.Ed Study Centres : 08**

ಆದೇಶ ಸಂಖ್ಯೆ : ಕ.ರಾ.ಮು.ವಿ./ಅ.ಸಾ.ವಿ./2-1438/2011-2012 ದಿನಾಂಕ : 30.11.2011
ಒಳಪುಟ : 60 GSM ಮ್ಯಾಪ್ಲಿತೊ ಕಾಗದ ಮತ್ತು ರಕ್ಷಾಪುಟ : 170 GSM ಆರ್ಟ್ ಕಾರ್ಡ್
ಮುದ್ರಕರು : ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು – 560 070 ಪ್ರತಿಗಳು :3000




VOP-14-60-3000